Downloaded From:www.kpscvaani.com

ವಾರ್ಷಿಕ ಚಂದಾ ರೂ.25/-

ಜನಪದ

ಸಂಪುಟ–10 • ಸಂಚಿಕೆ–02 • ನವೆಂಬರ್ 2026



ಭುವನೇಶ್ವರಿಯ ಮಡಿಲಲ್ಲಿ ಕನ್ನಡದ ವೈಭವ

Downloaded From:www.kpscvaani.com



ಬೆಂಗಳೂರಿನ ಗಾಂಧಿ ಭವನದಲ್ಲಿ ನಡೆದ ಮಹಾತ್ಮ ಗಾಂಧೀಜಿಯವರ 157ನೇ ಜಯಂತಿ ಸಮಾರಂಭದಲ್ಲಿ ಡಾ. ವೂಡೇ ಪಿ. ಕೃಷ್ಣ ಅವರಿಗೆ ಮುಖ್ಯಮಂತ್ರಿ ಡಿ.ಕೆ. ಶಿವಕುಮಾರ್ ಅವರು 'ಗಾಂಧಿ ಸೇವಾ ಪ್ರಶಸ್ತಿ–2026' ಪ್ರದಾನ ಮಾಡಿದರು. ಸಚಿವರಾದ ರಿಜ್ವಾನ್ ಅರ್ಷದ್, ಎಚ್.ಸಿ. ಬಾಲಕೃಷ್ಣ, ಗಾಂಧಿ ಭಾರತ ಶತಮಾನೋತ್ಸವ ಸಮಿತಿ ಅಧ್ಯಕ್ಷರಾದ ಎಚ್.ಕೆ. ಪಾಟೀಲ್, ನಿವೃತ್ತ ನ್ಯಾಯಮೂರ್ತಿ ಟಿ.ಜಿ.ಶಿವಶಂಕರಗೌಡ, ಕರ್ನಾಟಕ ರಾಜ್ಯ ಮದ್ಯಪಾನ ಸಂಯಮ ಮಂಡಳಿ ಅಧ್ಯಕ್ಷರಾದ ಶರಣಪ್ಪ ಸಲಾದಪುರ, ವಾರ್ತಾ ಮತ್ತು ಸಾರ್ವಜನಿಕ ಸಂಪರ್ಕ ಇಲಾಖೆ ಸರ್ಕಾರದ ಕಾರ್ಯದರ್ಶಿ ಜೆ. ಮಂಜುನಾಥ್, ಆಯುಕ್ತರಾದ ಎಂ.ಎನ್.ಅನುಚೇತ್ ಮತ್ತಿತರರು ಉಪಸ್ಥಿತರಿದ್ದರು.



ಪಿರಿಯಾಪಟ್ಟಣ ತಾಲ್ಲೂಕಿನಲ್ಲಿ ನಡೆದ ಪ್ರಜಾಸೇವೆ ಉಪಕ್ರಮದ "ಬಾಗಿಲಿಗೆ ಬಂತು ಸರ್ಕಾರ, ಸೇವೆಗೆ ಇರಲಿ ಸಹಕಾರ" ಕಾರ್ಯಕ್ರಮದಲ್ಲಿ ಮುಖ್ಯಮಂತ್ರಿ ಡಿ.ಕೆ.ಶಿವಕುಮಾರ್ ಅವರು ಸಾರ್ವಜನಿಕರಿಂದ ಅರ್ಜಿಗಳನ್ನು ಸ್ವೀಕರಿಸಿದರು. ಅವರೊಂದಿಗೆ ನಗರಾಭಿವೃದ್ಧಿ ಹಾಗೂ ಮೈಸೂರು ಜಿಲ್ಲಾ ಉಸ್ತುವಾರಿ ಸಚಿವರಾದ ಡಾ .ಯತೀಂದ್ರ ಸಿದ್ದರಾಮಯ್ಯ, ಗ್ರಾಮೀಣಾಭಿವೃದ್ಧಿ ಮತ್ತು ಪಂಚಾಯತ್ ರಾಜ್ ಸಚಿವರಾದ ಈಶ್ವರ್ ಖಂಡ್ರೆ, ಶಾಸಕರಾದ ಕೆ.ವೆಂಕಟೇಶ್, ಮತ್ತು ಅಧಿಕಾರಿಗಳು ಉಪಸ್ಥಿತರಿದ್ದರು.

Downloaded From:www.kpscvaani.com

ವಾರ್ಷಿಕ ಚಂದಾ ರೂ.25/-

ವಾರ್ತಾ ಜನಪದ

ಸಂಪುಟ-10 • ಸಂಚಿಕೆ-02 • ನವೆಂಬರ್ 2026



06 ದೃಢ ಕರ್ನಾಟಕದ ಸಂಕಲ್ಪ: "ಶತಕದ ಪಥ, ಪ್ರಗತಿಯ ರಥ" ಸಶಕ್ತ ಭಾರತಕ್ಕಾಗಿ ಬಲಿಷ್ಠ ಕರ್ನಾಟಕ - ನವಸಂಕಲ್ಪ
• ವೆಂಕಟೇಶ ಪ್ರಸಾದ್ ಬಿ.ಎಸ್.

15 ರಾಜ್ಯದಲ್ಲಿ ಪ್ರಜಾಸೇವೆ ಅಭಿಯಾನ ಆರಂಭ
• ಸಂಪ್ರೀತ್ ಬಿ.ವಿ.

21 ಬಹುಕಾಲದ ಬೇಡಿಕೆಗಳಿಗೆ ಸ್ಪಂದಿಸಿದ ಮಂಗಳೂರು ಸಂಪುಟ ಸಭೆ
• ಇಬ್ರಾಹಿಂ ಅಡ್ಕಸ್ಥಳ

25 ಸಂವಿಧಾನ ರಚನೆ ನಡೆದು ಬಂದ ಹಾದಿ
• ಮಹೇಶ್ ವಿ. ಮುಡಿಗುಂಡ



28 ಕನ್ನಡದ ಅಸ್ಮಿತೆ: ಬೇರುಗಳಿಂದ ಭವಿಷ್ಯದವರೆಗೆ
• ಡಾ। ಅನಿಲ್‌ಕುಮಾರ್ ಪಿ. ಗ್ರಾಮಪುರೋಹಿತ್

32 "ಕೌಂಟರ್‌ನಿಂದ ಮೊಬೈಲ್‌ಗೆ" ಸಾರಿಗೆ ಸೇವೆಗೆ ಡಿಜಿಟಲ್ ಸ್ಪರ್ಶ
• ಭಾಗ್ಯ ಎಂ.

35 ಗ್ಯಾರಂಟಿ ಯೋಜನೆಗಳಿಂದ ಸಬಲೀಕರಣ ಗೃಹಲಕ್ಷ್ಮಿಯರ ಹರ್ಷ
• ಡಿ. ಎಸ್. ಬಸವರಾಜು

42 ಸುಧಾರಣಾ ಮಸೂದೆಗಳ ಅಂಗೀಕಾರಕ್ಕೆ ಸಾಕ್ಷಿಯಾದ ವಿಧಾನ ಮಂಡಲ ಅಧಿವೇಶನ
• ಭಾಗ್ಯಲಕ್ಷ್ಮಿ ಜಿ.

46 ರಾಜ್ಯದಲ್ಲಿ ಪಿಎಂ-ಕುಸುಮ್ ಯೋಜನೆಯ ತ್ವರಿತ ಅನುಷ್ಠಾನಕ್ಕೆ ಒತ್ತು
• ಎಂ. ತ್ಯಾಗರಾಜು

50 ಮುಂಚೂಣಿ ವಿದೇಶಿ ವಿವಿಗಳಲ್ಲಿ ಅಧ್ಯಯನ : ಜಾಗತಿಕ ಉನ್ನತ ಶಿಕ್ಷಣಕ್ಕೆ 'ಸ್ಟಡಿ ಅಬ್ರಾಡ್' ಉಪಕ್ರಮ
• ನವೀನ್ ಕುಮಾರ್



53 ಮರುಕಳಿಸಿದ ವೈಭವ ಮೂಡಿದ ಭರವಸೆ
• ಜಡಿಯಪ್ಪ ಗೆದ್ದಗಟ್ಟಿ

57 ಚಳ್ಳಕೆರೆಯಲ್ಲಿ ಶಿಕ್ಷಣ ಮೂಲಸೌಕರ್ಯಕ್ಕೆ ಸುಸಜ್ಜಿತ ಕಟ್ಟಡಗಳು
• ಜೆ. ನಾಗರಾಜು ಗಾಣದಹುಣಸೆ

60 ವೈಭವದ ಮೈಸೂರು ದಸರಾ ಮಹೋತ್ಸವ 2026
• ಚಂದ್ರಶೇಖರ್ ಬಿ. ಎನ್.

66 ಪದಬಂಧ - 84
• ವಿದ್ಯಾ ವಿ. ಹಾಲಭಾವಿ

ಪ್ರಧಾನ ಸಂಪಾದಕರು
ಎಂ. ಎನ್. ಅನುಚೇತ್, ಐ.ಪಿ.ಎಸ್
ಆಯುಕ್ತರು, ವಾರ್ತಾ ಮತ್ತು ಸಾರ್ವಜನಿಕ ಸಂಪರ್ಕ ಇಲಾಖೆ

ಸಂಪಾದಕೀಯ ಸಲಹೆ
ಪಲ್ಲವಿ ಹೊನ್ನಾಪುರ (ಹೆ.ಪ್ರ)
ಜಂಟಿ ನಿರ್ದೇಶಕರು

ಶಫಿ ಸಾದುದ್ದೀನ್
ಉಪ ನಿರ್ದೇಶಕರು

ಸಂಪಾದಕರು
ಆರ್. ರಾಜು
ಹಿರಿಯ ಸಹಾಯಕ ನಿರ್ದೇಶಕರು

ಪ್ರಕಾಶಕರು
ಆಯುಕ್ತರು
ವಾರ್ತಾ ಮತ್ತು ಸಾರ್ವಜನಿಕ ಸಂಪರ್ಕ ಇಲಾಖೆ
#17, ವಾರ್ತಾ ಸೌಧ, ಭಗವಾನ್ ಮಹಾವೀರ ರಸ್ತೆ, ಬೆಂಗಳೂರು – 560 001
Ph : 080 22028023
email : janapada2008@gmail.com
https://dipr.karnataka.gov.in

ಮುದ್ರಕರು
ರಾಜಹಂಸ್, ಎಂಟರ್‌ಪ್ರೈಸಸ್
ನಂ.134, 4ನೇ ಮುಖ್ಯ ರಸ್ತೆ, ಕೈಗಾರಿಕಾನಗರ, ರಾಜಾಜಿನಗರ, ಬೆಂಗಳೂರು-560044.
ದೂರವಾಣಿ: 080-23357070

ಲೇಖಕರ ಅಭಿಪ್ರಾಯಗಳು ಸರ್ಕಾರದ ಅಭಿಪ್ರಾಯಗಳಲ್ಲ

Downloaded From:www.kpscvaani.com

ನಿಮ್ಮ ಅನಿಸಿಕೆ

ಗಾಂಧೀಜಿಗೆ ಮೆರಗು ತಂದ 'ಜನಪದ'

ಆಕ್ಟೋಬರ್, 2026ರ ವಾರ್ತಾ 'ಜನಪದ' ಸಂಚಿಕೆಯು ಗಾಂಧಿ ಜಯಂತಿಯ ಪ್ರಯುಕ್ತ ಅವರ ಸಮಗ್ರ ವ್ಯಕ್ತಿತ್ವದ ಕುರಿತಾಗಿ ವಿಶೇಷ ಬರಹಗಳನ್ನು ಹೊತ್ತು ತಂದಿರುವ ವಿಶೇಷ ಸಂಚಿಕೆಯಾಗಿ ಗಮನಸೆಳೆಯುವಂತೆ ಮೂಡಿಬಂದಿದೆ. ಗಾಂಧಿಯ ಕುರಿತಾದ ನವೀನ ಚಾರಿತ್ರಿಕ ಸಂಗತಿಗಳನ್ನು ಈ ಬರಹಗಳು ಹೊರಹಾಕಿವೆ. ಆಂಗ್ಲ ಅಧಿಕಾರಿಯ ಮಗಳಾದ ಮೆಡಲಿನ್ ಸ್ಲೇಡ್ ಅವರು ಗಾಂಧಿಗಾಗಿ ಮಾಡಿದ ತ್ಯಾಗಕ್ಕೆ ಬೆಲೆ ಕಟ್ಟಲಾಗದು. ಗಾಂಧಿಯ ಎಡ ಮತ್ತು ಬಲ ಮೆದುಳಿನ ಕಾರ್ಯಗಳ ಮನೋವೈಜ್ಞಾನಿಕ ಲೇಖನವು ಹೊಸ ಬೆಳಕು ಚೆಲ್ಲುತ್ತದೆ. ಇವಲ್ಲದೆ, ಸಾಣೆಕಟ್ಟಿಯ ಕಂದು ಉಪ್ಪಿನ ಇತಿಹಾಸದ ಚರಿತ್ರೆ ಮತ್ತಿತರ ಲೇಖನಗಳು ಒಟ್ಟಾರೆ ಸಂಚಿಕೆಗೆ ಮೆರಗು ತಂದಿವೆ.

– ಡಾ.ಶಿವರಾಜ ಯತಗಲ್,
ರಾಯಚೂರು

* * *

ನಾಯಕತ್ವದ ಒಳನೋಟಗಳು

ರಾಜ್ಯದ ಮಾಜಿ ಮುಖ್ಯಮಂತ್ರಿ ದಿವಂಗತ ಶ್ರೀ ರಾಮಕೃಷ್ಣ ಹೆಗಡೆ ಅವರ ಜನ್ಮ ಶತಮಾನೋತ್ಸವ ವರ್ಷಾಚರಣೆಯ ನಿಮಿತ್ತ ಪ್ರಕಟಿಸಿರುವ ಲೇಖನವು ರಾಜಕಾರಣದಲ್ಲಿ ಮುತ್ಸದ್ದಿತನ, ದೂರದರ್ಶಿತ್ವ, ನಾಯಕತ್ವ, ಜನಕೇಂದ್ರಿತ ಆಡಳಿತದ ಬಗ್ಗೆ ಹೊಳಹುಗಳನ್ನು ನೀಡುತ್ತದೆ. ನಾಯಕತ್ವ ಗುಣವೆಂದರೆ ಆಡಳಿತದ ಚುಕ್ಕಾಣಿ ಹಿಡಿಯುವುದಷ್ಟೇ ಅಲ್ಲ ಎಂಬುದನ್ನು ರಾಮಕೃಷ್ಣ ಹೆಗಡೆ ಅವರ ವ್ಯಕ್ತಿತ್ವವು ನಿಚ್ಚಳವಾಗಿ ಸಾರುತ್ತದೆ. ಸಾರ್ವಜನಿಕ ಜೀವನದಲ್ಲಿ ಇರುವವರು ಯಾವ ಮೌಲ್ಯಗಳ ಅನುಸರಣೆಗೆ ಗಮನ ನೀಡಬೇಕು ಎಂಬುದನ್ನೂ ಇದರಿಂದ ತಿಳಿಯಬಹುದಾಗಿದೆ. ಆಡಳಿತದ ನೇತೃತ್ವ ವಹಿಸುವ ಅವಕಾಶ ಸಿಕ್ಕಾಗ ಜನರ ಬದುಕನ್ನು ಹಸನುಗೊಳಿಸಲು ಅದನ್ನು ಯಾವ ರೀತಿಯಲ್ಲಿ ಬಳಸಬಹುದು ಎಂಬುದಕ್ಕೆ ರಾಮಕೃಷ್ಣ ಹೆಗಡೆ ಅವರ ಕೊಡುಗೆಗಳು ಉದಾಹರಣೆಯಾಗಿವೆ. ವಿಕೇಂದ್ರೀಕರಣಕ್ಕೆ ಒತ್ತು, ಬೇರೆಯವರ ಅಧಿಕಾರದಲ್ಲಿ ಹಸ್ತಕ್ಷೇಪ ಮಾಡದಿರುವುದು, ಹೊಸ ನಾಯಕರ ಬೆಳವಣಿಗೆಯನ್ನು ಉತ್ತೇಜಿಸುವುದು ಸೇರಿದಂತೆ ಹಲವು ಅಂಶಗಳಲ್ಲಿ ಹೆಗಡೆ ಅವರು ಎಂದಿಗೂ ಮಾದರಿಯಾಗಿರುತ್ತಾರೆ ಎಂಬುದನ್ನು ಲೇಖನ ಮನಗಾಣಿಸುತ್ತದೆ.

–ಮಾಲತೇಶ, ನರಗುಂದ

* * *

"ಯುವ ಕರ್ನಾಟಕ– ನವ ಭಾರತ"

ರಾಜ್ಯ ಸರ್ಕಾರದ "ಯುವ ಕರ್ನಾಟಕ – ನವ ಭಾರತ" ಪರಿಕಲ್ಪನೆಯು ಕರ್ನಾಟಕದ ಯುವಜನತೆ ಮಹಿಳೆಯರು ರೈತರು ಹಾಗೂ ಸಮಾಜದ ವಿವಿಧ ವರ್ಗಗಳ ಅಭಿವೃದ್ಧಿಗೆ ಮಹತ್ವ ನೀಡುತ್ತದೆ. ಶಿಕ್ಷಣದ ಗುಣಮಟ್ಟ ಹೆಚ್ಚಿಸುವ ಜೊತೆಗೆ ಯುವಕರಿಗೆ ಕೌಶಲ್ಯ ತರಬೇತಿ ಮತ್ತು ಉದ್ಯೋಗಾವಕಾಶಗಳನ್ನು ಕಲ್ಪಿಸುವುದು ಅಗತ್ಯವಾಗಿದೆ. ಇಂತಹ ಕಾರ್ಯಕ್ರಮಗಳು ಯುವಕರ ಭವಿಷ್ಯವನ್ನು ಉತ್ತಮಗೊಳಿಸಲು ಸಹಕಾರಿಯಾಗುತ್ತವೆ.

ರೈತರ ಆರ್ಥಿಕ ಸ್ಥಿರತೆಗಾಗಿ ಕೃಷಿ ಯಂತ್ರೋಪಕರಣಗಳು ಮಾರುಕಟ್ಟೆ ಸೌಲಭ್ಯ ಮತ್ತು ಸೂಕ್ತ ಬೆಲೆ ಒದಗಿಸುವುದು ಮುಖ್ಯವಾಗಿದೆ. ಮಹಿಳೆಯರಿಗೆ ಆರ್ಥಿಕ ಮತ್ತು ಸಾಮಾಜಿಕ ಅವಕಾಶಗಳನ್ನು ಹೆಚ್ಚಿಸುವುದರಿಂದ ಕುಟುಂಬ ಹಾಗೂ ಸಮಾಜದ ಅಭಿವೃದ್ಧಿಗೆ ಸಹಾಯವಾಗುತ್ತದೆ. ಆರೋಗ್ಯ ಸೇವೆ ಮತ್ತು ಸಾರ್ವಜನಿಕ ಆಸ್ಪತ್ರೆಗಳ ಗುಣಮಟ್ಟವನ್ನು ಹೆಚ್ಚಿಸುವುದಕ್ಕೂ ಆದ್ಯತೆ ನೀಡಬೇಕು.

ಒಟ್ಟಿನಲ್ಲಿ ಶಿಕ್ಷಣ ಕೌಶಲ್ಯ ಉದ್ಯೋಗ ಕೃಷಿ ಆರೋಗ್ಯ ಮತ್ತು ಮೂಲಸೌಕರ್ಯಗಳ ಸಮಗ್ರ ಅಭಿವೃದ್ಧಿ ಕರ್ನಾಟಕದ ಭವಿಷ್ಯಕ್ಕೆ ಅಗತ್ಯವಾಗಿದೆ. ಸರ್ಕಾರದ ಯೋಜನೆಗಳು ಪಾರದರ್ಶಕವಾಗಿ ಮತ್ತು ಸಮಯಕ್ಕೆ ಸರಿಯಾಗಿ ಅರ್ಹ ಫಲಾನುಭವಿಗಳಿಗೆ ತಲುಪಿದಾಗ ಮಾತ್ರ ಅವುಗಳ ಉದ್ದೇಶ ಸಾರ್ಥಕವಾಗುತ್ತದೆ. ಸಮಾಜದ ಪ್ರತಿಯೊಂದು ವರ್ಗಕ್ಕೂ ಅಭಿವೃದ್ಧಿಯ ಫಲ ತಲುಪಿದಾಗ "ಯುವ ಕರ್ನಾಟಕ– ನವ ಭಾರತ" ಎಂಬ ಆಶಯ ಹೆಚ್ಚು ಅರ್ಥಪೂರ್ಣವಾಗುತ್ತದೆ.


–ಪ್ರದೀಪ ಪಾದಗಟ್ಟಿ
ಬಸವನ ಬಾಗೇವಾಡಿ

* * *

ವಿಶಿಷ್ಟ ಉಪ್ಪು

ಮೂರು ಶತಮಾನಗಳ ಇತಿಹಾಸದ ಕಂದು ಉಪ್ಪು ಲೇಖನವು ಸಚಿತ್ರವಾಗಿ ವಿವರಗಳನ್ನು ಕಟ್ಟಿಕೊಟ್ಟಿದೆ. ಪಶ್ಚಿಮ ಘಟ್ಟದ ಔಷಧೀಯ ಸಸ್ಯಗಳ ನಡುವೆ ಹರಿಯುವ ಅಘನಾಶಿನಿ ನದಿ ನೀರಿನಿಂದ ತಯಾರಾಗುವ ಈ ಉಪ್ಪಿನ ವಿಶಿಷ್ಟ ರುಚಿ, ಸ್ಥಳೀಯ ನೂರಾರು ಕುಟುಂಬಗಳು ಈ ಉಪ್ಪು ತಯಾರಿಕೆ ಕಲೆಯನ್ನು ಕರಗತ ಮಾಡಿಕೊಂಡು ಅದನ್ನೇ ನಂಬುತ್ತಿರುವ ರೀತಿ ಹಾಗೂ ಸಹಕಾರ ಸಂಘವೊಂದು ಈ ಪಾರಂಪರಿಕ ಕಸುಬಿಗೆ ಒತ್ತಾಸೆಯಾಗಿ ನಿಂತಿರುವುದು ಗಮನಾರ್ಹ. ಇಂದಿಗೂ ಮಾರುಕಟ್ಟೆಯಲ್ಲಿ ಬೇಡಿಕೆ ಉಳಿಸಿಕೊಂಡಿರುವ ಈ ಉಪ್ಪಿನ ರುಚಿಯನ್ನು ಸವಿಯಬೇಕೆಂಬ ಆಸೆ ಇದರ ಬಗ್ಗೆ ಕೇಳಿ ತಿಳಿದಾಕ್ಷಣ ಪ್ರತಿಯೊಬ್ಬರಲ್ಲೂ ಉಂಟಾಗುತ್ತದೆ.

–ಕೃಪಾನಿಧಿ, ಹಾಸನ



'ವಾರ್ತಾ ಜನಪದ' ಮಾಸಿಕ ಈಗ www.kanaja.inನಲ್ಲಿ ಲಭ್ಯ

ವಾರ್ತಾ ಜನಪದ ಮಾಸಿಕಕ್ಕೆ ವಾರ್ಷಿಕ ಚಂದಾದಾರರಾಗಲು ಬಯಸುವವರು ರೂ 25/– ಅನ್ನು ಪಾವತಿಸಲು ಕಡ್ಡಾಯವಾಗಿ ಸೇವಾಸಿಂಧುವಿನ https://sevasindhu.karnataka.gov.in ಮೂಲಕ ಆನ್ ಲೈನ್ ಅರ್ಜಿಯನ್ನು ಸಲ್ಲಿಸಬೇಕು.

Downloaded From:www.kpscvaani.com



ಸಂಪಾದಕೀಯ...

ಪ್ರಿಯ ಓದುಗ ಮಿತ್ರರೆ,

ಧಾರ್ಮಿಕ, ಪೌರಾಣಿಕ ಹಾಗೂ ಚಾರಿತ್ರಿಕ ಹಿನ್ನೆಲೆಯ ನಾಡಹಬ್ಬವಾದ ಮೈಸೂರು ದಸರಾವು ವಿಧ್ಯುಕ್ತವಾಗಿ ನಡೆದು ಸಂಪನ್ನಗೊಂಡಿದೆ. ಕೊಪ್ಪಳ ಗವಿಮಠದ ಶ್ರೀ ಅಭಿನವ ಗವಿಸಿದ್ದೇಶ್ವರ ಸ್ವಾಮೀಜಿ ಅವರಿಂದ ಉದ್ಘಾಟನೆಗೊಂಡ ಕಾರ್ಯಕ್ರಮವು ನಾಡಿನ ಭವ್ಯ ಪರಂಪರೆಯನ್ನು ಅನಾವರಣಗೊಳಿಸುವ ಜತೆಗೆ ವಿವಿಧ ಕಾರ್ಯಕ್ರಮಗಳ ಮೂಲಕ ಜನಮನವನ್ನು ಸೆಳೆಯಿತು. ಇದೇ ಮೊದಲ ಬಾರಿಗೆ ದಸರಾ ಉತ್ಸವದಲ್ಲಿ ಆಯೋಜಿಸಿದ್ದ ಕಂಬಳವು ನೋಡುಗರನ್ನು ಸೂಜಿಗಲ್ಲಿನಂತೆ ಸೆಳೆಯಿತು. ಎರಡು ದಿನಗಳ ಕಾಲ ನಡೆದ ಈ ಕರಾವಳಿ ಕ್ರೀಡೆಯನ್ನು ಎರಡು ಲಕ್ಷಕ್ಕೂ ಹೆಚ್ಚು ಜನರು ಕಣ್ತುಂಬಿಕೊಂಡದ್ದು ಗಮನಾರ್ಹ. ಎಂದಿನಂತೆ ಸೌಹಾರ್ದ, ಶಾಂತಿ ಹಾಗೂ ಮಾನವೀಯತೆಯ ಹಿರಿಮೆಯನ್ನು ಸಾರಿದ ದಸರಾ ಕಾರ್ಯಕ್ರಮಗಳಲ್ಲಿ ಮುಖ್ಯಮಂತ್ರಿಯವರಾದ ಡಿ.ಕೆ.ಶಿವಕುಮಾರ್, ಕನ್ನಡ ಮತ್ತು ಸಂಸ್ಕೃತಿ ಸಚಿವ ಶಿವರಾಜ ತಂಗಡಗಿ, ನಗರಾಭಿವೃದ್ಧಿ ಹಾಗೂ ಮೈಸೂರು ಜಿಲ್ಲಾ ಉಸ್ತುವಾರಿ ಸಚಿವರಾದ ಡಾ.ಯತೀಂದ್ರ ಸಿದ್ದರಾಮಯ್ಯ ಅವರು ಸೇರಿದಂತೆ ಸಂಪುಟದ ಸಚಿವರು, ಶಾಸಕರು, ಸಂಸದರು, ವಿಧಾನ ಪರಿಷತ್ ಸದಸ್ಯರು, ಕಲಾವಿದರು, ಸಿನಿಮಾ ನಟರು ಹಾಗೂ ವಿವಿಧ ಗಣ್ಯರು ಪಾಲ್ಗೊಂಡಿದ್ದರು.

ಒಚಿದೆಡೆ ದಸರಾ ಸಂಭ್ರಮ, ಇದರ ಜೊತೆ ಜೊತೆಗೆ ರಾಜ್ಯದಲ್ಲಿ ಹಲವಾರು ಅಭಿವೃದ್ಧಿ ಕಾರ್ಯಕ್ರಮಗಳು, ಜನಪರ ಕಾರ್ಯಕ್ರಮಗಳು ನಡೆದಿವೆ. ರಾಜ್ಯದಲ್ಲಿ ಆಡಳಿತದ ಚಲನಶೀಲತೆಯನ್ನು ಎತ್ತಿ ಸಾರುವಂತಹ ಹಲವು ಕಾರ್ಯಕ್ರಮಗಳಿಗೆ ರಾಜ್ಯವು ಸಾಕ್ಷಿಯಾಯಿತು. ವಿಜಯನಗರ ಜಿಲ್ಲೆ ಕೂಡ್ಲಿಗಿಯಲ್ಲಿ ಸೆಪ್ಟೆಂಬರ್ 5ರಂದು ಪ್ರಜಾಸೇವೆ ಇಲಾಖೆಯ ಲೋಕಾರ್ಪಣೆ, ಜನರ ಅಹವಾಲುಗಳಿಗೆ ಸರ್ಕಾರದ ಸ್ಪಂದನೆಯ ವ್ಯವಸ್ಥೆಯಲ್ಲಿ ಹೊಸ ಅಧ್ಯಾಯವನ್ನು ತೆರೆದಿದೆ. ಜನರ ಅಹವಾಲುಗಳನ್ನು ಪರಿಹರಿಸುವ ಏಕೈಕ ಉದ್ದೇಶದಿಂದ ಪ್ರಾರಂಭಿಸಲಾಗಿರುವ ಈ ಇಲಾಖೆ ಜನಪರ ಆಡಳಿತದ ನಿಟ್ಟಿನಲ್ಲಿ ದೃಢ ಹೆಜ್ಜೆಯಾಗಿದೆ ಜನರ ಅಹವಾಲುಗಳಿಗೆ ಸಾಧ್ಯವಾದಷ್ಟು ಮಟ್ಟಿಗೆ ಸ್ಥಳದಲ್ಲಿಯೇ ಪರಿಹಾರ ದೊರಕಿಸುವುದು ಹಾಗೂ ಸ್ಥಳದಲ್ಲೇ ಪರಿಹಾರ ಒದಗಿಸಲಾಗದ ಅಹವಾಲುಗಳಿಗೆ ವ್ಯವಸ್ಥಿತವಾಗಿ ಸ್ಪಂದಿಸುವ 'ಪ್ರಜಾಸೇವಾ ಅಭಿಯಾನ'ಕ್ಕೆ ಮುಖ್ಯಮಂತ್ರಿ ಅವರು ಈ ಸಂದರ್ಭದಲ್ಲಿ ಚಾಲನೆ ನೀಡಿದ್ದಾರೆ. ಇದೇ ಸಂದರ್ಭದಲ್ಲಿ ಅವರು, ತನ್ನನ್ನು ಮುಖ್ಯಮಂತ್ರಿ ಎಂದು ಭಾವಿಸಿಕೊಳ್ಳುವುದಕ್ಕಿಂತ 'ಪ್ರಜಾಸೇವಕ' ಎಂದುಕೊಳ್ಳುವುದಕ್ಕೆ ಇಷ್ಟಪಡುತ್ತೇನೆ ಎಂದು ಆಡಿರುವ ಈ ಮಾತು ಆಡಳಿತ ಯಂತ್ರದ ಭಾಗವಾಗಿರುವ ಪ್ರತಿಯೊಬ್ಬರ ಮನಃಸ್ಥಿತಿಯಲ್ಲಿ ಆಗಬೇಕಾದ ಬದಲಾವಣೆಯ ಇಂಗಿತವನ್ನೂ ಧ್ವನಿಸುತ್ತದೆ.

ಇತ್ತೀಚೆಗೆ ನಡೆದ "**ದೃಢ ಕರ್ನಾಟಕದ ಸಂಕಲ್ಪ: ಶತಕದ ಪಥ, ಪ್ರಗತಿಯ ರಥ**" ಕಾರ್ಯಕ್ರಮವು ಬಲಿಷ್ಠ ಕರ್ನಾಟಕಕ್ಕಾಗಿ ಒಂಬತ್ತು ಸಂಕಲ್ಪಗಳಿಗೆ ಸಾಕ್ಷಿಯಾಯಿತು. ಈ ಕಾರ್ಯಕ್ರಮ 100 ದಿನಗಳಲ್ಲಿ ಅನುಷ್ಠಾನಗೊಳಿಸಿರುವ ಕಾರ್ಯಕ್ರಮಗಳು/ನೀತಿಗಳು, ಕೈಗೊಂಡಿರುವ ನಿರ್ಧಾರಗಳು, ಮುಂದಿನ ಗುರಿಗಳು ಹಾಗೂ ಸರ್ಕಾರದ ಮುಂದಿನ ಹಾದಿಯನ್ನು ಅನಾವರಣಗೊಳಿಸಿದೆ. ಸಶಕ್ತ ಭಾರತಕ್ಕಾಗಿ ಸದೃಢ ಕರ್ನಾಟಕ ನಿರ್ಮಾಣದ ಸಂದೇಶ ಪ್ರಬಲವಾಗಿ ಹೊರಹೊಮ್ಮಿದೆ.

ಆಡಳಿತ ಎಂಬುದು ದೇವರ ತೇರನ್ನು ಎಳೆದಂತೆ; ಇದರಲ್ಲಿ ಎಲ್ಲರೂ ಕೈಜೋಡಿಸಿದರೆ ಮೆರವಣಿಗೆ ಚೆಂದಗಾಣುತ್ತದೆ. ಹಾಗೆಯೇ, ಸಮಾಜದ ಎಲ್ಲ ವಲಯಗಳ ಕೊಡುಗೆಯೂ ಸೇರಿಕೊಂಡಾಗ ನಾಡಿನ ನಿಜವಾದ ಅಭಿವೃದ್ಧಿಯ ಕನಸು ಸಾಕಾರಗೊಳ್ಳುತ್ತದೆ ಎಂಬುದನ್ನು ಈ ಸಂದರ್ಭದಲ್ಲಿ ಮುಖ್ಯಮಂತ್ರಿ ತಮ್ಮ ಮಾತಿನಲ್ಲಿ ಧ್ವನಿಸಿದರು.

ಕಡಲ ತಡಿ ಮಂಗಳೂರಿನಲ್ಲಿ ಸೆ.18ರಂದು ನಡೆದ ಮೊತ್ತ ಮೊದಲ ಸಚಿವ ಸಂಪುಟ ಸಭೆ, ಅಧಿಕಾರದ ಪಡಸಾಲೆಯನ್ನು ಬೆಂಗಳೂರಿನಿಂದ ಹೊರಗೆ ಕೊಂಡೊಯ್ಯುವ ಸರ್ಕಾರದ ಪ್ರಯತ್ನಕ್ಕೆ ಸಾಕ್ಷಿಯಾಯಿತು. ಪಂಚ ದ್ರಾವಿಡ ಭಾಷೆಗಳಲ್ಲಿ ಒಂದಾಗಿರುವ ತುಳುವಿಗೆ ದಕ್ಷಿಣ ಕನ್ನಡ ಮತ್ತು ಉಡುಪಿ ಜಿಲ್ಲೆಗಳಿಗೆ ಸೀಮಿತವಾಗಿ ರಾಜ್ಯದ ಹೆಚ್ಚುವರಿ ಆಡಳಿತ ಭಾಷೆಯ ಸ್ಥಾನಮಾನ ನೀಡಲು ತೀರ್ಮಾನಿಸುವ ಮೂಲಕ ಆ ಭಾಗದ ಬಹು ವರ್ಷಗಳ ಬೇಡಿಕೆಗೆ ಸ್ಪಂದಿಸಲಾಗಿದೆ. ಇದೇ ವೇಳೆ, ಕರಾವಳಿ ಪ್ರದೇಶದ ಸಮಗ್ರ ಅಭಿವೃದ್ಧಿಯನ್ನು ಗಮನದಲ್ಲಿರಿಸಿಕೊಂಡು ರೂ 32,611 ಕೋಟಿ ಮೊತ್ತದ ಪ್ರಸ್ತಾವನೆಗಳಿಗೆ ಸಂಪುಟ ಅನುಮೋದನೆ ನೀಡಿದೆ.

ಸ್ಪಂದನಶೀಲತೆ, ಉತ್ತರದಾಯಿತ್ವ ಹಾಗೂ ಚಲನಶೀಲತೆಗಳು ಉತ್ತಮ ಆಡಳಿತದ ಲಕ್ಷಣಗಳು ಎಂಬುದನ್ನು ಸರ್ಕಾರವು ತನ್ನ ನುಡಿ, ನಡೆಗಳ ಮೂಲಕ ಬಲವಾಗಿ ದೃಢಪಡಿಸುತ್ತಾ ಇರುವುದು ಸಂತಸದ ವಿಷಯವಾಗಿದೆ.

ನಾಡಿನ ಸಮಸ್ತರಿಗೂ ಕನ್ನಡ ರಾಜ್ಯೋತ್ಸವದ ಶುಭಾಶಯಗಳು.

ಎಂ. ಎನ್. ಅನುಚೇತ್, ಐಪಿಎಸ್
ಪ್ರಧಾನ ಸಂಪಾದಕರು

ಪ್ರಧಾನ ಸಂಪಾದಕರು, ವಾರ್ತಾ ಜನಪದ, ವಾರ್ತಾ ಮತ್ತು ಸಾರ್ವಜನಿಕ ಸಂಪರ್ಕ ಇಲಾಖೆ,
#17, ವಾರ್ತಾ ಸೌಧ, ಭಗವಾನ್ ಮಹಾವೀರ ರಸ್ತೆ, ಬೆಂಗಳೂರು – 560 001. email : janapada2008@gmail.com

Downloaded From:www.kpscvaani.com





ದೃಢ ಕರ್ನಾಟಕದ ಸಂಕಲ್ಪ

ಶತಕದ ಪಥ ಪ್ರಗತಿಯ ರಥ

ರಾಜ್ಯದ ಮುಖ್ಯಮಂತ್ರಿಯಾಗಿ ಡಿಕೆ ಶಿವಕುಮಾರ್ ಅವರು ಆಡಳಿತ ಮುನ್ನಡೆಸುವ ಜವಾಬ್ದಾರಿ ವಹಿಸಿಕೊಂಡ 100 ದಿನಗಳ ಸಂದರ್ಭದಲ್ಲಿ ವಿಧಾನಸೌಧದ ಬ್ಯಾಂಕ್ವೆಟ್ ಹಾಲ್ ನಲ್ಲಿ ಸೆಪ್ಟೆಂಬರ್ 10ರ ಗುರುವಾರ ನಡೆದ "**ದೃಢ ಕರ್ನಾಟಕದ ಸಂಕಲ್ಪ: ಶತಕದ ಪಥ, ಪ್ರಗತಿಯ ರಥ**" ಕಾರ್ಯಕ್ರಮವು ಬಲಿಷ್ಠ ಕರ್ನಾಟಕಕ್ಕಾಗಿ ಒಂಬತ್ತು ಸಂಕಲ್ಪಗಳಿಗೆ ಸಾಕ್ಷಿಯಾಯಿತು. ಈ ವೇಳೆ, 100 ದಿನಗಳಲ್ಲಿ ಅನುಷ್ಠಾನಗೊಳಿಸಿರುವ ಕಾರ್ಯಕ್ರಮಗಳು/ನೀತಿಗಳು, ಕೈಗೊಂಡಿರುವ ನಿರ್ಧಾರಗಳು, ಮುಂದಿನ ಗುರಿಗಳು, ಹಿಂದಿನ ಮೂರು ವರ್ಷಗಳಲ್ಲಿ ಮಾಡಿದ ಸಾಧನೆಗಳು ಇವುಗಳನ್ನು ರಾಜ್ಯದ ಜನತೆಯೊಂದಿಗೆ ಹಂಚಿಕೊಳ್ಳಲಾಯಿತು. ಸಶಕ್ತ ಭಾರತಕ್ಕಾಗಿ ಸದೃಢ ಕರ್ನಾಟಕ ನಿರ್ಮಾಣದ ಸಂದೇಶವನ್ನು ಸಾರಲಾಯಿತು.

ವೆಂಕಟೇಶ ಪ್ರಸಾದ್ ಬಿ.ಎಸ್.

Downloaded From:www.kpscvaani.com

ಈ ಸಂದರ್ಭದಲ್ಲಿ ಮಾತನಾಡಿದ ಮುಖ್ಯಮಂತ್ರಿ ಡಿ.ಕೆ.ಶಿವಕುಮಾರ್ ಅವರು, "ಆರೋಗ್ಯ, ಶಿಕ್ಷಣ, ಜಲ ಭದ್ರತೆ, ಹೂಡಿಕೆ ಮತ್ತು ಆರ್ಥಿಕ ಬಲ, ಬೆಂಗಳೂರು ಅಭಿವೃದ್ಧಿ, ಪ್ರಾದೇಶಿಕ ಸಮತೋಲನ, ಸಾಮಾಜಿಕ ನ್ಯಾಯ, ಬಂಡವಾಳ ಹೂಡಿಕೆ, ಉದ್ಯೋಗಕ್ಕೆ ಆದ್ಯತೆ ನೀಡಿ ಬಲಿಷ್ಠ ಕರ್ನಾಟಕ ನಿರ್ಮಾಣಕ್ಕೆ ನವ ಸಂಕಲ್ಪ ಮಾಡಲಾಗಿದೆ" ಎಂದು ವಿಶ್ವಾಸದ ಮಾತುಗಳನ್ನು ಆಡಿದರು.

"ನಾನು ಹಾಗೂ ಸಿದ್ದರಾಮಯ್ಯ ಅವರು ಕಳೆದ ಮೂರು ವರ್ಷಗಳಲ್ಲಿ ನಾಡಿನ ಜನರಿಗೆ ಕೊಟ್ಟ ಭರವಸೆ ಈಡೇರಿಸಿ, ಬಸವಣ್ಣನವರ ತತ್ವದಂತೆ ನುಡಿದಂತೆ ನಡೆದಿದ್ದೇವೆ. ದೇಶವೇ ಮೆಚ್ಚುವಂತೆ ಆಡಳಿತ ನೀಡಿದ್ದೇವೆ. ಈ ರಥವನ್ನು ನಾನು ಒಬ್ಬನೇ ಎಳೆಯುತ್ತಿಲ್ಲ. ಇದು ನಿಮ್ಮ ಸರ್ಕಾರ. ನಾಡಿನ 7 ಕೋಟಿ ಜನರ ಸರ್ಕಾರ. ನೀವು ಕೊಟ್ಟ ಶಕ್ತಿ, ನಮ್ಮ ಮೇಲೆ ಇಟ್ಟಿರುವ ನಂಬಿಕೆ, ಎಲ್ಲಾ ವರ್ಗದ ಜನರ ಬದುಕಲ್ಲಿ ಬದಲಾವಣೆ ತರುತ್ತಿದೆ. ಶತಕದ ಪಥದಲ್ಲಿ ಕರ್ನಾಟಕ ಹೆಜ್ಜೆ ಹಾಕುತ್ತಿದ್ದು, ನಾಡಿನ ಅಭಿವೃದ್ಧಿಗೆ ನಾವು ಬದ್ಧವಾಗಿದ್ದೇವೆ. ನಾಡಿನ ನೆಲ, ಜನರ ಶ್ರಮ, ಯುವಕರ ಕನಸೇ ಈ ದೃಢ ಕರ್ನಾಟಕದ ಸಂಕಲ್ಪ" ಎಂದು ಹೇಳಿದರು.

"ತುಂಗಭದ್ರಾ ಅಣೆಕಟ್ಟಿನ ಎಲ್ಲ 33 ಹೊಸ ಕ್ರೆಸ್ಟ್ ಗೇಟ್‌ಗಳನ್ನು ಅಳವಡಿಸಿ, ಕೇಂದ್ರ ಜಲಸಂಪನ್ಮೂಲ ಸಚಿವರ ಉಪಸ್ಥಿತಿಯಲ್ಲಿ ನಡೆದ ಕಾರ್ಯಕ್ರಮದಲ್ಲಿ ಕರ್ನಾಟಕ, ತೆಲಂಗಾಣ ಹಾಗೂ ಆಂಧ್ರಪ್ರದೇಶ ರಾಜ್ಯಗಳ ಮುಖ್ಯಮಂತ್ರಿಗಳು ಪಾಲ್ಗೊಂಡು ಸೌಹಾರ್ದತೆಯ ಸಂದೇಶ ಸಾರಿದ್ದೇವೆ. ಈ ಕಾರ್ಯದಿಂದ 12 ಲಕ್ಷ ಹೆಕ್ಟೇರ್ ಕೃಷಿ ಭೂಮಿಯ ನೀರಿನ ಆಸರೆಯನ್ನು ರಕ್ಷಿಸಲಾಯಿತು. ಇದು ನನ್ನ ಬದುಕಿನ ಅತ್ಯಂತ ಸಾರ್ಥಕತೆಯ ಕ್ಷಣವಾಗಿದೆ" ಎಂದು ಅವರು ಅಭಿಪ್ರಾಯಪಟ್ಟರು.

ಮಹಾಬಲಿಪುರಂನಲ್ಲಿ ನಡೆದ ದಕ್ಷಿಣ ವಲಯ ಮಂಡಳಿ ಸಭೆಯಲ್ಲಿ ಪಾಲ್ಗೊಂಡು, ರಾಜ್ಯದ ಪರವಾಗಿ ಮಾತ್ರವಲ್ಲದೆ ಭಾರತದ ಜಿಡಿಪಿಯ ಮೂರನೇ ಒಂದು ಭಾಗಕ್ಕೆ ಕೊಡುಗೆ ನೀಡುವ ದಕ್ಷಿಣ ಭಾರತದ ಪರವಾಗಿಯೂ ಧ್ವನಿ ಎತ್ತಲಾಗಿದೆ. ನ್ಯಾಯಸಮ್ಮತ ತೆರಿಗೆ ಹಂಚಿಕೆ, ನೀರಿನ ಹಕ್ಕು ಮತ್ತು ನ್ಯಾಯ ಹಾಗೂ ದಕ್ಷಿಣ ಭಾರತದ ರಾಜಕೀಯ ಪ್ರಭಾವವನ್ನು ರಕ್ಷಿಸುವ ಅಗತ್ಯವನ್ನು ವಿವರಿಸಲಾಗಿದೆ ಎಂದರು.

"ಎಲ್ಲಾ 224 ಶಾಸಕರು, 75 ಪರಿಷತ್ ಸದಸ್ಯರು, 28 ಲೋಕಸಭೆ ಸದಸ್ಯರು ಹಾಗೂ 12 ರಾಜ್ಯಸಭೆ ಸದಸ್ಯರು ಒಟ್ಟಾಗಿ ರಾಜ್ಯದ ಪ್ರಗತಿಗೆ ದುಡಿಯಲು ಈ ಸರ್ಕಾರ ಕೆಲಸ ಮಾಡಲಿದೆ. ನಾವು ಸಂವಿಧಾನ ಬದ್ಧವಾಗಿ ಪ್ರಜಾಪ್ರಭುತ್ವ ವ್ಯವಸ್ಥೆಯಲ್ಲಿ ಕೆಲಸ ಮಾಡುತ್ತೇವೆ. ರಾಗದ್ವೇಷ ಮುಕ್ತವಾಗಿ ಸರ್ವರಿಗೂ ಸಮಪಾಲು, ಸಮಬಾಳು ಧ್ಯೇಯವೊಂದಿಗೆ ಕರ್ನಾಟಕದ ಪ್ರಗತಿಯ ರಥವನ್ನು ಮುನ್ನಡೆಸಲು ನಾನು ಪ್ರಜಾಸೇವಕನಾಗಿ ನಿಮ್ಮ ಮುಂದೆ ನಿಂತಿರುವೆ" ಎಂದು ನುಡಿದರು.

ಕಾರ್ಯಕ್ರಮದ ಭಾಗವಾಗಿ ಮುಖ್ಯಮಂತ್ರಿ ಅವರು ಐದು ಗ್ಯಾರಂಟಿ ಯೋಜನೆಗಳ ಫಲಾನುಭವಿಗಳು, ಕೃಷಿಕರು, ಆಟೋ ಚಾಲಕರು, ಹಮಾಲರು, ಗಿಗ್ ಕಾರ್ಮಿಕರು, ಬೀದಿಬದಿ ವ್ಯಾಪಾರಿಗಳು, ಆಶಾ ಕಾರ್ಯಕರ್ತೆಯರು, ಅಂಗನವಾಡಿ ಕಾರ್ಯಕರ್ತೆಯರು ಮತ್ತು ಪೌರಕಾರ್ಮಿಕರ ಜತೆ ಸಂವಾದ ನಡೆಸಿದರು.

ಸಿದ್ದರಾಮಯ್ಯ ಅವರ ನೇತೃತ್ವದಲ್ಲಿ ಕಳೆದ ಮೂರು ವರ್ಷಗಳಲ್ಲಿ ಅನುಷ್ಠಾನಗೊಳಿಸಿದ ಕಾರ್ಯಗಳು, ಈಗ ನೂತನ ಮುಖ್ಯಮಂತ್ರಿ ಡಿ.ಕೆ.ಶಿವಕುಮಾರ್ ಅವರು ಆಡಳಿತ ಮುನ್ನಡೆಸುವ ಹೊಣೆ ಹೊತ್ತ ಮೊದಲ ನೂರು ದಿನಗಳಲ್ಲಿ ಕೈಗೊಂಡಿರುವ ನಿರ್ಧಾರಗಳು, ಜಾರಿಗೊಳಿಸಿರುವ ಕಾರ್ಯನೀತಿಗಳು, ಯೋಜಿಸಿರುವ ಮುಂದಿನ ನಡೆಗಳು ಹಾಗೂ ಬಲಿಷ್ಠ ಭಾರತಕ್ಕಾಗಿ ಸದೃಢ ಕರ್ನಾಟಕ ನಿರ್ಮಾಣದ ಸಂಕಲ್ಪ ಈ ಸಂದರ್ಭದಲ್ಲಿ ಅನಾವರಣಗೊಂಡವು.



Downloaded From:www.kpscvaani.com



ಸರ್ಕಾರದ ನಡೆ ಸರಿ ದಾರಿಯಲ್ಲಿದೆ: ಮಾಜಿ ಮುಖ್ಯಮಂತ್ರಿ ಸಿದ್ದರಾಮಯ್ಯ

ಡಿ.ಕೆ.ಶಿವಕುಮಾರ್ ನೇತೃತ್ವದ ಸರ್ಕಾರವು ಅನೇಕ ಹೊಸ ಚಿಂತನೆಗಳು ಹಾಗೂ ಹೊಸ ಕಾರ್ಯಕ್ರಮಗಳನ್ನು ಅನುಷ್ಠಾನಗೊಳಿಸುವ ದಿಸೆಯಲ್ಲಿ ಕೆಲಸ ಮಾಡುತ್ತಿದ್ದು, ಸರ್ಕಾರ ಸರಿಯಾದ ದಾರಿಯಲ್ಲಿ ನಡೆಯುತ್ತಿದೆ ಎಂದು ಕಾರ್ಯಕ್ರಮದ ಉದ್ಘಾಟನೆ ನೆರವೇರಿಸಿದ ಮಾಜಿ ಮುಖ್ಯಮಂತ್ರಿ ಸಿದ್ದರಾಮಯ್ಯ ಶ್ಲಾಘಿಸಿದರು.

'ಸರ್ಕಾರ 100' ದಿನಗಳನ್ನು ಪೂರೈಸಿರುವುದು ಸಂಭ್ರಮಾಚರಣೆಯಲ್ಲ, ಸರಿಯಾದ ದಾರಿಯಲ್ಲಿ ನಡೆಯುತ್ತಿದೆಯೋ ಇಲ್ಲವೋ ಎಂಬುದನ್ನು ಜನರ ಮುಂದಿಡುವಂತಹ ಜವಾಬ್ದಾರಿ. ಸರ್ಕಾರಕ್ಕೆ ಒಂದೂವರೆ ವರ್ಷಕ್ಕೂ ಹೆಚ್ಚು ಅವಧಿ ಸಮಯ ಇದೆ. ಈ ಅವಧಿಯಲ್ಲಿ ಸರ್ಕಾರ ಜನರಿಗೆ ನೀಡಿರುವ ಎಲ್ಲಾ ಭರವಸೆಗಳು ಹಾಗೂ ವಾಗ್ದಾನಗಳನ್ನು ಈಡೇರಿಸುವ ಕೆಲಸ ಮಾಡಲಿ. ಬಡವರು, ದಲಿತರು, ಹಿಂದುಳಿದವರು, ಅಲ್ಪಸಂಖ್ಯಾತರು, ಮಹಿಳೆಯರು ಹಾಗೂ ಕಾರ್ಮಿಕರಿಗೆ ಶಕ್ತಿ ತುಂಬುವ ಕೆಲಸ ಆಗಲಿ' ಎಂದರು.

"ನಾವು ಪ್ರಜಾಪ್ರಭುತ್ವದ ವ್ಯವಸ್ಥೆಯಲ್ಲಿದ್ದೇವೆ. ಜನರೇ ಇಲ್ಲಿನ ಮಾಲೀಕರು, ಕೊಟ್ಟ ವಾಗ್ದಾನಗಳನ್ನು ಜಾರಿ ಮಾಡುವುದು ಜನಸೇವಕರ ಕೆಲಸ. ಯಾವುದೇ ಸರ್ಕಾರ ಜನರಿಗೆ ಉತ್ತರದಾಯಿಯಾಗಿ ನಡೆದುಕೊಳ್ಳಬೇಕು. ಅದು ಸರ್ಕಾರದ ಜವಾಬ್ದಾರಿ ಹಾಗೂ ಪ್ರಜಾಪ್ರಭುತ್ವದ ಮೂಲ ಆಶಯ. ಸಮಾಜದಲ್ಲಿನ ಅಸಮಾನತೆ ಹೋಗಲಾಡಿಸಿ, ಸಮ ಸಮಾಜವನ್ನು ನಿರ್ಮಾಣ ಮಾಡದೇ ಹೋದರೆ ಸಂವಿಧಾನದ ಆಶಯಗಳಿಗೆ ವಿರುದ್ಧವಾಗಿ ನಡೆಯುತ್ತಿದ್ದೇವೆ ಎಂಬ ಭಾವನೆ ಮೂಡುತ್ತದೆ" ಎಂದು ಹೇಳಿದರು.

ರಾಜ್ಯವು ಬರ ಪರಿಸ್ಥಿತಿಯನ್ನು ಎದುರಿಸುತ್ತಿದೆ. ಎನ್ನುವುದು ಮನವರಿಕೆಯಾಗಿದೆ. ರಾಜ್ಯದ ಸಂಪನ್ಮೂಲಗಳನ್ನು ಬಳಸಿಕೊಂಡು ತಡಮಾಡದೆ ರೈತರಿಗೆ ನೆರವಿನ ಹಸ್ತಚಾಚಬೇಕು' ಎಂದು ಸಿದ್ದರಾಮಯ್ಯ ಸಲಹೆ ನೀಡಿದರು.

ಉಪ ಮುಖ್ಯಮಂತ್ರಿ ಡಾ.ಜಿ.ಪರಮೇಶ್ವರ್ ಅವರು ಪ್ರಾಸ್ತಾವಿಕ ಮಾತನಾಡಿದರು. "ನಮ್ಮ ಸರ್ಕಾರಕ್ಕೆ ಹಿಂದಿನ ಮೂರು ವರ್ಷಗಳ ಭದ್ರ ಬುನಾದಿ ಹಾಕಿಕೊಟ್ಟಿರುವ ಸಿದ್ದರಾಮಯ್ಯ ಅವರು ದೇಶ ಕಂಡ ಅತ್ಯುತ್ತಮ ಹಣಕಾಸು ಸಚಿವರಾಗಿದ್ದಾರೆ. ಗ್ಯಾರಂಟಿ ಯೋಜನೆಗಳನ್ನು ಅನುಷ್ಠಾನಗೊಳಿಸಿಯೂ ರಾಜ್ಯದ ಹಣಕಾಸು ಸ್ಥಿತಿಗೆ ಧಕ್ಕೆಯಾಗದಂತೆ ಕಾರ್ಯ ನಿರ್ವಹಿಸಿರುವುದು ಅವರ ದಕ್ಷತೆಗೆ ಸಾಕ್ಷಿಯಾಗಿದೆ. ಅವರು ಹಾಕಿಕೊಟ್ಟಿರುವ ಅಡಿಪಾಯದ ಮೇಲೆ ಇದೀಗ ಮುಖ್ಯಮಂತ್ರಿ ಡಿ.ಕೆ.ಶಿವಕುಮಾರ್ ಅವರು ತಮ್ಮ ಚಿಂತನೆಯಲ್ಲಿರುವ ಯೋಜನೆಗಳನ್ನು ಅನುಷ್ಠಾನಗೊಳಿಸುವ ಸಂಕಲ್ಪ ಮಾಡಿದ್ದಾರೆ. ರಾಜ್ಯದಲ್ಲಿ ಬರ ಇದ್ದು, 101 ತಾಲ್ಲೂಕುಗಳನ್ನು ಬರಪೀಡಿತ ಎಂದು ಘೋಷಿಸಲಾಗಿದೆ. ಮುಂದಿನ ದಿನಗಳಲ್ಲಿ, ಇನ್ನೂ ಹೆಚ್ಚಿನ ತಾಲ್ಲೂಕುಗಳನ್ನು ಬರ ಪೀಡಿತ ಎಂದು ಘೋಷಿಸುವ ಪ್ರಕ್ರಿಯೆ ನಡೆಯಲಿದೆ ಎಂದರು.

ನಮ್ಮ ಸರ್ಕಾರ ಗ್ಯಾರಂಟಿ ಯೋಜನೆಗಳನ್ನು ಕಾರ್ಯಗತಗೊಳಿಸಿದಾಗ ಆತಂಕಕಾರಿ ಟೀಕೆಗಳು ಕೇಳಿಬಂದವು. ಆದರೆ, ಅವೇ ಯೋಜನೆಗಳ ಬಗ್ಗೆ ಇಂದು ದೇಶ ವಿದೇಶಗಳ ಸಂಸ್ಥೆಗಳು ಅಧ್ಯಯನ ನಡೆಸಿ ಸಕಾರಾತ್ಮಕ ಅಭಿಪ್ರಾಯಗಳನ್ನು ವ್ಯಕ್ತಪಡಿಸುತ್ತಿವೆ. ನಮ್ಮ ಶಕ್ತಿ ಯೋಜನೆಯಿಂದ ಪ್ರೇರಣೆ ಪಡೆದು ನ್ಯೂಯಾರ್ಕ್ ನ ಮೇಯರ್ ಅವರು ಶೇಕಡಾ 50ರಷ್ಟು ರಿಯಾಯಿತಿ ದರದಲ್ಲಿ ಬಸ್ ಪ್ರಯಾಣ ಸೌಲಭ್ಯ ಯೋಜನೆ ಜಾರಿಗೊಳಿಸಿದ್ದಾರೆ ಎಂದರು.

ನಾಡಿನ ಜನರ ಅಹವಾಲುಗಳು ಹಾಗೂ ಇಲಾಖೆಗಳ ಕಾರ್ಯವೈಖರಿಯ ಬಗ್ಗೆ ಉತ್ತಮ ಅರಿವು ಹೊಂದಿರುವ ಡಿ.ಕೆ.ಶಿವಕುಮಾರ್ ಅವರು ಮುಖ್ಯಮಂತ್ರಿಯಾಗಿ ಅಧಿಕಾರ



Downloaded From:www.kpscvaani.com

ವಹಿಸಿಕೊಂಡ ಈ ನೂರು ದಿನಗಳಲ್ಲಿ ಹಲವು ಉತ್ತಮ ನಿರ್ಧಾರಗಳನ್ನು ಕೈಗೊಂಡಿದ್ದಾರೆ. ಅಲ್ಲದೇ, ಸಚಿವ ಸಂಪುಟ ಸಭೆಗಳಲ್ಲಿ ಹಲವು ಉತ್ತಮ ಪ್ರಸ್ತಾವಗಳಿಗೆ ಈಗಾಗಲೇ ಅನುಮೋದನೆ ನೀಡಲಾಗಿದೆ ಎಂದರು.

ಬೆಂಗಳೂರು ಅಭಿವೃದ್ಧಿ, ಸಂಸದೀಯ ವ್ಯವಹಾರಗಳ ಸಚಿವ ಕೃಷ್ಣ ಬೈರೇಗೌಡ ಸ್ವಾಗತಿಸಿದರು. ರಾಮಲಿಂಗಾರೆಡ್ಡಿ, ಬಸವರಾಜ ರಾಯರೆಡ್ಡಿ, ಯು.ಟಿ.ಖಾದರ್ , ಯತೀಂದ್ರ ಸಿದ್ದರಾಮಯ್ಯ, ಬೈರತಿ ಸುರೇಶ್, ಜಮೀರ್ ಅಹ್ಮದ್ ಖಾನ್ ಸೇರಿದಂತೆ ಸಚಿವ ಸಂಪುಟದ ಸಹೋದ್ಯೋಗಿಗಳು, ಮಾಜಿ ಸಚಿವರು, ಶಾಸಕರು, ಗ್ಯಾರಂಟಿ ಯೋಜನೆಯ ಫಲಾನುಭವಿಗಳು, ಪೌರಕಾರ್ಮಿಕರು, ಸಮಾಜದ ವಿವಿಧ ವರ್ಗಗಳ ಜನರು ಕಾರ್ಯಕ್ರಮಕ್ಕೆ ಸಾಕ್ಷಿಯಾದರು.



100 ದಿನಗಳಲ್ಲಿ ಅನುಷ್ಠಾನಗೊಳಿಸಿರುವ ಪ್ರಮುಖ ಕಾರ್ಯಗಳು/ಕೈಗೊಂಡ ನಿರ್ಧಾರಗಳು/ಘೋಷಣೆಗಳು

ಈ ಮೊದಲ ನೂರು ದಿನಗಳಲ್ಲಿ ನಾವು ಹಲವು ಗಟ್ಟಿ ಹೆಜ್ಜೆಗಳನ್ನು ಇಟ್ಟಿದ್ದೇವೆ. ವೃತ್ತಿಪರ ಕೋರ್ಸುಗಳ ಪ್ರವೇಶದಲ್ಲಿ ಸರ್ಕಾರಿ ಶಾಲಾ ವಿದ್ಯಾರ್ಥಿಗಳಿಗೆ 7.5% ಮೀಸಲಾತಿ, ಶಾಲಾ ಕಾಲೇಜುಗಳ ಗಂಡು ಮಕ್ಕಳಿಗೂ ಉಚಿತ ಬಸ್ ಪಾಸ್‌ಗಳು, ಸುಮಾರು 66,000 ಉದ್ಯೋಗಗಳು ಸೃಷ್ಟಿಸುವ ನಿರೀಕ್ಷೆಯಿರುವ ರೂ.29,679 (43,214) ಕೋಟಿ ಮೊತ್ತದ ಹೂಡಿಕೆಗಳಿಗೆ ಅನುಮೋದನೆ, ಯುವಜನರಲ್ಲಿ ಕ್ರೀಡೆ, ಸಂಸ್ಕೃತಿ ಮತ್ತು ವೈಜ್ಞಾನಿಕ ಮನೋಭಾವ ಬೆಳೆಸಲು 10,000 ಭಾರತ್ ಜೋಡೋ ಯುವ ಸಂಘಗಳನ್ನು ಸ್ಥಾಪಿಸುವ ಉಪಕ್ರಮಕ್ಕೆ ಚಾಲನೆ, ಭಾರತದ ಮೊದಲ ಸರ್ಕಾರಿ ಪ್ರಾಯೋಜಿತ ಎ.ಐ. ವಿಶ್ವವಿದ್ಯಾಲಯ ಸ್ಥಾಪನೆಗೆ ನಿರ್ಧಾರ, 6ನೇ ತರಗತಿಯಿಂದಲೇ ಎ.ಐ. ಶಿಕ್ಷಣ, ಅತ್ಯಂತ ಹಿಂದುಳಿದ 10 ಜಿಲ್ಲೆಗಳಲ್ಲಿ 1 ಲಕ್ಷ ಹೊಸ ಉದ್ಯೋಗಗಳನ್ನು ಸೃಷ್ಟಿಸುವ ಯೋಜನೆ, ಖಾಲಿ ಇರುವ 72,000 ಸರ್ಕಾರಿ ಹುದ್ದೆಗಳನ್ನು ಭರ್ತಿ ಮಾಡುವ ಪ್ರಕ್ರಿಯೆಗೆ ಚಾಲನೆ, ಜನರ ಸಮಸ್ಯೆಗಳಿಗೆ ತ್ವರಿತವಾಗಿ ಸ್ಪಂದಿಸಲು ಸ್ವತಃ ಮುಖ್ಯಮಂತ್ರಿ ಮೇಲ್ವಿಚಾರಣೆಯಲ್ಲಿ 'ಪ್ರಜಾಸೇವೆ' ಇಲಾಖೆಯ ಸ್ಥಾಪನೆ, 2,400 ಚದರ ಅಡಿವರೆಗಿನ ವಸತಿ ಕಟ್ಟಡಗಳಿಗೆ ಒಸಿ, ಸಿಸಿ ವಿನಾಯಿತಿ, ಬಿ-ಖಾತಾದಿಂದ ಎ-ಖಾತಾ ಪರಿವರ್ತನೆ ರಾಜ್ಯಾದ್ಯಂತ ವಿಸ್ತರಣೆ, ಬೆಂಗಳೂರಿನ ರಸ್ತೆ ಅಭಿವೃದ್ಧಿಗೆ ರೂ. 2,000 ಕೋಟಿ ಅನುದಾನಕ್ಕೆ ಅನುಮೋದನೆ, ಸಂಘಟಿತ ಅಪರಾಧ, ಗೂಂಡಾಗಿರಿ ಮತ್ತು ಸುಲಿಗೆ ಮಾಡುವವರ ವಿರುದ್ಧ ಕಠಿಣ ಕ್ರಮ ಕೈಗೊಳ್ಳಲು ರಾಜ್ಯದಲ್ಲಿ ರೌಡಿ ನಿಗ್ರಹ ದಳ ಸ್ಥಾಪನೆ. ಕೈಗಾರಿಕಾ ಯೋಜನೆಗಳ ತ್ವರಿತ ಅನುಮೋದನೆಗೆ ಆದ್ಯತೆ. ಹಿಂದುಳಿದ ತಾಲ್ಲೂಕುಗಳಲ್ಲಿ ಹೂಡಿಕೆಗೆ ವೇಗವರ್ಧನಾ ಪ್ಯಾಕೇಜ್ ನೀಡಲು ಕ್ರಮ, ಕೈಗಾರಿಕಾ ಪ್ರದೇಶಗಳ ಪಕ್ಕದಲ್ಲಿ ಕಾರ್ಮಿಕರಿಗೆ ಅನುಕೂಲವಾಗುವಂತೆ 15-20% ಜಾಗದಲ್ಲಿ ಶ್ರಮಿಕ ನಿವಾಸ ಯೋಜನೆಯಡಿ ವಸತಿ ನಿರ್ಮಾಣಕ್ಕೆ ಅವಕಾಶ, ಜವಳಿ ನೀತಿ ಹಾಗೂ ಬಳ್ಳಾರಿ ಜೀನ್ಸ್ ಪಾರ್ಕ್‌ಗಳ ಅಭಿವೃದ್ಧಿಗೆ ನಿರ್ಧಾರ, ಹೊಸ ಏರೋಸ್ಪೇಸ್ ಹಾಗೂ ರಕ್ಷಣಾ ಕಾರ್ಯನೀತಿ ಪ್ರಕಟ, ದೊಡ್ಡಬಳ್ಳಾಪುರದಲ್ಲಿ 4,000 ಎಕರೆ ಪ್ರದೇಶದಲ್ಲಿ ರೂ.20,000 ಕೋಟಿ ವೆಚ್ಚದ ಉತ್ಪಾದನಾ ಕ್ಲಸ್ಟರ್ ನಿರ್ಮಾಣಕ್ಕೆ ಅನುಮತಿ.

ಕಳೆದ ಮೂರು ವರ್ಷಗಳಲ್ಲಿ ರಾಜ್ಯದಲ್ಲಿ ರೂ 2.53 ಲಕ್ಷ ಕೋಟಿ ಬಂಡವಾಳ ಹೂಡಿಕೆಯಾಗಿದ್ದು, ವಿದೇಶಿ ಬಂಡವಾಳ ಹೂಡಿಕೆ ಆಕರ್ಷಣೆಯಲ್ಲಿ ರಾಜ್ಯವು ದೇಶದಲ್ಲೇ 2ನೇ ಸ್ಥಾನದಲ್ಲಿದೆ. ಇದರಿಂದ 6 ಲಕ್ಷಕ್ಕೂ ಹೆಚ್ಚು ಉದ್ಯೋಗ ಸೃಷ್ಟಿಯಾಗುವ ಅಂದಾಜಿದ್ದು, ರಾಜ್ಯದ ಜಿಡಿಪಿ ರೂ 32.81 ಲಕ್ಷ ಕೋಟಿ ಗೆ ಏರಿಕೆಯಾಗಿ 8.1%ರಷ್ಟು ಪ್ರಗತಿ ಕಾಣುವ ಮೂಲಕ ರಾಷ್ಟ್ರದ ಪ್ರಗತಿಗಿಂತ ಹೆಚ್ಚಿನ ಮುನ್ನಡೆ ಸಾಧಿಸಲಾಗಿದೆ

Downloaded From:www.kpscvaani.com



ಜಾರಿಗೊಳಿಸಿರುವ ಕ್ರಮಗಳು

ಕರ್ನಾಟಕವು ರಾಜಸ್ಥಾನದ ನಂತರ ದೇಶದಲ್ಲೇ ಅತಿ ಹೆಚ್ಚು ಒಣಭೂಮಿ ಹೊಂದಿರುವ ರಾಜ್ಯವಾಗಿರುವ ಹಿನ್ನೆಲೆಯಲ್ಲಿ, ರಾಜ್ಯದಲ್ಲಿರುವ ಸಾವಿರಾರು ಟ್ರ್ಯಾಕ್ಟರ್‌ಗಳನ್ನು ಬಳಸಿಕೊಂಡು ಸಣ್ಣ ರೈತರಿಗೆ ನೆರವಾಗಲು 'ಮುಖ್ಯಮಂತ್ರಿ ನೇಗಿಲ ಯೋಗಿ' ಯೋಜನೆ ತರಲಾಗಿದೆ. ಈ ಯೋಜನೆಯಡಿ ಮೂರು ಎಕರೆಗಿಂತ ಕಡಿಮೆ ಭೂಮಿ ಹೊಂದಿರುವ ರೈತರಿಗೆ ಸಬ್ಸಿಡಿ ನೀಡಿ ಕಡಿಮೆ ದರದಲ್ಲಿ ಉಳುಮೆ ಸೇವೆ ಒದಗಿಸಲಾಗುವುದು.

ನಗರದ ವಿದ್ಯಾರ್ಥಿಗಳಿಗೆ ಗ್ರಾಮೀಣ ಬದುಕಿನ ಪರಿಚಯ ಮಾಡಿಸಲು 'ಗ್ರಾಮಾನುಭವ' ಯೋಜನೆ.

ರಸ್ತೆ ಬದಿಯಲ್ಲಿ ತೇಗದ ಸಸಿಗಳನ್ನು ನೆಡಲು ಉತ್ತೇಜಿಸುವ ನಿಟ್ಟಿನಲ್ಲಿ ಸಸಿಗಳ ಪಾಲನೆ–ಪೋಷಣೆಯ ಜವಾಬ್ದಾರಿಯನ್ನು ರೈತರಿಗೆ ನೀಡುವುದು. ಮರಗಳು ಬೆಳೆದು ಕಟಾವಿಗೆ ಬಂದಾಗ ಅದರ ಮೌಲ್ಯದ ಶೇಕಡಾ 70ರಷ್ಟನ್ನು ರೈತರಿಗೆ ಮತ್ತು ಶೇಕಡಾ 30ರಷ್ಟನ್ನು ಸರ್ಕಾರಕ್ಕೆ ನೀಡುವ ನೀತಿ.

ಆರೋಗ್ಯಕರ ಕರ್ನಾಟಕ ನಿರ್ಮಾಣದ ಉದ್ದೇಶದಿಂದ ಎಲ್ಲಾ ತಾಲ್ಲೂಕುಗಳಲ್ಲಿ ಟೆಲಿ–ಐಸಿಯು ಸ್ಥಾಪನೆ.

ನಶೆಮುಕ್ತ ಕರ್ನಾಟಕಕ್ಕಾಗಿ 'ರೈಸ್' ಮತ್ತು 'ಬೇಡ ಬ್ರೋ' ಅಭಿಯಾನಗಳಿಗೆ ಚಾಲನೆ.

'ಆರೋಗ್ಯ ಸ್ಪಂದನ'ದಡಿ– ಸುಧಾರಿತ ಆಂಬ್ಯುಲೆನ್ಸ್ ಸೇವೆ

ಮಾಜಿ ಸಚಿವ ಎಚ್.ಕೆ. ಪಾಟೀಲ್ ಅವರು ತಮ್ಮ ಕ್ಷೇತ್ರದಲ್ಲಿ ಸ್ಮಶಾನಗಳಿಗೆ 'ಮುಕ್ತಿವನ'ದ ರೂಪ ನೀಡಿರುವ ಮಾದರಿಯಲ್ಲಿ ರಾಜ್ಯದಲ್ಲಿ 1,000 ರುದ್ರಭೂಮಿಗಳ ಅಭಿವೃದ್ಧಿ.

ಬೆಂಗಳೂರಿನ ಹೊರಗಿನ ಗ್ರಾಮೀಣ ಪ್ರದೇಶಗಳಲ್ಲಿ ಖಾಸಗಿ ವಲಯದಲ್ಲಿ ಉದ್ಯೋಗ ಸೃಷ್ಟಿಸುವವರಿಗೆ ಪ್ರತಿ ಉದ್ಯೋಗಕ್ಕೆ ರೂ.2,500 ನೆರವು ನೀಡುವ 'ಉದ್ಯೋಗ ನಿಧಿ' ಯೋಜನೆ ಜಾರಿ

ಭರವಸೆಗಳು

- ಗ್ರಾಮೀಣ ಭಾಗದಲ್ಲಿರುವ ಮನೆರಹಿತ ಪರಿಶಿಷ್ಟ ಜಾತಿ ಹಾಗೂ ಪರಿಶಿಷ್ಟ ಪಂಗಡದವರಿಗೆ ಉಚಿತ ಮನೆ ಮತ್ತು ನಿವೇಶನ
- ಗ್ರಾಮೀಣ ಭಾಗದ ನಿವೇಶನ ರಹಿತ ಕುಟುಂಬಗಳಿಗೆ 5 ಲಕ್ಷ ನಿವೇಶನಗಳ ವಿತರಣೆ
- ಪರಿಶಿಷ್ಟರ ವಸತಿ ಪ್ರದೇಶಗಳಲ್ಲಿ ರಸ್ತೆ, ಚರಂಡಿ ಹಾಗೂ ಬೀದಿ ದೀಪಗಳ ವ್ಯವಸ್ಥೆ ಮೇಲ್ದರ್ಜೆಗೆ
- ಎರಡು ವರ್ಷಗಳಲ್ಲಿ ಪರಿಶಿಷ್ಟ ಜಾತಿ, ಪರಿಶಿಷ್ಟ ಪಂಗಡ, ಹಿಂದುಳಿದ ಮತ್ತು ಅಲ್ಪಸಂಖ್ಯಾತ ಸಮುದಾಯಗಳ 50 ಸಾವಿರ ಯುವಕರಿಗೆ ಸ್ವಯಂ ಉದ್ಯೋಗ
- ಅಲ್ಪಸಂಖ್ಯಾತ ಸಮುದಾಯದ ಯುವಕರ ಉದ್ಯಮಶೀಲತೆ ಹಾಗೂ ಕೌಶಲ್ಯ ವೃದ್ಧಿಗಾಗಿ ತರಬೇತಿ ಕೇಂದ್ರಗಳ ಸ್ಥಾಪನೆ
- ಪ್ರಸ್ತಾವಿತ ಪ್ರತಿ ಭಾರತ ಜೋಡೋ ಯುವ ಸಂಘಕ್ಕೆ ವಾರ್ಷಿಕ ರೂ.10 ಲಕ್ಷ ಅನುದಾನ ಹಾಗೂ ಈ ಉದ್ದೇಶಕ್ಕಾಗಿ ರೂ.1,000 ಕೋಟಿ ಅನುದಾನ ಮೀಸಲು. ಕನಿಷ್ಠ 25 ಲಕ್ಷ ಯುವಕರು ಸದಸ್ಯರಾಗುವ ಅಂದಾಜು
- ಖಾಸಗಿ ವಲಯದಲ್ಲಿರುವ ಖಾಲಿ ಹುದ್ದೆಗಳನ್ನು ಭರ್ತಿ ಮಾಡಲು 'ಯುವ ಉದ್ಯೋಗ ಸೇತು' ಮೂಲಕ ಉದ್ಯೋಗ ವಿನಿಮಯ ಕೇಂದ್ರ ಸ್ಥಾಪನೆ
- ಖಾಸಗಿ ಉದ್ಯೋಗಗಳಿಗೆ ಅಗತ್ಯವಿರುವ ಕೌಶಲ್ಯಕ್ಕೆ ಅನುಗುಣವಾಗಿ ಯುವಕರಿಗೆ ತರಬೇತಿ ವ್ಯವಸ್ಥೆ
- ಗುಣಮಟ್ಟದ ಶಿಕ್ಷಣಕ್ಕಾಗಿ ಗ್ರಾಮೀಣ ಕುಟುಂಬಗಳು ನಗರಗಳಿಗೆ ವಲಸೆ ಹೋಗುವುದನ್ನು ತಪ್ಪಿಸಲು ಪಂಚಾಯಿತಿ ಮಟ್ಟದಲ್ಲಿ ವಿಶ್ವ ಬ್ಯಾಂಕ್ ನೆರವಿನೊಂದಿಗೆ ರಾಜ್ಯದಲ್ಲಿ 1,000 ಕೆಪಿಎಸ್ ಶಾಲೆಗಳ ನಿರ್ಮಾಣ



Downloaded From:www.kpscvaani.com



ಹಾಗೂ ಸಿಎಸ್‌ಆರ್ ನಿಧಿಯ ಮೂಲಕ ಶಾಲೆಗಳ ಮೂಲಸೌಕರ್ಯ ಸುಧಾರಣೆ.

- ಗ್ರಾಮೀಣ ವಿದ್ಯಾರ್ಥಿಗಳಿಗೆ ನೆರವಾಗುವ 'ಸಿಎಂ ವಿದ್ಯಾರ್ಥಿ ಸಹಾಯ ಹಸ್ತ'ದಂತಹ ಕ್ರಮಗಳಿಗೆ ಒತ್ತು.
- ವಿದೇಶಿ ಬಂಡವಾಳ ಹೂಡಿಕೆದಾರರನ್ನು ಆಕರ್ಷಿಸಲು ಹಾಗೂ ಅನಿವಾಸಿ ಭಾರತೀಯರಿಗಾಗಿ ಪ್ರತ್ಯೇಕ ಸಚಿವಾಲಯ ಸ್ಥಾಪನೆ.
- ಬೆಂಗಳೂರಿನಿಂದಾಚೆ ಉದ್ದಿಮೆಗಳ ಸ್ಥಾಪನೆ ಪ್ರೋತ್ಸಾಹಿಸುವ 'ಬಿಯಾಂಡ್ ಬೆಂಗಳೂರು' ಪರಿಕಲ್ಪನೆಗೆ ಅನುಗುಣವಾಗಿ ಕಲಬುರಗಿ, ಬೆಳಗಾವಿ, ಹುಬ್ಬಳ್ಳಿ–ಧಾರವಾಡ, ಮಂಗಳೂರು ಹಾಗೂ ಮೈಸೂರಿನಲ್ಲಿ ಐದು ಜಾಗತಿಕ ತಂತ್ರಜ್ಞಾನ ಕೇಂದ್ರಗಳ ಸ್ಥಾಪನೆ.
- ಹಸಿರು ಡೇಟಾ ಸೆಂಟರ್ ಕಾರ್ಯನೀತಿ ಜಾರಿ.
- ಕರ್ನಾಟಕ ಡ್ರೋನ್ ಎಕ್ಸಲೆನ್ಸ್ ಕೇಂದ್ರ ಸ್ಥಾಪನೆ.
- ಇವಿ ಉತ್ಕೃಷ್ಟತಾ ಕೇಂದ್ರ ಸ್ಥಾಪನೆ
- ನೂತನ ಕರಾವಳಿ ಮತ್ತು ಮಲೆನಾಡು ಪ್ರವಾಸೋದ್ಯಮ ಕಾರ್ಯನೀತಿ ಜಾರಿ.
- 'ಭೂಮಿ ಗ್ಯಾರಂಟಿ' ಸರ್ಕಾರದ ಆರನೇ ಗ್ಯಾರಂಟಿಯಾಗಿದ್ದು, ಬೆಂಗಳೂರಿನಲ್ಲಿ 26 ಲಕ್ಷ ಆಸ್ತಿ ದಾಖಲೆಗಳನ್ನು ಸ್ಕ್ಯಾನ್ ಮಾಡಿ ಡಿಜಿಟಲೀಕರಣಗೊಳಿಸಲು ಕ್ರಮ; ರಾಜ್ಯದಲ್ಲಿ ಒಂದು ಕೋಟಿಗೂ ಹೆಚ್ಚು ಆಸ್ತಿ ದಾಖಲೆಗಳ ಪೋಡಿ ಕಾರ್ಯ.
- ಮೇಕೆದಾಟು ಯೋಜನೆ ಸೇರಿದಂತೆ ರಾಜ್ಯದ ಜಲ ಭದ್ರತೆಗೆ ಅಗತ್ಯ ಕ್ರಮ.
- ಉತ್ತರ ಕರ್ನಾಟಕದ ಮಹದಾಯಿ ಯೋಜನೆಗೆ ಇರುವ ಅಡೆತಡೆಗಳನ್ನು ನಿವಾರಿಸಲು ಗಮನ.
- ಬೆಂಗಳೂರಿನಲ್ಲಿ ಲಾಲ್‌ಬಾಗ್ ಮಾದರಿಯಲ್ಲಿ ಐದು ಉದ್ಯಾನಗಳ ನಿರ್ಮಾಣ

ದೂರದೃಷ್ಟಿಯ ಗುರಿ

- 2037ರ ವೇಳೆಗೆ ಕರ್ನಾಟಕದ ಆರ್ಥಿಕತೆಯನ್ನು ರೂ.1 ಟ್ರಿಲಿಯನ್‌ಗೆ ತಲುಪಿಸುವುದು
- ಅಪೌಷ್ಟಿಕತೆಯನ್ನು ಶೇಕಡಾ 5ಕ್ಕಿಂತ ಕಡಿಮೆ ಮಟ್ಟಕ್ಕೆ ಇಳಿಸುವುದು
- ಮಕ್ಕಳ ಶಾಲೆ ತೊರೆಯುವಿಕೆಯನ್ನು ಶೂನ್ಯಗೊಳಿಸುವುದು
- ಬಡತನವನ್ನು ಶೂನ್ಯಕ್ಕೆ ಇಳಿಸುವುದು
- ಕರ್ನಾಟಕವನ್ನು ದೇಶದಲ್ಲೇ ವೇಗವಾಗಿ ಬೆಳೆಯುತ್ತಿರುವ ರಾಜ್ಯವನ್ನಾಗಿಸುವ ಜತೆಗೆ, ನಾಳಿನ ಭಾರತಕ್ಕೆ ಕರ್ನಾಟಕವನ್ನು ಮಾದರಿ ರಾಜ್ಯವನ್ನಾಗಿ ರೂಪಿಸುವುದು.

Downloaded From:www.kpscvaani.com



ನವ ಸಂಕಲ್ಪ : ಬಲಿಷ್ಠ ಕರ್ನಾಟಕಕ್ಕಾಗಿ ಒಂಬತ್ತು ಸಂಕಲ್ಪಗಳು

ಆರೋಗ್ಯ

- ಕೈಗೆಟುಕುವ ಸುಲಭದ ಮತ್ತು ಅತ್ಯಾಧುನಿಕ ಆರೋಗ್ಯ ಮತ್ತು ಚಿಕಿತ್ಸಾ ವ್ಯವಸ್ಥೆ ಆರೋಗ್ಯ
- ಮೂಲಭೂತ ಸೌಕರ್ಯ ಸೃಷ್ಟಿಸುವುದು ಮುಖ್ಯಮಂತ್ರಿಗಳ ಹೊಸ ವಿಮಾ ಯೋಜನೆ
- ಆರೋಗ್ಯ ಪ್ರವಾಸೋದ್ಯಮ ಬೆಳವಣಿಗೆಗಾಗಿ ಮೆಡಿಸಿಟಿ ನಿರ್ಮಾಣ

ಶಿಕ್ಷಣ ಪುನಶ್ಚೇತನ

- ಕರ್ನಾಟಕ ಪಬ್ಲಿಕ್ ಶಾಲೆಗಳ ಮೂಲಕ ಪ್ರಾಥಮಿಕ ಮತ್ತು ಪ್ರೌಢ ಶಿಕ್ಷಣವನ್ನು ಪುನಶ್ಚೇತನಗೊಳಿಸಲಾಗುವುದು
- ಪರೀಕ್ಷಾ ವ್ಯವಸ್ಥೆಯಲ್ಲಿ ಪಾರದರ್ಶಕತೆ
- ಕೈಗೆಟುಕುವ ದರದಲ್ಲಿ ಶಿಕ್ಷಣ
- ಉತ್ತಮ ಗುಣಮಟ್ಟದ ಮತ್ತು ಕೈಗೆಟುಕುವ ಸಾರ್ವಜನಿಕ ಶಿಕ್ಷಣಕ್ಕೆ ಆದ್ಯತೆ

ಜಲ ಭದ್ರತೆ

- ಕರ್ನಾಟಕದ ಜಲ ಭವಿಷ್ಯವನ್ನು ಸುರಕ್ಷಿತಗೊಳಿಸುವುದು
- ಮೇಕೆದಾಟು ಯೋಜನೆ ಜಾರಿಗೆ ವೇಗ. ಕೃಷ್ಣಾ ಮೇಲ್ದಂಡೆ ಯೋಜನೆಗೆ ವೇಗ ನೀಡುವುದು ಎತ್ತಿನಹೊಳೆ ಮತ್ತು ಭದ್ರಾ ಮೇಲ್ದಂಡೆ ಯೋಜನೆಗಳ ಪೂರ್ಣಗೊಳಿಸುವಿಕೆ
- ರಾಜ್ಯಾದ್ಯಂತ ಜಲಮೂಲಗಳ ಪುನಶ್ಚೇತನ

ಹೂಡಿಕೆ ಮತ್ತು ಆರ್ಥಿಕ ಬಲ

- 'ಹೆಚ್ಚು ಹೂಡಿಕೆ ಮಾಡಿ. ಹೆಚ್ಚು ಗಳಿಸಿ' – ಜಾಗತಿಕ ಹೂಡಿಕೆ ಮತ್ತು ಅನಿವಾಸಿ ಭಾರತೀಯರ ವ್ಯವಹಾರಗಳ ಇಲಾಖೆಯ ಸ್ಥಾಪನೆಯ ಪ್ರಸ್ತಾವ.
- ಹೊಸ ಇಲಾಖೆ, ವಾಣಿಜ್ಯ ಮತ್ತು ಕೈಗಾರಿಕೆ (C&I) ಮತ್ತು ಐಟಿ/ಬಿಟಿ (ITBT) ಜೊತೆಗೂಡಿ 3 ಲಕ್ಷ ಕೋಟಿ ಹೊಸ ಹೂಡಿಕೆ ಆಕರ್ಷಿಸುವ ಗುರಿ

ಬೆಂಗಳೂರಿಗೆ ಸೊಬಗು

- ಐದು ಹೊಸ ಲಾಲ್‌ಬಾಗ್ ಮತ್ತು ಏಳು ಕೆರೆಗಳ ಪುನಶ್ಚೇತನ
- ಬೆಂಗಳೂರಿನಲ್ಲಿ ಲಾಲ್‌ಬಾಗ್‌ನಷ್ಟೇ ದೊಡ್ಡದಾದ 5 ಹೊಸ ಹಸಿರು ತಾಣಗಳ ನಿರ್ಮಾಣ. ಬೆಂಗಳೂರಿನ 7 ಕೆರೆಗಳಿಗೆ ಹೊಸ ಜೀವ ತುಂಬುವುದು.

ಪ್ರಾದೇಶಿಕ ಸಮತೋಲನ

- ಐದು ಮಹಾನಗರಗಳ ನಿರ್ಮಾಣ; ಬೆಂಗಳೂರಿನ ಆಚೆಗೂ ಬೆಳವಣಿಗೆಗೆ ಐದು ಸುಸಜ್ಜಿತ ನಗರಗಳ ನಿರ್ಮಾಣಕ್ಕೆ ಚಾಲನೆಗೆ ನಿರ್ಧಾರ

ಸಾಮಾಜಿಕ ನ್ಯಾಯ

- ನಿರಾಶ್ರಿತರಿಗೆ ಭೂಮಿ; ರಾಜ್ಯದಲ್ಲಿ ವಸತಿ ಹೀನರಿಗೆ ಕೆಲವೇ ತಿಂಗಳಲ್ಲಿ 5 ಲಕ್ಷ ನಿವೇಶನ ಹಂಚಿಕೆ. ಮುಂಬರುವ ದಿನಗಳಲ್ಲಿ ಪ್ರತಿ ಜಿಲ್ಲೆಯಲ್ಲಿ 50,000 ನಿವೇಶನ ಮಂಜೂರು ಗುರಿ

ಬಂಡವಾಳ ಹೂಡಿಕೆ

- ಬಿಲ್ಡ್ ಕರ್ನಾಟಕ–ಕರ್ನಾಟಕದ ಬೆಳವಣಿಗೆಯನ್ನು ಬಲಪಡಿಸಲು, ವಿವಿಧ ವಲಯಗಳಲ್ಲಿ ಮೂಲಸೌಕರ್ಯ ಮತ್ತು ಇತರ ಚಟುವಟಿಕೆಗಳನ್ನು ಕೈಗೊಳ್ಳಲು ಮುಂದಿನ 500 ದಿನಗಳಲ್ಲಿ 1.5 ಲಕ್ಷ ಕೋಟಿ ರೂಪಾಯಿಗಳ ಬಂಡವಾಳ ಹೂಡಿಕೆ.

ಉದ್ಯೋಗಗಳು ಮತ್ತು ಡಿಜಿಟಲ್ ಆಡಳಿತ

- ರಾಜ್ಯಾದ್ಯಂತ ಒಂದು ಲಕ್ಷ ಸರ್ಕಾರಿ ನೇಮಕಾತಿಗಳು ಮತ್ತು 5 ಲಕ್ಷ ಖಾಸಗಿ ಉದ್ಯೋಗಗಳ ಸೃಷ್ಟಿ. ಭೂ ದಾಖಲೆಗಳ ಸಂಪೂರ್ಣ ಡಿಜಿಟಲೀಕರಣ

Downloaded From:www.kpscvaani.com



ರೈತ ಸಂಕಲ್ಪ : (ಕೃಷಿ ಕೈಗಳಿಗೆ ಬೆಂಬಲದ ಬಲ)

ಮುಖ್ಯಮಂತ್ರಿ ನೇಗಿಲಯೋಗಿ

3 ಎಕರೆವರೆಗೆ ಜಮೀನು ಇರುವ ರೈತರಿಗೆ ಕೃಷಿ ಯಂತ್ರಗಳನ್ನು ಬಾಡಿಗೆಗೆ ಪಡೆಯಲು ವರ್ಷಕ್ಕೆ 74,500ರವರೆಗೆ ಶೇ.50ರಷ್ಟು ಸಹಾಯಧನ ಸಿಗಲಿದೆ. ಮೊಬೈಲ್ ಆ್ಯಪ್ ಮೂಲಕವೇ ಯಂತ್ರಗಳನ್ನು ಬಾಡಿಗೆಗೆ ಪಡೆಯಬಹುದು.

ಸಿಎಂ ರೈತ ಚೈತನ್ಯ – ಡಿಜಿಟಲ್ ಕೃಷಿ ಮಿಷನ್

ಡ್ರೋನ್ ಮತ್ತು ಉಪಗ್ರಹಗಳ ಮೂಲಕ ಬೆಳೆ ಸಮೀಕ್ಷೆ ನಡೆಸಿ, ರೈತರಿಗೆ ತಮ್ಮ ಜಮೀನಿನ ಬೆಳೆ ಸ್ಥಿತಿಯ ಬಗ್ಗೆ ತಕ್ಷಣದ ಮಾಹಿತಿ ನೀಡಲಾಗುತ್ತದೆ. ಜೊತೆಗೆ ಮಾರುಕಟ್ಟೆಯಲ್ಲಿ ಸಿಗುವ ಬೆಲೆಗಳ ಬಗ್ಗೆಯೂ ಮಾಹಿತಿ ದೊರೆಯಲಿದೆ.

ಕೃಷಿ, ತೋಟಗಾರಿಕೆ ಮತ್ತು ಸಂಬಂಧಿತ ವಲಯಗಳಲ್ಲಿ ರಫ್ತು ಉತ್ತೇಜನ

ಮಾವು, ದಾಳಿಂಬೆ, ರಾಗಿ, ಸಿರಿಧಾನ್ಯಗಳು, ಅಕ್ಕಿ ಮತ್ತು ತೊಗರಿ ಸೇರಿದಂತೆ ನಮ್ಮ ಪ್ರಮುಖ ಕೃಷಿ ಉತ್ಪನ್ನಗಳನ್ನು ವಿದೇಶಗಳಲ್ಲಿ ಮಾರಾಟ ಮಾಡಲು ಹೆಚ್ಚಿನ ಅವಕಾಶ ಕಲ್ಪಿಸಲಾಗುತ್ತದೆ. ಇದಕ್ಕಾಗಿ ಕೆಪೆಕ್ (KAPPEC) ಮೂಲಕ ಹೊಸ ರಫ್ತು ಮಿಷನ್ ಆರಂಭಿಸಲಾಗುತ್ತದೆ.

ಸಮಗ್ರ ಮಳೆ ಆಧಾರಿತ ಕೃಷಿ ನೀತಿ

ಮಳೆಯಾಶ್ರಿತ ಪ್ರದೇಶಗಳಿಗಾಗಿ ವಿಶೇಷ ನೀತಿ ರೂಪಿಸಲಾಗುತ್ತದೆ. ಮಳೆನೀರನ್ನು ಉಳಿಸುವುದು, ಮಣ್ಣಿನ ಫಲವಂತಿಕೆ ಕಾಪಾಡುವುದು ಮತ್ತು ಹವಾಮಾನಕ್ಕೆ ತಕ್ಕಂತೆ ಕೃಷಿ ಮಾಡಲು ರೈತರಿಗೆ ನೆರವು ನೀಡಲಾಗುತ್ತದೆ. ಇದರಿಂದ ರೈತರಿಗೆ ಹೆಚ್ಚಿನ ಆದಾಯ ಮತ್ತು ಉದ್ಯೋಗದ ಅವಕಾಶಗಳು ಸಿಗಲಿವೆ.

ತೇಗದ ಸಿರಿ

ರಸ್ತೆ ಬದಿಯಲ್ಲಿ ತಮ್ಮ ಜಮೀನಿಗೆ ಹೊಂದಿಕೊಂಡಿರುವ ಜಾಗದಲ್ಲಿ ಮರ ಬೆಳೆಸಲು ಭೂಮಾಲೀಕರಿಗೆ ತೇಗ ಸೇರಿದಂತೆ ಉಚಿತ ಸಸಿಗಳನ್ನು ನೀಡಲಾಗುತ್ತದೆ. ಕನಿಷ್ಠ 15 ವರ್ಷಗಳ ನಿರ್ವಹಣೆಯ ನಂತರ ಮರವನ್ನು ಕಟಾವು ಮಾಡಿ ಮಾರಾಟ ಮಾಡಿದಾಗ ಬರುವ ಹಣದಲ್ಲಿ ಶೇಕಡಾ 70ರಷ್ಟನ್ನು ಭೂಮಾಲೀಕರಿಗೆ ನೀಡಲಾಗುವುದು.

ಕರ್ನಾಟಕ ಪ್ರೋಟೀನ್ ಮಿಷನ್

ಮೊಟ್ಟೆ, ಕೋಳಿ, ಮೀನು, ಕುರಿ ಮತ್ತು ಮೇಕೆ ಸಾಕಾಣಿಕೆಗೆ ಹೆಚ್ಚಿನ ಉತ್ತೇಜನ ನೀಡಲಾಗುತ್ತದೆ. ಇದರಿಂದ ಗ್ರಾಮೀಣ ಕುಟುಂಬಗಳಿಗೆ ಹೆಚ್ಚಿನ ಆದಾಯ ಸಿಗುವ ಜೊತೆಗೆ ಜನರಿಗೆ ಪೌಷ್ಟಿಕ ಆಹಾರವೂ ದೊರೆಯಲಿದೆ.

ಗ್ರಾಮಾನುಭವ – ಗ್ರಾಮೀಣ ಬದುಕು ನೇರವಾಗಿ ಅರಿಯುವ ಕಾರ್ಯಕ್ರಮ

ನಗರ ಪ್ರದೇಶಗಳ ಶಾಲಾ-ಕಾಲೇಜು ವಿದ್ಯಾರ್ಥಿಗಳಿಗೆ ಕೆಲವು ದಿನ ಗ್ರಾಮಗಳಲ್ಲಿ ವಾಸ್ತವ್ಯವನ್ನು ಕಡ್ಡಾಯಗೊಳಿಸಲಾಗುವುದು. ನಗರ ಪ್ರದೇಶದ ಮಕ್ಕಳಿಗೂ ಕೃಷಿ, ಪಶುಸಂಗೋಪನೆ, ಗ್ರಾಮೀಣ ಬದುಕು ಮತ್ತು ಜಾನಪದ ಸಂಸ್ಕೃತಿಯ ಪರಿಚಯವಾಗಬೇಕೆಂಬುದು ಇದರ ಉದ್ದೇಶ.

Downloaded From:www.kpscvaani.com

ಕಲಿಕೆಗೆ ಬಲ, ಕನಸಿಗೆ ವೇಗ

ಗಂಡು ಮಕ್ಕಳು ಸೇರಿದಂತೆ ಪ್ರತಿ ವಿದ್ಯಾರ್ಥಿಗೂ ಉಚಿತ ಬಸ್ ಪಾಸ್

ವಿದ್ಯಾರ್ಥಿಗಳಿಗೆ ಕರ್ನಾಟಕ ಸರ್ಕಾರದ ಸೇವಾ ಸಿಂಧು ಪೋರ್ಟಲ್ ಮೂಲಕ ಶಾಲೆಗಳು ಸೇರಿದಂತೆ ಎಲ್ಲಿಂದಲಾದರೂ ಆನ್‌ಲೈನ್‌ನಲ್ಲಿ ಅರ್ಜಿ ಸಲ್ಲಿಕೆಗೆ ಅವಕಾಶ

ಈಗಾಗಲೇ ವಿದ್ಯಾರ್ಥಿಗಳಿಗೆ ವಿತರಿಸಿದ ಬಸ್ ಪಾಸ್‌ಗಳು ಯಥಾವತ್ತಾಗಿ ಚಾಲ್ತಿಯಲ್ಲಿರಲಿವೆ. ಅಲ್ಲದೇ, ವಿದ್ಯಾರ್ಥಿಗಳು ಪಾವತಿಸಿರುವ ಮೊತ್ತ ಹಿಂದಿರಿಗಿಸಲು ಸಾರಿಗೆ ನಿಗಮಗಳಿಗೆ ಸೂಚನೆ ನೀಡಲಾಗಿದೆ. ಉಚಿತ ಬಸ್ ಪಾಸ್ ಯೋಜನೆ ಜಾರಿಯಾಗುವುದರಿಂದ ಶುಲ್ಕ ಪಡೆದು ವಿತರಿಸಲಾದ ಪಾಸುಗಳ ಸಂಪೂರ್ಣ ಶುಲ್ಕವನ್ನು 15 ದಿನಗಳೊಳಗಾಗಿ ವಿದ್ಯಾರ್ಥಿಗಳಿಗೆ ಮರುಪಾವತಿಗೆ ಕ್ರಮ

ರಾಜ್ಯದಲ್ಲಿ ವಾಸವಿದ್ದು, ನೆರೆ ರಾಜ್ಯಗಳಲ್ಲಿನ ವಿದ್ಯಾ ಸಂಸ್ಥೆಗಳಲ್ಲಿ ವ್ಯಾಸಂಗ ಮಾಡುತ್ತಿರುವ ಹಾಗೂ ನೆರೆ ರಾಜ್ಯಗಳಲ್ಲಿ (ರಾಜ್ಯದ ಗಡಿಭಾಗದಲ್ಲಿ) ವಾಸವಿದ್ದು, ರಾಜ್ಯದೊಳಗಿನ ವಿದ್ಯಾ ಸಂಸ್ಥೆಗಳಲ್ಲಿ ವ್ಯಾಸಂಗ ಮಾಡುತ್ತಿರುವ ವಿದ್ಯಾರ್ಥಿಗಳಿಗೂ ಉಚಿತ ಬಸ್ ಪಾಸ್ ಸೌಲಭ್ಯ

ರಾಜ್ಯದ ಎಲ್ಲ ಶಾಲಾ–ಕಾಲೇಜು ವಿದ್ಯಾರ್ಥಿಗಳಿಗೆ ಉಚಿತ ಬಸ್ ಪಾಸ್ ಸೌಲಭ್ಯ ಒದಗಿಸುವ ಮೂಲಕ ಪೋಷಕರ ಮೇಲಿನ ಶೈಕ್ಷಣಿಕ ವೆಚ್ಚದ ಹೊರೆಯನ್ನು ಇಳಿಸಿ ಅವರ ಬದುಕಿಗೆ ಆರ್ಥಿಕ ಚೈತನ್ಯ ನೀಡುವ ಪ್ರಯತ್ನ ಇದಾಗಿದೆ.

ವೃತ್ತಿಪರ ಕೋರ್ಸುಗಳಲ್ಲಿ ಗ್ರಾಮೀಣ ಸರ್ಕಾರಿ ಶಾಲಾ ಮಕ್ಕಳಿಗೆ ಶೇ.7.5 ಮೀಸಲಾತಿ!

- ಈಗಿರುವ ಶೇಕಡಾ 15ರ ಗ್ರಾಮೀಣ ಮೀಸಲಾತಿಯಲ್ಲಿ ಶೇಕಡಾ 7.5ರಷ್ಟು ವಿಶೇಷ ಮೀಸಲಾತಿ
- 1 ರಿಂದ 10ನೇ ತರಗತಿವರೆಗೆ ಸರ್ಕಾರಿ ಗ್ರಾಮೀಣ ಶಾಲೆಯಲ್ಲಿ ಓದಿದ ವಿದ್ಯಾರ್ಥಿಗಳಿಗೆ ಈ ಅವಕಾಶ
- ವೈದ್ಯಕೀಯ, ಎಂಜಿನಿಯರಿಂಗ್ ಸೇರಿದಂತೆ ವೃತ್ತಿಪರ ಕೋರ್ಸ್‌ಗಳಿಗೆ ಹೆಚ್ಚಿನ ಅವಕಾಶ
- ಹಿಂದುಳಿದ ಹಿನ್ನೆಲೆಯ ವಿದ್ಯಾರ್ಥಿಗಳಿಗೆ ಗುಣಮಟ್ಟದ ಉನ್ನತ ಶಿಕ್ಷಣದ ಹೊಸ ಅವಕಾಶ
- ಗ್ರಾಮೀಣ ಸರ್ಕಾರಿ ಶಾಲೆಗಳ ಇನ್ನಷ್ಟು ಪ್ರತಿಭೆಗಳಿಗೆ ತೆರೆಯಲಿರುವ ವೃತ್ತಿಪರ ಶಿಕ್ಷಣದ ಬಾಗಿಲು

ಮೂರು ವರ್ಷಗಳ ಸಾಧನೆ ಅನಾವರಣ

ಐದು ಗ್ಯಾರಂಟಿಗಳ ಮೂಲಕ ಜನಕಲ್ಯಾಣಕ್ಕೆ ರೂ 1.45 ಲಕ್ಷ ಕೋಟಿ ವೆಚ್ಚ

"ನಾವು ಕಳೆದ ಮೂರು ವರ್ಷಗಳಲ್ಲಿ ಜನ, ನೀತಿ, ಪ್ರಗತಿಯ ಮೂಲ ವಿಚಾರದ ಮೇಲೆ ರಾಜ್ಯವನ್ನು ಕಟ್ಟಿದ್ದೇವೆ. ಜನರ ಬದುಕು ಬದಲಿಸಲು ನಮ್ಮ ಸರ್ಕಾರ ಐದು ಗ್ಯಾರಂಟಿ ಯೋಜನೆಗಳ ಮೂಲಕ ರೂ.1,45,416 ಕೋಟಿ ನೀಡಿದೆ. ಇವು ಅತಿ ದೊಡ್ಡ ಸಾಮಾಜಿಕ ಭದ್ರತೆ ಕಾರ್ಯಕ್ರಮಗಳಾಗಿವೆ. ಈ ಯೋಜನೆಗಳ ಜಾರಿ ಸಾಧ್ಯವಿಲ್ಲ ಎಂದು ಎಷ್ಟೇ ಟೀಕೆ ಮಾಡಿದರೂ ನಾವು ಸಾಧಿಸಿ ತೋರಿಸಿದ್ದೇವೆ. 1.24 ಕೋಟಿ ಮಹಿಳೆಯರಿಗೆ ಗೃಹಲಕ್ಷ್ಮಿ ಯೋಜನೆ ಮೂಲಕ ಈವರೆಗೆ ರೂ 76,951 ಕೋಟಿ ನೀಡಲಾಗಿದ್ದು, ಪ್ರತಿ ಮಹಿಳೆಗೆ ರೂ 66 ಸಾವಿರತಲುಪಿದ್ದು, ಎರಡು ತಿಂಗಳ ಕಂತು ಬಾಕಿ ಇದೆ. ಗೃಹಜ್ಯೋತಿ ಯೋಜನೆ ಮೂಲಕ 1.67 ಕೋಟಿ ಮನೆಗಳನ್ನು ಬೆಳಗಿಸಲಾಗುತ್ತಿದೆ. ಈ ಯೋಜನೆಗೆ ರೂ 30,522 ಕೋಟಿ ವೆಚ್ಚ ಮಾಡಲಾಗಿದೆ. ರಾಜ್ಯದಲ್ಲಿ ಯಾರೂ ಹಸಿವಿನಿಂದ ಬಳಲಬಾರದು ಎಂಬ ಚಿಂತನೆಯೊಂದಿಗೆ ಸಿದ್ದರಾಮಯ್ಯ ಅವರು ವಿಸ್ತರಣೆಗೊಳಿಸಿದ ಅನ್ನಭಾಗ್ಯ ಯೋಜನೆ ಮೂಲಕ 4.44 ಕೋಟಿ ಜನರಿಗೆ ತಿಂಗಳಿಗೆ 10 ಕೆ.ಜಿ ಅಕ್ಕಿ ನೀಡುತ್ತಿದ್ದು, ರೂ 21,054 ಕೋಟಿ ವೆಚ್ಚ ಮಾಡಲಾಗಿದೆ. ಶಕ್ತಿ ಯೋಜನೆ ಮೂಲಕ ರಾಜ್ಯದಲ್ಲಿ ಮಹಿಳೆಯರು 821 ಕೋಟಿ ಉಚಿತ ಪ್ರಯಾಣಗಳನ್ನು (ಟ್ರಿಪ್‌ಗಳು) ಮಾಡಿದ್ದು, ಇದಕ್ಕಾಗಿ ರೂ 15,735 ಕೋಟಿ ವೆಚ್ಚ ಮಾಡಲಾಗಿದೆ. ಯುವ ನಿಧಿ ಯೋಜನೆ ಮೂಲಕ 3.72 ಲಕ್ಷ ಯುವಕರಿಗೆ ನಿರುದ್ಯೋಗ ಭತ್ಯೆಯಾಗಿ ರೂ 1,154 ಕೋಟಿ ನೀಡಲಾಗಿದೆ" ಎಂದು ಕಾರ್ಯಕ್ರಮದಲ್ಲಿ ವಿವರಿಸಲಾಯಿತು.

"ನಮ್ಮ ಸರ್ಕಾರ ಈವರೆಗೂ 2.70 ಕೋಟಿ ಜನರಿಗೆ ರೂ 1,41,210 ಕೋಟಿ ಹಣವನ್ನು ಫಲಾನುಭವಿಗಳ ಖಾತೆಗೆ ನೇರವಾಗಿ ಜಮೆ ಮಾಡಲಾಗಿದೆ. ಎಸ್ ಸಿ ಪಿ/ ಟಿ ಎಸ್ ಪಿ ಯೋಜನೆ ಮೂಲಕ ಪ್ರಸಕ್ತ ವರ್ಷ ರೂ 42,018 ಕೋಟಿ ನೀಡಲಾಗಿದೆ. ಈ ವರ್ಷ 28.63 ಲಕ್ಷ ರೈತರಿಗೆ ಶೂನ್ಯ ಮತ್ತು ಕಡಿಮೆ ಬಡ್ಡಿ ದರದಲ್ಲಿ ರೂ 25,652 ಕೋಟಿ ಸಾಲ ನೀಡಲಾಗಿದೆ. ರಾಜ್ಯದಲ್ಲಿ ರೂ 17,073 ಕೋಟಿ ಮೊತ್ತದ 121 ನೀರಾವರಿ ಯೋಜನೆಗಳಿಗೆ ಅನುಮೋದನೆ ನೀಡಲಾಗಿದೆ. ಕಲ್ಯಾಣ ಕರ್ನಾಟಕದ ಅಭಿವೃದ್ಧಿಗೆ ವಾರ್ಷಿಕ ಅನುದಾನವನ್ನು 3 ಸಾವಿರ ಕೋಟಿಯಿಂದ 5 ಸಾವಿರ ಕೋಟಿಗೆ ಏರಿಕೆ ಮಾಡಲಾಗಿದೆ" ಎಂದು ತಿಳಿಸಲಾಯಿತು.

"ಆರೋಗ್ಯ ಕ್ಷೇತ್ರದಲ್ಲಿ ಮಹತ್ವದ ತೀರ್ಮಾನ ಕೈಗೊಂಡಿದ್ದು, ಗೃಹ ಆರೋಗ್ಯ ಯೋಜನೆ ಮೂಲಕ 88 ಲಕ್ಷ ಮಂದಿಗೆ ಮನೆಗಳಲ್ಲೇ ಆರೋಗ್ಯ ತಪಾಸಣೆ ಮಾಡಲಾಗಿದೆ. ಹೃದಯ ಜ್ಯೋತಿ ಯೋಜನೆ ಮೂಲಕ 21,659 ಹೃದಯಾಘಾತ ಪ್ರಕರಣಗಳನ್ನು ಅನಾಹುತಕ್ಕೂ ಮುನ್ನವೇ ಪತ್ತೆ ಮಾಡಲಾಗಿದೆ. ಮಕ್ಕಳಲ್ಲಿ ಪೌಷ್ಟಿಕತೆ ಹೆಚ್ಚಿಸಲು ಶಾಲಾ ಮಕ್ಕಳಿಗೆ ವಾರದಲ್ಲಿ ಆರು ದಿನ ಮೊಟ್ಟೆ ವಿತರಣೆ ಮಾಡಲಾಗುತ್ತಿದೆ" ಎಂದು ಹೇಳಲಾಯಿತು.

Downloaded From:www.kpscvaani.com



ರಾಜ್ಯದಲ್ಲಿ 'ಪ್ರಜಾಸೇವೆ' ಅಭಿಯಾನ ಆರಂಭ

ಸಂಪ್ರೀತ್ ಬಿ.ವಿ.



ನಾಡಿನ ಜನರ ಅಹವಾಲು ಆಲಿಸಿ, ಸೂಕ್ತ ಪರಿಹಾರ ಒದಗಿಸುವ ರಾಜ್ಯ ಸರ್ಕಾರದ ಮಹತ್ವಾಕಾಂಕ್ಷೆಯ 'ಪ್ರಜಾಸೇವೆ' ಇಲಾಖೆಯನ್ನು ಮುಖ್ಯಮಂತ್ರಿ ಡಿ.ಕೆ.ಶಿವಕುಮಾರ್ ಅವರು ವಿಜಯನಗರ ಜಿಲ್ಲೆ ಕೂಡ್ಲಿಗಿಯಲ್ಲಿ ಸೆಪ್ಟೆಂಬರ್ 5ರಂದು ವಿಧ್ಯುಕ್ತವಾಗಿ ಉದ್ಘಾಟಿಸಿದರು. ಸಾರ್ವಜನಿಕರ ಸಮಸ್ಯೆಗಳನ್ನು ಖುದ್ದಾಗಿ ಆಲಿಸುವ ಮೂಲಕ ಮುಖ್ಯಮಂತ್ರಿ ಅವರು ಅಭಿಯಾನಕ್ಕೆ ಚಾಲನೆ ನೀಡಿದರು. ಇದೇ ವೇಳೆ, ರಾಜ್ಯದಾದ್ಯಂತ ಜಿಲ್ಲೆ, ತಾಲ್ಲೂಕು ಹಾಗೂ ಹೋಬಳಿ ಮಟ್ಟದಲ್ಲಿ ಆಯಾ ಜನಪ್ರತಿನಿಧಿಗಳು ಕಾರ್ಯಕ್ರಮದ ನೇತೃತ್ವ ವಹಿಸಿ 'ಬಾಗಿಲಿಗೆ ಬಂತು ಸರಕಾರ, ಸೇವೆಗೆ ಇರಲಿ ಸಹಕಾರ' ಎಂಬ ಘೋಷವಾಕ್ಯದ ಅಭಿಯಾನದಲ್ಲಿ ಪಾಲ್ಗೊಂಡರು.

Downloaded From:www.kpscvaani.com



ಉದ್ಘಾಟನೆಯ ದಿನದಂದು ಪರಿಹಾರ ನಿರೀಕ್ಷಿಸಿ ಸುಮಾರು 25 ಸಾವಿರ ಅರ್ಜಿಗಳು ಸಲ್ಲಿಕೆಯಾದವು. ಕೋಲಾರ ಜಿಲ್ಲೆಯಿಂದ ಅತಿ ಹೆಚ್ಚು ಹಾಗೂ ಕೊಡಗು ಜಿಲ್ಲೆಯಲ್ಲಿ ಅತಿ ಕಡಿಮೆ ಸಂಖ್ಯೆಯ ಅಹವಾಲುಗಳು ಬಂದವು. ರಾಜ್ಯದ ವಿವಿಧೆಡೆ ನಡೆದ ಕಾರ್ಯಕ್ರಮಗಳಲ್ಲಿ ಸಚಿವರು ಮತ್ತು ಶಾಸಕರು ಸಕ್ರಿಯವಾಗಿ ಪಾಲ್ಗೊಂಡು ಜನರ ಸಮಸ್ಯೆ ಆಲಿಸಿದರು.

ಉದ್ಘಾಟನಾ ಕಾರ್ಯಕ್ರಮದಲ್ಲಿ ಮಾತನಾಡಿದ ಮುಖ್ಯಮಂತ್ರಿಯವರು, 'ಅಹವಾಲು ಬಗೆಹರಿಸಲು ಕೋರಿ ನೀವು ಕಚೇರಿಗಳಿಗೆ ಅಲೆದಾಡುವಂತಾಗಬಾರದು. ಸರ್ಕಾರವೇ ನಿಮ್ಮ ಮನೆ ಬಾಗಿಲಿಗೆ ಬಂದಿದೆ. ನಿಮ್ಮ ಸಂಕಷ್ಟ ನಿವಾರಣೆಯೇ ನಮ್ಮ ಧ್ಯೇಯ' ಎಂದರು.

ಜಿಲ್ಲಾ ಉಸ್ತುವಾರಿ ಸಚಿವರು ತಿಂಗಳಿಗೆ ಎರಡು ಬಾರಿ ಜಿಲ್ಲೆಗೆ ಭೇಟಿ ನೀಡಿ, ಕಡ್ಡಾಯವಾಗಿ ಜನರ ಸಂಕಷ್ಟ ಆಲಿಸಲಿದ್ದಾರೆ. ಸಚಿವರು ತಾಲ್ಲೂಕು ಹಾಗೂ ಹೋಬಳಿ ಮಟ್ಟದಲ್ಲಿ ಹಾಗೂ ಶಾಸಕರು ತಾಲ್ಲೂಕು/ಹೋಬಳಿ/ಗ್ರಾಮ ಪಂಚಾಯಿತಿ ಮಟ್ಟದಲ್ಲಿ ಅಹವಾಲು ಸ್ವೀಕರಿಸಬೇಕು. ಶಾಸಕರು ಇಲ್ಲದಿದ್ದರೆ, ಅಧಿಕಾರಿಗಳೇ ಪಂಚಾಯಿತಿ ಕೇಂದ್ರಗಳಿಗೆ ತೆರಳಿ, ಸಣ್ಣ ಸಭೆಗಳನ್ನು ನಡೆಸಿ, ಸಾರ್ವಜನಿಕರ ಅಹವಾಲು ಸ್ವೀಕರಿಸಿ ಸಮಸ್ಯೆ ಬಗೆಹರಿಸಬೇಕು ಎಂದು ಇಲಾಖೆಯ ಕಾರ್ಯಸ್ವರೂಪ ಕುರಿತು ಮುಖ್ಯಮಂತ್ರಿಗಳು ವಿವರಿಸಿದರು.

ಉಚಿತವಾಗಿ ವಕೀಲರ ಸೇವೆ: ಪಿಂಚಣಿ, ಭೂಮಿ ವ್ಯಾಜ್ಯ, ಸರ್ಕಾರದ ಸೌಲಭ್ಯಗಳು, ಖಾತೆ ಬದಲಾವಣೆ, ಗ್ಯಾರಂಟಿ ಯೋಜನೆಗಳು ಹಾಗೂ ಮನೆ-ನಿವೇಶನಕ್ಕೆ ಸಂಬಂಧಿಸಿದ ಅರ್ಜಿಗಳನ್ನು ಪರಿಶೀಲಿಸಿ ಬಗೆಹರಿಸಲಾಗುವುದು. ಜಿಲ್ಲಾಧಿಕಾರಿ ಅಥವಾ ತಹಶೀಲ್ದಾರರ ಮಟ್ಟದ ವ್ಯಾಜ್ಯಗಳನ್ನು ಪರಿಹರಿಸಿಕೊಳ್ಳಲು ಬಡವರಿಗೆ ಉಚಿತವಾಗಿ ವಕೀಲರ ಸೇವೆ ಲಭ್ಯವಿದೆ. ಸಮಸ್ಯೆ ಇತ್ಯರ್ಥವಾಗುವವರೆಗೆ ಸರ್ಕಾರ ಅವರ ಜೊತೆ ಇರಲಿದೆ' ಎಂದು ನುಡಿದರು.

ವಿಡಿಯೊ ಮಾತುಕತೆ: ಮುಖ್ಯಮಂತ್ರಿ ತಮ್ಮ ಭಾಷಣದ ಬಳಿಕ ತುಮಕೂರು, ಧಾರವಾಡ, ಹಾಸನ, ಕಲಬುರಗಿ, ದಾವಣಗೆರೆ, ಮೈಸೂರು ಜಿಲ್ಲೆಗಳಲ್ಲಿ ನಡೆದ ಪ್ರಜಾಸೇವಾ ಕಾರ್ಯಕ್ರಮದಲ್ಲಿ ಪಾಲ್ಗೊಂಡ ಸಚಿವರು, ಶಾಸಕರು, ಅಧಿಕಾರಿಗಳೊಂದಿಗೆ ವಿಡಿಯೊ ಮೂಲಕ ಮಾತನಾಡಿದರು.

ಮಧ್ಯಾಹ್ನದ ಬಳಿಕ ಖುದ್ದು ಜನರ ಅಹವಾಲು ಆಲಿಸಿದ ಸಿಎಂ, ಅದರ ನಡುವೆ ವೇದಿಕೆಯಲ್ಲೇ ಊಟ ಮಾಡಿದರು. ಜಿಲ್ಲಾ ಉಸ್ತುವಾರಿ ಸಚಿವ ಕೆ.ಎಸ್.ಬಸವಂತಪ್ಪ, ಶಾಸಕ ಡಾ.ಎನ್.ಟಿ.ಶ್ರೀನಿವಾಸ್, ಮುಖ್ಯ ಕಾರ್ಯದರ್ಶಿ ಶಾಲಿನಿ ರಜನೀಶ್ ಇದ್ದರು.

60 ಕೌಂಟರ್‌ಗಳು

ಪ್ರಜಾಸೇವೆ ಅರ್ಜಿಗಳನ್ನು ಪಡೆಯಲು ಸುಮಾರು 25 ಪಂಚಾಯಿತಿಗಳು ಹಾಗೂ ವಿವಿಧ ಇಲಾಖೆಗಳು ಮತ್ತು

Downloaded From:www.kpscvaani.com

ಗ್ಯಾರಂಟಿ ಯೋಜನೆಗಳು ಸೇರಿ ಸುಮಾರು 60 ಕೌಂಟರ್‌ಗಳನ್ನು ಸ್ಥಾಪಿಸಲಾಗಿತ್ತು. ಮುಖ್ಯಮಂತ್ರಿಯವರು ಕೌಂಟರ್ ಬಳಿ ತೆರಳಿ ಯಾವ್ಯಾವ ಸಮಸ್ಯೆಗಳ ಕುರಿತು ಅರ್ಜಿಗಳು ಬಂದಿವೆ ಎಂದು ಖುದ್ದು ಪರಿಶೀಲಿಸಿದರು.

"ಜಿಲ್ಲಾ ಚುನಾವಣಾ ಶಾಖೆ (SVEEP), ಕಂದಾಯ ಇಲಾಖೆ, ಜನಸ್ಪಂದನ (IPGRS), ವಿಶೇಷ ಚೇತನರ ಕಲ್ಯಾಣ ಇಲಾಖೆ, ಶಕ್ತಿ ಯೋಜನೆ, ಅನ್ನಭಾಗ್ಯ, ಗೃಹಜ್ಯೋತಿ, ಗೃಹಲಕ್ಷ್ಮಿ, ಯುವನಿಧಿ, ಜಿಲ್ಲಾ ಪರಿಶಿಷ್ಟ ವರ್ಗಗಳ ಕಲ್ಯಾಣ ಇಲಾಖೆ, ಮಹರ್ಷಿ ವಾಲ್ಮೀಕಿ ಅಭಿವೃದ್ಧಿ ನಿಗಮ, ಕೆಎಸ್‌ಡಿಎ, ಕೃಷಿ ಇಲಾಖೆ, ಜಿಲ್ಲಾ ಸಮಾಜ ಕಲ್ಯಾಣ ಇಲಾಖೆ, ಅಂಬೇಡ್ಕರ್ ಅಭಿವೃದ್ಧಿ ನಿಗಮ, ತೋಟಗಾರಿಕೆ ಇಲಾಖೆ, ಹಿಂದುಳಿದ ವರ್ಗಗಳ ಕಲ್ಯಾಣ ಇಲಾಖೆ, ದೇವರಾಜು ಅರಸು ಅಭಿವೃದ್ಧಿ ನಿಗಮ, ರೇಷ್ಮೆ ಇಲಾಖೆ, ಅಲ್ಪಸಂಖ್ಯಾತರ ಕಲ್ಯಾಣ ಇಲಾಖೆ, ಕರ್ನಾಟಕ ಅಲ್ಪಸಂಖ್ಯಾತರ ಅಭಿವೃದ್ಧಿ ನಿಗಮ, ಮೀನುಗಾರಿಕೆ ಇಲಾಖೆ, ಆಯುಷ್ ಇಲಾಖೆ, ಅರಣ್ಯ ಇಲಾಖೆ, ಸ್ವಸಹಾಯ ಸಂಘಗಳು, ಪಶು ಸಂಗೋಪನೆ ಮತ್ತು ವೈದ್ಯಕೀಯ ಇಲಾಖೆ, ಆರೋಗ್ಯ ಕೇಂದ್ರ, ವಿಬಿ ಜಿ ಗ್ರಾಮ್ ಜಿ ಇತ್ಯಾದಿ ಕೌಂಟರ್‌ಗಳನ್ನು ತೆರೆಯಲಾಗಿತ್ತು.

ಅಭಿಯಾನ: ಏನು?ಎತ್ತ?

ಪ್ರಜಾಸೇವೆ ಇಲಾಖೆಯ ಮಾರ್ಗಸೂಚಿಯ ಪ್ರಕಾರ, ಜಿಲ್ಲಾ ಉಸ್ತುವಾರಿ ಸಚಿವ ಮತ್ತು ಆಯಾ ಜಿಲ್ಲಾ ವ್ಯಾಪ್ತಿಯ ಶಾಸಕರು ಪ್ರತಿ ಶನಿವಾರ ತಾಲ್ಲೂಕು ಕಚೇರಿಗಳಲ್ಲಿ ಪ್ರಜಾಸೇವೆ ಅಭಿಯಾನ ಸಭೆಗಳನ್ನು ನಡೆಸಬೇಕು. ಸಭೆಯಲ್ಲಿ ಸ್ವೀಕೃತವಾಗುವ ಅರ್ಜಿಗಳನ್ನು ಡಿಜಿಟಲೀಕರಿಸಲು ಸ್ಥಳದಲ್ಲಿಯೇ ಗ್ರಾಮ ಒನ್ ಮತ್ತು ಕರ್ನಾಟಕ ಒನ್ ಕೇಂದ್ರಗಳನ್ನು ತೆರೆಯಬೇಕು. ಜನರು ಸಲ್ಲಿಸುವ ದೂರುಗಳನ್ನು ಹೇಗೆ ನಿರ್ವಹಿಸಬೇಕು ಎಂಬುದನ್ನೂ ಮಾರ್ಗಸೂಚಿಯಲ್ಲಿ ವಿವರಿಸಲಾಗಿದೆ.

- ಸಾರ್ವಜನಿಕರ ದೂರು ಮತ್ತು ಕುಂದುಕೊರತೆಗಳಿಗೆ ಸ್ಥಳದಲ್ಲಿಯೇ ಪರಿಹಾರ ಒದಗಿಸಲು ಒತ್ತು ನೀಡಬೇಕು. ಇತ್ಯರ್ಥಪಡಿಸಲಾದ ಸಂದರ್ಭದಲ್ಲಿ ಮುಂದಿನ ಕ್ರಮಕ್ಕೆ ರವಾನಿಸಬೇಕು.
- ಹೊಸದಾಗಿ ಸ್ವೀಕೃತವಾಗುವ ದೂರುಗಳನ್ನು ಹಾಗೂ ಹಳೆಯ/ಇತ್ಯರ್ಥವಾಗದ ದೂರುಗಳನ್ನು ಪ್ರತ್ಯೇಕವಾಗಿ ಇರಿಸಿ, ಇವೆರಡನ್ನೂ ಪ್ರತ್ಯೇಕವಾಗಿಯೇ ನಿರ್ವಹಿಸಬೇಕು.
- ಶನಿವಾರದಂದು ಸ್ವೀಕರಿಸಲಾದ ದೂರು ಅಥವಾ ಅರ್ಜಿಯ ಸ್ಥಿತಿಗತಿಯನ್ನು ನಂತರದ ಮೊದಲ ಬುಧವಾರದಂದು ಪರಿಶೀಲಿಸಬೇಕು. ಬೆಳಿಗ್ಗೆ 9ರಿಂದ 11ರವರೆಗೆ ತಹಶೀಲ್ದಾರ್ ಮತ್ತು ತಾಲ್ಲೂಕು ಪಂಚಾಯಿತಿ ಕಾರ್ಯನಿರ್ವಹಣಾಧಿಕಾರಿ, 11ರಿಂದ 1ರವರೆಗೆ ಸಹಾಯಕ ಆಯುಕ್ತರು (ಉಪವಿಭಾಗಾಧಿಕಾರಿ), ಮಧ್ಯಾಹ್ನ 3ರಿಂದ 5ರವರೆಗೆ ಜಿಲ್ಲಾಧಿಕಾರಿ ಮಟ್ಟದಲ್ಲಿ ಪರಿಶೀಲಿಸಿ ಸಮಸ್ಯೆಯನ್ನು ಇತ್ಯರ್ಥಪಡಿಸಬೇಕು.
- (2ನೇ ಮತ್ತು 4ನೇ ಶನಿವಾರದ ರಜಾದಿನದಂದು ಕಾರ್ಯನಿರ್ವಹಿಸುವ ಗ್ರೂಪ್ ಸಿ ಮತ್ತು ಗ್ರೂಪ್ ಡಿ ಸಿಬ್ಬಂದಿಗೆ ಜಿಲ್ಲಾಧಿಕಾರಿ ಮಟ್ಟದಲ್ಲಿಯೇ ಬೇರೊಂದು ದಿನ ಪರಿಹಾರಾತ್ಮಕ ರಜೆ ಮಂಜೂರು ಮಾಡಬಹುದು. ಗ್ರೂಪ್ ಬಿ ಮತ್ತು ಗ್ರೂಪ್ ಎ ಅಧಿಕಾರಿಗಳಿಗೆ ರಜೆ ನೀಡುವ ಸಂಬಂಧ ಇನ್ನಷ್ಟೇ ಆದೇಶ ಬರಬೇಕಿದೆ.)

ಜನರ ಮನೆಬಾಗಿಲಿಗೆ ಆಡಳಿತ, ತ್ವರಿತ ಪರಿಹಾರಕ್ಕೆ ವ್ಯವಸ್ಥಿತ ಕಾರ್ಯವಿಧಾನ

ರಾಜ್ಯದಲ್ಲಿ ಸಾರ್ವಜನಿಕರ ಅಹವಾಲುಗಳನ್ನು ನೇರವಾಗಿ ಆಲಿಸಿ, ಸಾಧ್ಯವಾದಷ್ಟು ಮಟ್ಟಿಗೆ ಸ್ಥಳದಲ್ಲೇ ಸೇವೆ ಒದಗಿಸುವುದು, ಬಾಕಿ ಇರುವ ಸಮಸ್ಯೆಗಳನ್ನು ಕಾಲಮಿತಿಯಲ್ಲಿ ವಿಲೇವಾರಿ ಮಾಡುವುದು ಮತ್ತು ಪ್ರತಿಯೊಂದು ಹಂತದಲ್ಲೂ ಅಧಿಕಾರಿಗಳ ಹೊಣೆಗಾರಿಕೆಯನ್ನು ಖಚಿತಪಡಿಸುವುದು ಸೆಪ್ಟೆಂಬರ್ 5ರಂದು ಮುಖ್ಯಮಂತ್ರಿ ಡಿ.ಕೆ.ಶಿವಕುಮಾರ್ ಅವರು ವಿಜಯನಗರ ಜಿಲ್ಲೆ ಕೂಡ್ಲಿಗೆಯಲ್ಲಿ ಉದ್ಘಾಟಿಸಿದ 'ಪ್ರಜಾಸೇವಾ ಅಭಿಯಾನ'ದ ಪ್ರಮುಖ ಅಂಶಗಳಾಗಿವೆ.

ಈ ಅಭಿಯಾನದ ಮೂರು ಪ್ರಮುಖ ಉದ್ದೇಶಗಳು ಹೀಗಿವೆ:

- ನೇರ ಆಡಳಿತ: ಸಣ್ಣಪುಟ್ಟ ಸಮಸ್ಯೆಗಳಿಗಾಗಿ ಸಾರ್ವಜನಿಕರು ಸರ್ಕಾರಿ ಕಚೇರಿಗಳಿಗೆ ಪದೇಪದೇ ಅಲೆಯುವುದನ್ನು ತಪ್ಪಿಸಿ, ಆಡಳಿತವನ್ನು ಅವರ ಮನೆಬಾಗಿಲಿಗೆ ಕೊಂಡೊಯ್ಯುವುದು.
- ತ್ವರಿತ ಪರಿಹಾರ: ವಿವಿಧ ಇಲಾಖೆಗಳ ಸೇವೆ ಮತ್ತು ಯೋಜನೆಗಳಿಗೆ ಸಂಬಂಧಿಸಿದ ಅರ್ಜಿಗಳು ಹಾಗೂ



Downloaded From:www.kpscvaani.com



ಅಹವಾಲುಗಳನ್ನು ಸ್ವೀಕರಿಸಿ, ನಿಗದಿತ ಅವಧಿಯಲ್ಲಿ ವಿಲೇವಾರಿ ಮಾಡುವುದು.

- ಪಾರದರ್ಶಕತೆ ಮತ್ತು ಉತ್ತರದಾಯಿತ್ವ: ಅರ್ಜಿ ಅಥವಾ ಅಹವಾಲಿನ ಪ್ರಗತಿಯನ್ನು ಸಾರ್ವಜನಿಕರಿಗೆ ತಿಳಿಯುವಂತೆ ಮಾಡುವ ಜತೆಗೆ, ಬಾಕಿ ಉಳಿಯುವ ಪ್ರಕರಣಗಳ ಕುರಿತು ಸಂಬಂಧಿಸಿದ ಅಧಿಕಾರಿಗಳನ್ನು ಜವಾಬ್ದಾರರನ್ನಾಗಿಸುವುದು.

ಪ್ರತಿ ಶನಿವಾರ ಸಭೆ

ಅಭಿಯಾನದ ಭಾಗವಾಗಿ ಪ್ರತಿ ಶನಿವಾರ ರಾಜ್ಯದಾದ್ಯಂತ ತಾಲ್ಲೂಕು ಮತ್ತು ಹೋಬಳಿ ಮಟ್ಟದಲ್ಲಿ ಸಭೆಗಳನ್ನು ನಡೆಸಲಾಗುತ್ತದೆ. ಮಾರ್ಗಸೂಚಿಯ ಪ್ರಕಾರ, ತಿಂಗಳ ಮೊದಲ ಮತ್ತು ಮೂರನೇ ಶನಿವಾರದಂದು ಜಿಲ್ಲಾ ಉಸ್ತುವಾರಿ ಸಚಿವರ ಅಧ್ಯಕ್ಷತೆಯಲ್ಲಿ ತಾಲ್ಲೂಕು ಕೇಂದ್ರದಲ್ಲಿ ಸಭೆ ಏರ್ಪಡಲಿದೆ. ಹಾಗೆಯೇ, ಎರಡನೇ ಮತ್ತು ನಾಲ್ಕನೇ ಶನಿವಾರದಂದು ಸ್ಥಳೀಯ ಶಾಸಕರ ಅಧ್ಯಕ್ಷತೆಯಲ್ಲಿ ತಾಲ್ಲೂಕು/ಹೋಬಳಿ/ಗ್ರಾಮ ಪಂಚಾಯಿತಿ ಮಟ್ಟದಲ್ಲಿ ಸಭೆ ಆಯೋಜನೆಯಾಗಲಿದೆ. ಇದಕ್ಕಾಗಿ, ಮುಂದಿನ ಮೂರು-ನಾಲ್ಕು ತಿಂಗಳ ಅವಧಿಗೆ ತಾಲ್ಲೂಕು ಮತ್ತು ಹೋಬಳಿ ಮಟ್ಟದ ಸಭೆಗಳನ್ನು ನಡೆಸಲು ಸಮಗ್ರ ಕಾರ್ಯಕ್ರಮಗಳ ವೇಳಾಪಟ್ಟಿ (Calendar of Events) ಸಿದ್ಧಪಡಿಸಲಾಗುತ್ತದೆ.

ಜಿಲ್ಲಾ ಉಸ್ತುವಾರಿ ಸಚಿವರ ಅಧ್ಯಕ್ಷತೆಯಲ್ಲಿ ತಾಲ್ಲೂಕು ಮಟ್ಟದ ಸಭೆ ನಡೆಯುವ ದಿನ ಅದೇ ಕ್ಷೇತ್ರದಲ್ಲಿ ಶಾಸಕರ ಸಭೆ ಪ್ರತ್ಯೇಕವಾಗಿ ಇರುವುದಿಲ್ಲ. ಸಂಬಂಧಿಸಿದ ಶಾಸಕರು ಸಚಿವರ ಸಭೆಯಲ್ಲಿ ಭಾಗವಹಿಸಲಿದ್ದಾರೆ. ಜಿಲ್ಲಾಮಟ್ಟದ ಅಧಿಕಾರಿಗಳು ಸಚಿವರ ಸಭೆಗಳಲ್ಲಿ ಹಾಗೂ ತಾಲ್ಲೂಕು ಮಟ್ಟದ ಅಧಿಕಾರಿಗಳು ತಮ್ಮ ವ್ಯಾಪ್ತಿಯಲ್ಲಿ ನಡೆಯುವ ಶಾಸಕರ ಸಭೆಗಳಲ್ಲಿ ಭಾಗವಹಿಸಲಿದ್ದಾರೆ. ಜಿಲ್ಲಾ ಪಂಚಾಯಿತಿ, ತಾಲ್ಲೂಕು ಪಂಚಾಯಿತಿ, ಗ್ರಾಮ ಪಂಚಾಯಿತಿ ಹಾಗೂ ನಗರ ಸ್ಥಳೀಯ ಸಂಸ್ಥೆಗಳ ಮಾಜಿ ಸದಸ್ಯರು ಮತ್ತು ಸ್ಥಳೀಯ ಮುಖಂಡರನ್ನೂ ಸಭೆಗಳಿಗೆ ಹಾಜರಾಗುವಂತೆ ಮನವಿ ಮಾಡಲಾಗುತ್ತದೆ.

15 ದಿನ ಮುಂಚಿತವಾಗಿ ಮಾಹಿತಿ

ಸಭೆಯ ಕುರಿತು ಸಾರ್ವಜನಿಕರಿಗೆ ಕನಿಷ್ಠ 15 ದಿನಗಳ ಮುಂಚಿತವಾಗಿ ಮನೆ-ಮನೆಗೆ ಕರಪತ್ರಗಳನ್ನು ವಿತರಿಸಿ ಮಾಹಿತಿ ನೀಡಲಾಗುತ್ತದೆ. ಸಭೆಯ ದಿನಾಂಕ, ಸಮಯ, ಸ್ಥಳ, ಅಧ್ಯಕ್ಷತೆ ವಹಿಸುವ ಜನಪ್ರತಿನಿಧಿಯ ವಿವರಗಳ ಜತೆಗೆ ಪೂರ್ವಮುದ್ರಿತ ಅರ್ಜಿ ನಮೂನೆ ಮತ್ತು ಅಗತ್ಯ ದಾಖಲೆಗಳ ಪರಿಶೀಲನಾ ಪಟ್ಟಿಯನ್ನು ಇದು ಒಳಗೊಂಡಿರುತ್ತದೆ. ಅಲ್ಲದೆ, ತಾಲ್ಲೂಕು ಅಥವಾ ಹೋಬಳಿ ವ್ಯಾಪ್ತಿಯ ನಿವಾಸಿಗಳಿಗೆ ಸಭೆಯ ಕುರಿತು ಕೃತಕ ಬುದ್ಧಿಮತ್ತೆ (ಎಐ) ಆಧಾರಿತ ಕಾಲ್ ಸೆಂಟರ್ ಮೂಲಕವಾಗಿಯೂ ಕರೆ ಮಾಡಿ ಮಾಹಿತಿ ನೀಡಲಾಗುತ್ತದೆ.

ಸಾರ್ವಜನಿಕರಿಗೆ ಸಭೆಯ ದಿನಕ್ಕಾಗಿ ಕಾಯದೆ, ತಮ್ಮ ಅರ್ಜಿಗಳು ಮತ್ತು ಅಹವಾಲುಗಳನ್ನು ಮುಂಚಿತವಾಗಿಯೇ ಗ್ರಾಮ ಒನ್ ಕೇಂದ್ರಗಳಲ್ಲಿ ಸಲ್ಲಿಸಲು ಅವಕಾಶ ಕಲ್ಪಿಸಲಾಗುತ್ತದೆ.

ಸಭೆಯ ಸ್ಥಳದಲ್ಲೇ ಗ್ರಾಮ ಒನ್ ಮಳಿಗೆ

ಪ್ರತಿ ಪ್ರಜಾಸೇವಾ ಅಭಿಯಾನ ನಡೆಯುವ ಸ್ಥಳದಲ್ಲಿ' ಗ್ರಾಮ ಒನ್' ಮಳಿಗೆ ಸ್ಥಾಪಿಸಲಾಗುತ್ತದೆ. ಸಾರ್ವಜನಿಕರಿಗೆ ಸ್ಥಳದಲ್ಲೇ ಆನ್‌ಲೈನ್ ಮೂಲಕ ಅರ್ಜಿ ಅಥವಾ ಅಹವಾಲು ಸಲ್ಲಿಕೆ ಸಾಧ್ಯವಾಗುವಂತೆ ಕಂಪ್ಯೂಟರ್, ಲ್ಯಾಪ್‌ಟಾಪ್ ಪ್ರಿಂಟರ್ ಮತ್ತು ಇಂಟರ್‌ನೆಟ್ ವ್ಯವಸ್ಥೆ ಮಾಡಲಾಗಿರುತ್ತದೆ. ಡಿಜಿಟಲ್ ಸೌಲಭ್ಯಗಳ ಕೊರತೆಯಿಂದಾಗಿ ಅರ್ಜಿ ಸಲ್ಲಿಸಲು ಸಾಧ್ಯವಾಗದ ತೊಂದರೆಯನ್ನು ಇದು ತಪ್ಪಿಸಲಿದೆ.

ಅಹವಾಲುಗಳಿಗೆ ಎರಡು ಪ್ರತ್ಯೇಕ ಸರತಿ

ಸಭೆಯ ದಿನ ಸಾರ್ವಜನಿಕರ ಅಹವಾಲುಗಳನ್ನು ಮುಖ್ಯವಾಗಿ ಎರಡು ವಿಭಾಗಗಳಲ್ಲಿ ನಿರ್ವಹಿಸಲಾಗುತ್ತದೆ. ಮೊದಲನೆಯದು, ಹೊಸ ಅಹವಾಲುಗಳಿಗೆ ಸಂಬಂಧಿಸಿದ್ದು; ಮೊದಲ ಬಾರಿಗೆ ಸಲ್ಲಿಕೆಯಾಗುವ ಅರ್ಜಿಗಳು ಮತ್ತು ಅಹವಾಲುಗಳನ್ನು ಈ ವಿಭಾಗದಲ್ಲಿ ದಾಖಲಿಸಲಾಗುತ್ತದೆ.

ಎರಡನೆಯದು, ಈಗಾಗಲೇ ಅರ್ಜಿ ಸಲ್ಲಿಕೆಯಾಗಿ ಪರಿಹಾರವಾಗದ ಅಥವಾ ಸಮಾಧಾನಕರವಲ್ಲದ ರೀತಿಯಲ್ಲಿ ವಿಲೇವಾರಿಯಾದ ಅಹವಾಲುಗಳಿಗೆ ಸಂಬಂಧಿಸಿದ್ದು; ಈಗಾಗಲೇ ಸಕಾಲ ಅಥವಾ 'ಏಕೀಕೃತ ಸಾರ್ವಜನಿಕ ಕುಂದುಕೊರತೆ ನಿವಾರಣಾ ವ್ಯವಸ್ಥೆಯಲ್ಲಿ (IPGRS) ನೋಂದಾಯಿಸಿದ್ದರೂ ಯಾವುದೇ ಪ್ರತಿಕ್ರಿಯೆ ದೊರೆಯದ ಅಥವಾ 21 ದಿನಗಳ ಬಳಿಕವೂ ಸಮರ್ಪಕ ಪರಿಹಾರ ಲಭ್ಯವಾಗದ ಪ್ರಕರಣಗಳನ್ನು ಈ ವಿಭಾಗದಲ್ಲಿ ಪರಿಗಣಿಸಲಾಗುತ್ತದೆ.

Downloaded From:www.kpscvaani.com



ಇಂತಹ ಅಹವಾಲುಗಳಿಗಾಗಿ ಸಾರ್ವಜನಿಕರು ತಮ್ಮ ಸಕಾಲ, ಸಿಎಸ್‌ಸಿ ಅಥವಾ ಐಪಿಜಿಆರ್‌ಎಸ್ ಸಂಖ್ಯೆಯನ್ನು ನೀಡಬೇಕಾಗುತ್ತದೆ. ಸಮಯದ ಅಭಾವವಿದ್ದಲ್ಲಿ, ಇಂತಹ ಅಹವಾಲುದಾರರಿಗೆ ಸಭೆಯ ಅಧ್ಯಕ್ಷತೆ ವಹಿಸುವ ಜನಪ್ರತಿನಿಧಿಯೊಂದಿಗೆ ನೇರವಾಗಿ ಮಾತನಾಡಲು ಆದ್ಯತೆ ನೀಡಲಾಗುತ್ತದೆ.

ಸ್ಥಳದಲ್ಲೇ ಸೇವೆ ಮತ್ತು ಪರಿಹಾರ

ಸಾಧ್ಯವಾದಷ್ಟು ಮಟ್ಟಿಗೆ ಅಹವಾಲುಗಳಿಗೆ ಸಭೆಯ ಸ್ಥಳದಲ್ಲೇ ಸೇವೆ ಒದಗಿಸಲಾಗುತ್ತದೆ. ಉದಾಹರಣೆಗೆ, ಅರ್ಹ ಫಲಾನುಭವಿಗಳಿಗೆ ವಿವಿಧ ಯೋಜನೆಗಳ ಮಂಜೂರಾತಿ ಪತ್ರಗಳನ್ನು ತಕ್ಷಣವೇ ವಿತರಿಸಬಹುದು. ಈಗಾಗಲೇ ಪರಿಹಾರ ಕಂಡುಕೊಂಡಿರುವ ಅಹವಾಲುಗಳಿಗೆ ಸಂಬಂಧಿಸಿದ ಅನುಮೋದನೆ ಅಥವಾ ದೃಢೀಕರಣ ಪತ್ರಗಳನ್ನು ನೀಡಬಹುದು ಇತ್ಯಾದಿ. ಅರ್ಜಿ ಅಥವಾ ಅಹವಾಲು ಸಲ್ಲಿಸಿದ ಬಳಿಕ ಸ್ಥಳದಲ್ಲೇ ಪರಿಹಾರ ಸಾಧ್ಯವಾಗದಿದ್ದರೆ, ಅದರ ಪ್ರಗತಿ ಏನಾಗಿದೆ ಎಂಬುದನ್ನು ತಿಳಿದುಕೊಳ್ಳಲು ನೈಜ-ಸಮಯದ (real-time) ಸ್ಥಿತಿ ಪರಿಶೀಲನಾ ವ್ಯವಸ್ಥೆ ಕಲ್ಪಿಸಲಾಗುತ್ತದೆ.

ವಿವಿಧ ಇಲಾಖೆಗಳ ಮಾಹಿತಿ

ಪ್ರತಿ ಸಭೆಯ ಸ್ಥಳದಲ್ಲಿ ವಿವಿಧ ಇಲಾಖೆಗಳ ಮಳಿಗೆಗಳನ್ನು ಸ್ಥಾಪಿಸಲಾಗುತ್ತದೆ. ಇಲ್ಲಿ ಆಯಾ ಇಲಾಖೆಗಳ ಯೋಜನೆಗಳ ಅರ್ಹತಾ ಮಾನದಂಡಗಳು, ಲಭ್ಯವಿರುವ ಸೇವೆಗಳು ಹಾಗೂ ಅರ್ಜಿ ಸಲ್ಲಿಸುವ ವಿಧಾನದ ಕುರಿತು ಸಾರ್ವಜನಿಕರಿಗೆ ಮಾಹಿತಿ ನೀಡಲಾಗುತ್ತದೆ. ಜತೆಗೆ, ವಿವಿಧ ಇಲಾಖೆಗಳ ಉತ್ತಮ ಕಾರ್ಯಪದ್ಧತಿಗಳ ಪ್ರದರ್ಶನವನ್ನೂ ಆಯೋಜಿಸಲಾಗುತ್ತದೆ. ಸಭೆಗೆ ಆಗಮಿಸುವ ಸಾರ್ವಜನಿಕರಿಗೆ ಕುಡಿಯುವ ನೀರು ಮತ್ತು ಮೂಲಭೂತ ವೈದ್ಯಕೀಯ ಸೌಲಭ್ಯಗಳನ್ನು ಒದಗಿಸಲಾಗುತ್ತದೆ.

ಮೂರು ಹಂತಗಳಲ್ಲಿ ಪರಿಶೀಲನೆ

ಶನಿವಾರದ ಸಭೆಯಲ್ಲಿ ಅರ್ಜಿ ಅಥವಾ ಅಹವಾಲು ಸ್ವೀಕರಿಸಿದ ಬಳಿಕ ಸ್ಥಳದಲ್ಲೇ ವಿಲೇವಾರಿ ಆಗದ ಅರ್ಜಿ/ಅಹವಾಲುಗಳ ಪ್ರಗತಿಯನ್ನು ಅದರ ಮುಂದಿನ ಬುಧವಾರ ಮೂರು ಹಂತಗಳಲ್ಲಿ ಪರಿಶೀಲಿಸಲಾಗುತ್ತದೆ. ಅದರಂತೆ,

ತಾಲ್ಲೂಕು ಮಟ್ಟದಲ್ಲಿ ಬೆಳಿಗ್ಗೆ 9ರಿಂದ 11ರವರೆಗೆ ತಹಶೀಲ್ದಾರ್ ಮತ್ತು ತಾಲ್ಲೂಕು ಪಂಚಾಯಿತಿಯ ಕಾರ್ಯನಿರ್ವಾಹಕ ಅಧಿಕಾರಿಗಳು ತಮ್ಮ ವ್ಯಾಪ್ತಿಯಲ್ಲಿ ಸ್ವೀಕರಿಸಲಾದ ಅರ್ಜಿಗಳು ಮತ್ತು ಅಹವಾಲುಗಳ ಸ್ಥಿತಿಯನ್ನು ಅಧಿಕಾರಿಗಳೊಂದಿಗೆ ಪರಿಶೀಲಿಸುತ್ತಾರೆ. ತಾಲ್ಲೂಕು ಮಟ್ಟದಲ್ಲಿ ಪರಿಹರಿಸಲು ಸಾಧ್ಯವಾಗದ ಪ್ರಕರಣಗಳನ್ನು ಇ-ಕಚೇರಿ ಮೂಲಕ ಉಪವಿಭಾಗಾಧಿಕಾರಿಗಳಿಗೆ ಸಲ್ಲಿಸಲಾಗುತ್ತದೆ.

ಉಪವಿಭಾಗ ಮಟ್ಟದಲ್ಲಿ ಬೆಳಿಗ್ಗೆ 11ರಿಂದ ಮಧ್ಯಾಹ್ನ 1ರವರೆಗೆ ಉಪವಿಭಾಗಾಧಿಕಾರಿಗಳು ತಮ್ಮ ವ್ಯಾಪ್ತಿಯ ಮಾಹಿತಿಯನ್ನು ಕ್ರೋಢೀಕರಿಸಿ ಪರಿಶೀಲಿಸುತ್ತಾರೆ. ತಮ್ಮ ಹಂತದಲ್ಲೂ ಪರಿಹರಿಸಲಾಗದ ವಿಷಯಗಳು ಮತ್ತು ಅರ್ಜಿಗಳನ್ನು ಮುಂದಿನ ಕ್ರಮವಾಗಿ ಜಿಲ್ಲಾಧಿಕಾರಿಯವರಿಗೆ ಸಲ್ಲಿಸುತ್ತಾರೆ.

ಜಿಲ್ಲಾ ಮಟ್ಟದಲ್ಲಿ ಮಧ್ಯಾಹ್ನ 3ರಿಂದ ಸಂಜೆ 5ರವರೆಗೆ ಜಿಲ್ಲಾಧಿಕಾರಿಗಳು ಉಪವಿಭಾಗ ಮಟ್ಟದಿಂದ ಬಂದ ಮಾಹಿತಿಯನ್ನು ಕ್ರೋಢೀಕರಿಸಿ ಪರಿಶೀಲನೆ ನಡೆಸುತ್ತಾರೆ. ಅಗತ್ಯವಿದ್ದಲ್ಲಿ ಜಿಲ್ಲಾಮಟ್ಟದ ಅಧಿಕಾರಿಗಳನ್ನು ಖುದ್ದಾಗಿ ಸಭೆಗೆ ಹಾಜರಾಗುವಂತೆ ಸೂಚಿಸಬಹುದು. ಉಪವಿಭಾಗ ಮತ್ತು

Downloaded From:www.kpscvaani.com

ತಾಲ್ಲೂಕು ಮಟ್ಟದ ಅಧಿಕಾರಿಗಳಿಗೆ ವಿಡಿಯೊ ಅಥವಾ ಆಡಿಯೊ ಕಾನ್ಫರೆನ್ಸ್ ಮೂಲಕ ಭಾಗವಹಿಸಲು ಅವಕಾಶ ನೀಡಬಹುದು.

ತಮ್ಮ ಅಹವಾಲು ಪರಿಹಾರದ ಬಗ್ಗೆ ಅಸಮಾಧಾನ ಹೊಂದಿರುವ ಸಾರ್ವಜನಿಕರು ಸಂಬಂಧಿಸಿದ ಅಧಿಕಾರಿಯ ಮುಂದೆ ಖುದ್ದಾಗಿ ಹಾಜರಾಗಿ ತಮ್ಮ ಸಮಸ್ಯೆಯನ್ನು ಮಂಡಿಸಲು ಪ್ರತಿ ಹಂತದಲ್ಲೂ ಅವಕಾಶ ನೀಡಲಾಗುತ್ತದೆ.

ಸ್ವಯಂಚಾಲಿತವಾಗಿ ಮೇಲ್ದರ್ಜೆಗೆ

ನಿಗದಿತ ಅವಧಿಯಲ್ಲಿ ವಿಲೇವಾರಿಯಾಗದ ಅರ್ಜಿಗಳು ಮತ್ತು ಅಹವಾಲುಗಳು ಸಂಬಂಧಿಸಿದ ಇಲಾಖೆಯ ಉನ್ನತ ಅಧಿಕಾರಿಗಳಿಗೆ ಸ್ವಯಂಚಾಲಿತವಾಗಿ ಮೇಲ್ದರ್ಜೆಗೆ ವರ್ಗಾವಣೆಗೊಳ್ಳುವ ವ್ಯವಸ್ಥೆ ಜಾರಿಗೆ ಬರಲಿದೆ. ಹೀಗಾಗಿ, ಯಾವುದೇ ಅರ್ಜಿ ಅನಗತ್ಯವಾಗಿ ಬಾಕಿ ಉಳಿಯದಂತೆ ಮೇಲಿನ ಹಂತದಲ್ಲಿ ಕ್ರಮ ಕೈಗೊಳ್ಳಲು ಸಾಧ್ಯವಾಗುತ್ತದೆ.

ಪ್ರತಿ ಜಿಲ್ಲೆಗೆ ಒಬ್ಬ ಸರ್ಕಾರದ ಕಾರ್ಯದರ್ಶಿಯನ್ನು ಜಿಲ್ಲಾ ಉಸ್ತುವಾರಿ ಕಾರ್ಯದರ್ಶಿಯಾಗಿ ನೇಮಿಸಲಾಗುತ್ತದೆ. ಅವರು ಪ್ರತಿ ತಿಂಗಳ ಮೊದಲ ಮತ್ತು ಮೂರನೇ ಶುಕ್ರವಾರದಂದು ಆಯಾ ಜಿಲ್ಲೆಗೆ ಭೇಟಿ ನೀಡಿ, ಮರುದಿನ ಶನಿವಾರ ಜಿಲ್ಲಾ ಉಸ್ತುವಾರಿ ಸಚಿವರ ಅಧ್ಯಕ್ಷತೆಯಲ್ಲಿ ನಡೆಯುವ ಸಭೆಯ ಸಿದ್ಧತೆ ಮತ್ತು ಮೇಲ್ವಿಚಾರಣೆ ನಡೆಸಲಿದ್ದಾರೆ.

ಜಿಲ್ಲಾ ಮಟ್ಟದಲ್ಲಿ ಬಗೆಹರಿಯದ ಸಮಸ್ಯೆಗಳನ್ನು ಸಂಬಂಧಿಸಿದ ಇಲಾಖೆಗಳ ರಾಜ್ಯ ಮಟ್ಟದ ಕಾರ್ಯದರ್ಶಿಗಳೊಂದಿಗೆ ಸಮಾಲೋಚಿಸಿ ಪರಿಹರಿಸುವ ಜವಾಬ್ದಾರಿ ಜಿಲ್ಲಾ ಉಸ್ತುವಾರಿ ಕಾರ್ಯದರ್ಶಿಗಳದ್ದಾಗಿರುತ್ತದೆ. ಇದಕ್ಕಾಗಿ ಪ್ರತ್ಯೇಕ ಜಿಲ್ಲಾ ಉಸ್ತುವಾರಿ ಕಾರ್ಯದರ್ಶಿಗಳ ಪೋರ್ಟಲ್ ಸ್ಥಾಪಿಸಲಾಗಿದೆ. ಮುಖ್ಯ ಕಾರ್ಯದರ್ಶಿಯವರು ಪ್ರತಿ ತಿಂಗಳು ನಡೆಯುವ ಕಾರ್ಯದರ್ಶಿಗಳ ಸಭೆಯಲ್ಲಿ ಇದರ ಪ್ರಗತಿಯನ್ನು ಪರಿಶೀಲಿಸಲಿದ್ದಾರೆ.

ಸಿಎಂ ಮಟ್ಟದಲ್ಲೂ ಮೇಲ್ವಿಚಾರಣೆ

ಜಿಲ್ಲೆಗಳಲ್ಲಿ ಬಾಕಿ ಉಳಿದಿರುವ ಅರ್ಜಿಗಳು ಮತ್ತು ಅಹವಾಲುಗಳ ವಿಲೇವಾರಿ ಪ್ರಗತಿಯನ್ನು ಮುಖ್ಯಮಂತ್ರಿಯವರ ಅಧ್ಯಕ್ಷತೆಯಲ್ಲಿ ನಡೆಯುವ ಪರಿಶೀಲನಾ ಸಭೆಗಳಲ್ಲಿ ಅವಲೋಕಿಸಲಾಗುತ್ತದೆ. ಜಿಲ್ಲಾ ಉಸ್ತುವಾರಿ ಸಚಿವರೂ ಈ ಸಭೆಗಳಲ್ಲಿ ಭಾಗವಹಿಸಿ ಜಿಲ್ಲೆ, ತಾಲ್ಲೂಕು, ಹೋಬಳಿ ಹಾಗೂ ಇಲಾಖೆವಾರು ಬಾಕಿ ಇರುವ ಸಮಸ್ಯೆಗಳ ಕುರಿತು ಚರ್ಚಿಸಲಿದ್ದಾರೆ. ಅಗತ್ಯವಿದ್ದಲ್ಲಿ ನೀತಿ ಅಥವಾ ಯೋಜನೆಗಳಲ್ಲಿ ಬದಲಾವಣೆ ಮಾಡುವ ಕುರಿತೂ ಪರಿಶೀಲನೆ ನಡೆಸಲಾಗುತ್ತದೆ.

ಐಪಿಜಿಆರ್‌ಎಸ್ ಮೂಲಕ ದೂರು

ಸಾರ್ವಜನಿಕರಿಗೆ ವಿವಿಧ ಇಲಾಖೆಗಳ ಸೇವೆ ಮತ್ತು ಯೋಜನೆಗಳಿಗೆ ಸಂಬಂಧಿಸಿದ ದೂರುಗಳನ್ನು ದಾಖಲಿಸಲು ಸರ್ಕಾರ 'ಏಕೀಕೃತ ಸಾರ್ವಜನಿಕ ಕುಂದುಕೊರತೆ ನಿವಾರಣಾ ವ್ಯವಸ್ಥೆ'ಯನ್ನು (Integrated Public Grievance Redressal System – IPGRS) ರೂಪಿಸಲಾಗಿದೆ. ನಾಗರಿಕರು 1902 ಸಹಾಯವಾಣಿ ಮೂಲಕ ಅಥವಾ ipgrs.karnataka.gov.in ಪೋರ್ಟಲ್ ಮೂಲಕ ತಮ್ಮ ಕುಂದುಕೊರತೆಗಳನ್ನು ದಾಖಲಿಸಬಹುದು. ಕೃತಕ ಬುದ್ಧಿಮತ್ತೆ ಆಧಾರಿತ ವ್ಯವಸ್ಥೆಯ ನೆರವಿನಿಂದ ದೂರುಗಳನ್ನು ಮೂರು ಹಂತಗಳಲ್ಲಿ ಪರಿಶೀಲಿಸಿ ಪರಿಹರಿಸುವ ವ್ಯವಸ್ಥೆಯನ್ನೂ ರೂಪಿಸಲಾಗಿದೆ.

ಪ್ರತಿ ಸಭೆಯ ವಿವರ ಲಭ್ಯ

ಪ್ರತಿ 'ಪ್ರಜಾಸೇವಾ ಅಭಿಯಾನ' ಸಭೆಯ ಬಳಿಕ ಅದರ ಸಂಪೂರ್ಣ ವಿವರಗಳನ್ನು ಪೋರ್ಟಲ್‌ನಲ್ಲಿ ದಾಖಲಿಸಲಾಗುತ್ತದೆ. ಸಭೆಯ ಪ್ರಮುಖ ಅಂಶಗಳು, ಛಾಯಾಚಿತ್ರಗಳು, ವಿಡಿಯೊಗಳು ಮತ್ತು ಫಲಾನುಭವಿಗಳ ಅಭಿಪ್ರಾಯಗಳನ್ನು IPGRS ಪೋರ್ಟಲ್ ಹಾಗೂ ಸಾಮಾಜಿಕ ಜಾಲತಾಣಗಳಲ್ಲಿ 'Prajaseva Abhiyana' ಹೆಸರಿನ ಮೂಲಕ ಹಂಚಿಕೊಳ್ಳಲಾಗುತ್ತದೆ. ಇದರಿಂದ ಅಭಿಯಾನದಡಿ ನಡೆದ ಕಾರ್ಯಗಳ ಕುರಿತು ಸಾರ್ವಜನಿಕರಿಗೆ ಮಾಹಿತಿ ಸಿಗುವ ಜತೆಗೆ ಆಡಳಿತದಲ್ಲಿ ಪಾರದರ್ಶಕತೆ ಹೆಚ್ಚಿಸಲು ಸಾಧ್ಯವಾಗುತ್ತದೆ.

ಜನರಿಗಾಗಿ, ಜನರ ಬಳಿಗೆ ಆಡಳಿತ

ಒಟ್ಟಾರೆ, ಪ್ರಜಾಸೇವಾ ಅಭಿಯಾನವು ಕೇವಲ ಅಹವಾಲು ಸ್ವೀಕರಿಸುವ ಕಾರ್ಯಕ್ರಮವಲ್ಲ. ಜನರ ಬಳಿಗೆ ತೆರಳಿ ಸಮಸ್ಯೆಗಳನ್ನು ಆಲಿಸುವುದು, ಸೇವೆಗಳನ್ನು ಸಾಧ್ಯವಾದಷ್ಟೂ ಸ್ಥಳದಲ್ಲೇ ಒದಗಿಸುವುದು, ಮೂರು ಹಂತಗಳಲ್ಲಿ ಅವುಗಳ ಪ್ರಗತಿಯನ್ನು ಪರಿಶೀಲಿಸುವುದು ಮತ್ತು ಬಾಕಿ ಪ್ರಕರಣಗಳನ್ನು ಮೇಲ್ದರ್ಜೆಗೆ ವರ್ಗಾಯಿಸಿ ಅಂತಿಮ ಪರಿಹಾರಕ್ಕಾಗಿ ಒತ್ತಡ ತರುವುದು ಇದರ ಕಾರ್ಯವಿಧಾನವಾಗಿರುತ್ತದೆ.

ಅರ್ಜಿಯ ಸ್ಥಿತಿಯನ್ನು ಸಾರ್ವಜನಿಕರು ತಿಳಿದುಕೊಳ್ಳುವ ವ್ಯವಸ್ಥೆ, ಅಧಿಕಾರಿಗಳ ಹಂತವಾರು ಹೊಣೆಗಾರಿಕೆ, ನಿಗದಿತ ಅವಧಿಯಲ್ಲಿ ವಿಲೇವಾರಿ ಹಾಗೂ ಉನ್ನತ ಮಟ್ಟದ ನಿರಂತರ ಮೇಲ್ವಿಚಾರಣೆ ಇವೆಲ್ಲವನ್ನೂ ಒಳಗೊಂಡು ಆಡಳಿತವನ್ನು ಜನರ ಸಮೀಪಕ್ಕೆ ಕೊಂಡೊಯ್ಯುವ ಸದುದ್ದೇಶ ಇದರ ಹಿಂದಿದೆ.

ಸಾರ್ವಜನಿಕರು ತಮ್ಮ ಕುಂದುಕೊರತೆಗಳನ್ನು ಪರಿಹರಿಸಿಕೊಳ್ಳಲು ಮಾತ್ರವಲ್ಲದೆ, ಸರ್ಕಾರದ ವಿವಿಧ ಯೋಜನೆಗಳ ಕುರಿತು ಮಾಹಿತಿ ಪಡೆಯಲು ಮತ್ತು ಆಡಳಿತಕ್ಕೆ ತಮ್ಮ ಸಲಹೆ–ಸೂಚನೆ ನೀಡಲು 'ಪ್ರಜಾಸೇವಾ ಅಭಿಯಾನ'ವನ್ನು ಬಳಸಿಕೊಳ್ಳಬೇಕು ಎಂಬುದು ಸರ್ಕಾರದ ಆಶಯವಾಗಿದೆ.

Downloaded From:www.kpscvaani.com



ಬಹುಕಾಲದ ಬೇಡಿಕೆಗಳಿಗೆ ಸ್ಪಂದಿಸಿದ

ಮಂಗಳೂರು ಸಂಪುಟ ಸಭೆ

- ತುಳು ಭಾಷೆಗೆ ಹೆಚ್ಚುವರಿ ಆಡಳಿತ ಭಾಷೆಯ ಸ್ಥಾನಮಾನ
- ಕರಾವಳಿ ಅಭಿವೃದ್ಧಿಗೆ ರೂ. 32,611 ಕೋಟಿ ಯೋಜನೆಗಳಿಗೆ ಅಸ್ತು

ಇಬ್ರಾಹಿಂ ಅಡ್ಕಸ್ಥಳ

ಕರಾವಳಿ ಕರ್ನಾಟಕದ ಸಮಗ್ರ ಅಭಿವೃದ್ಧಿಗೆ ಹೊಸ ವೇಗ ನೀಡುವ ಉದ್ದೇಶದಿಂದ ಮಂಗಳೂರಿನಲ್ಲಿ ಸೆಪ್ಟೆಂಬರ್ 18ರಂದು ನಡೆದ ರಾಜ್ಯ ಸಚಿವ ಸಂಪುಟದ ವಿಶೇಷ ಸಭೆ ಹಲವು ಮಹತ್ವದ ನಿರ್ಧಾರಗಳಿಗೆ ಸಾಕ್ಷಿಯಾಯಿತು. ಗ್ರಾಮೀಣ ಮೂಲಸೌಕರ್ಯ, ಪ್ರವಾಸೋದ್ಯಮ, ಮೀನುಗಾರಿಕೆ, ಶಿಕ್ಷಣ, ಆರೋಗ್ಯ, ಸಾರಿಗೆ ಹಾಗೂ ನಗರಾಭಿವೃದ್ಧಿಗೆ ಸಂಬಂಧಿಸಿದಂತೆ ಒಟ್ಟು ರೂ. 32,611 ಕೋಟಿ ಮೊತ್ತದ ಯೋಜನೆಗಳಿಗೆ ಅನುಮೋದನೆ ನೀಡುವ ಮೂಲಕ ಕರಾವಳಿ ಭಾಗದ ಬಹುಕಾಲದ ಬೇಡಿಕೆಗಳಿಗೆ ಸರಕಾರ ಸ್ಪಂದನೆ ವ್ಯಕ್ತಪಡಿಸಿತು.

Downloaded From:www.kpscvaani.com



ಕರಾವಳಿ ಪ್ರದೇಶದ ಆರ್ಥಿಕತೆಗೆ ಬಲ ತುಂಬಿ ಉದ್ಯೋಗಾವಕಾಶಗಳನ್ನು ಸೃಷ್ಟಿಸುವ ಸಮಗ್ರ ದೃಷ್ಟಿಕೋನವನ್ನು ಈ ಸಭೆಯ ನಿರ್ಧಾರಗಳು ಪ್ರತಿಬಿಂಬಿಸಿವೆ. ಗ್ರಾಮೀಣ ಪ್ರದೇಶಗಳಲ್ಲಿ ರಸ್ತೆ, ಚರಂಡಿ ಮತ್ತು ಕುಡಿಯುವ ನೀರಿನ ಸೌಲಭ್ಯಗಳನ್ನು ಸುಧಾರಿಸುವ ಜೊತೆಗೆ ಕರಾವಳಿಯ ನೈಸರ್ಗಿಕ ಸಂಪತ್ತು, ಸಾಂಸ್ಕೃತಿಕ ಪರಂಪರೆ ಮತ್ತು ಪ್ರವಾಸೋದ್ಯಮದ ಸಾಧ್ಯತೆಗಳನ್ನು ಪರಿಣಾಮಕಾರಿಯಾಗಿ ಬಳಸಿಕೊಳ್ಳಲು ಸರಕಾರ ಮುಂದಾಗಿರುವುದನ್ನು ಸಂಪುಟ ಸಭೆಯ ನಿರ್ಧಾರಗಳು ಪ್ರತಿಬಿಂಬಿಸಿವೆ.

ತುಳು ಭಾಷೆಗೆ ದಕ್ಷಿಣ ಕನ್ನಡ ಮತ್ತು ಉಡುಪಿ ಜಿಲ್ಲೆಗಳ ವ್ಯಾಪ್ತಿಯಲ್ಲಿ ಹೆಚ್ಚುವರಿ ಆಡಳಿತ ಭಾಷೆಯ ಸ್ಥಾನಮಾನ ನೀಡಿದುದು ಈ ಸಭೆಯ ಮಹತ್ವದ ನಿರ್ಧಾರಗಳಲ್ಲಿ ಒಂದಾಗಿದೆ.. ಸುಮಾರು ನಾಲ್ಕು ದಶಕಗಳಿಂದ ಕೇಳಿಬರುತ್ತಿದ್ದ ಈ ಬೇಡಿಕೆಗೆ ಸಚಿವ ಸಂಪುಟ ಒಪ್ಪಿಗೆ ನೀಡಿತು. ಕನ್ನಡದ ಜೊತೆಗೆ ತುಳುವನ್ನು ಸರಕಾರಿ ಉದ್ದೇಶಗಳಿಗಾಗಿ ಬಳಸಲು ಅವಕಾಶ ಕಲ್ಪಿಸುವುದರೊಂದಿಗೆ, ಭಾಷೆಯ ಅಭಿವೃದ್ಧಿಗೆ ಅನುವಾದ, ತರಬೇತಿ ಮತ್ತು ಇತರ ಚಟುವಟಿಕೆಗಳಿಗಾಗಿ ವಾರ್ಷಿಕ ರೂ. 82 ಲಕ್ಷ ಒದಗಿಸಲು ನಿರ್ಧರಿಸಲಾಗಿದೆ. ಈ ಕ್ರಮವು ತುಳುನಾಡಿನ ಭಾಷಾ ಮತ್ತು ಸಾಂಸ್ಕೃತಿಕ ಅಸ್ಮಿತೆಗೆ ಅಧಿಕೃತ ಮನ್ನಣೆ ನೀಡುವ ಮಹತ್ವದ ಹೆಜ್ಜೆಯಾಗಿದೆ.

ಪ್ರತ್ಯೇಕ ಪ್ರವಾಸೋದ್ಯಮ ಕಾರ್ಯನೀತಿ

ಪ್ರವಾಸೋದ್ಯಮ ಕ್ಷೇತ್ರಕ್ಕೆ ಉತ್ತೇಜನ ನೀಡಲು ಅಂಗೀಕರಿಸಲಾದ 'ಕರಾವಳಿ ಮಲೆನಾಡು ಕರ್ನಾಟಕ ಪ್ರವಾಸೋದ್ಯಮ ಕಾರ್ಯನೀತಿ–2026' ಮತ್ತೊಂದು ಪ್ರಮುಖ ನಿರ್ಧಾರವಾಗಿದೆ. ರಾಜ್ಯಕ್ಕೆ ಭೇಟಿ ನೀಡುವ ಪ್ರವಾಸಿಗರಲ್ಲಿ ಶೇಕಡಾ 40ರಿಂದ 45ರಷ್ಟು ಮಂದಿ ಕರಾವಳಿ ಮತ್ತು ಮಲೆನಾಡು ಭಾಗಗಳಿಗೆ ಭೇಟಿ ನೀಡುತ್ತಾರೆ ಎಂಬ ಅಂದಾಜಿದೆ. ಈ ವಲಯದಿಂದ ಸುಮಾರು ರೂ.2,876 ಕೋಟಿ ವಿದೇಶಿ ವಿನಿಮಯ ಆದಾಯ ದೊರೆಯುತ್ತಿದೆ. ಈ ಸಾಮರ್ಥ್ಯವನ್ನು ಮತ್ತಷ್ಟು ವಿಸ್ತರಿಸಲು ರೂ.500 ಕೋಟಿ ವೆಚ್ಚದಲ್ಲಿ ಕಾರ್ಯನೀತಿಯನ್ನು ಅನುಷ್ಠಾನಗೊಳಿಸಲು ಉದ್ದೇಶಿಸಲಾಗಿದೆ.

ಕರಾವಳಿಯಿಂದ ಪಶ್ಚಿಮ ಘಟ್ಟದವರೆಗೆ ನೀಲಿ–ಹಸಿರು ಪ್ರವಾಸಿ ಸರ್ಕ್ಯೂಟ್, ಧಾರ್ಮಿಕ ಮತ್ತು ಪಾರಂಪರಿಕ ತಾಣಗಳು, ಬೀಚ್ ಮತ್ತು ಸರ್ಫಿಂಗ್, ಕ್ರೂಸ್ ಹಾಗೂ ಹಿನ್ನೀರಿನ ಪ್ರವಾಸೋದ್ಯಮ, ಕರಾವಳಿ ಆಹಾರ, ಕಾಫಿ ತೋಟಗಳು, ಪರಿಸರ ಪ್ರವಾಸೋದ್ಯಮ ಮತ್ತು ಸಾಹಸ ಚಟುವಟಿಕೆಗಳಿಗೆ ಆದ್ಯತೆ, ಪ್ರವಾಸಿ ಮೂಲಸೌಕರ್ಯ, ಸಂಪರ್ಕ ವ್ಯವಸ್ಥೆ ಮತ್ತು ಸ್ಥಳೀಯರಿಗೆ ತರಬೇತಿ ಹಾಗೂ ಉದ್ಯೋಗಾವಕಾಶಗಳನ್ನು ಒದಗಿಸುವುದಕ್ಕೆ ಈ ಕಾರ್ಯನೀತಿಯಲ್ಲಿ ಒತ್ತು ನೀಡಲಾಗಿದೆ. ಹೂಡಿಕೆದಾರರಿಗೆ ಅನುಕೂಲವಾಗುವಂತೆ ಏಕಗವಾಕ್ಷಿ ವ್ಯವಸ್ಥೆ (ಸಿಂಗಲ್ ವಿಂಡೊ ಸಿಸ್ಟಮ್) ಮತ್ತು ಪ್ರವಾಸೋದ್ಯಮ ಹೂಡಿಕೆ ಸಹಾಯ ಕೇಂದ್ರಗಳನ್ನು ಸ್ಥಾಪಿಸುವ ಉದ್ದೇಶವನ್ನೂ ಇದು ಹೊಂದಿದೆ.

ಕರಾವಳಿಯ ಪ್ರವಾಸಿ ತಾಣಗಳನ್ನು ಅಭಿವೃದ್ಧಿಪಡಿಸುವ ನಿಟ್ಟಿನಲ್ಲಿ ದಕ್ಷಿಣ ಕನ್ನಡ, ಉಡುಪಿ ಮತ್ತು ಉತ್ತರ ಕನ್ನಡ



Downloaded From:www.kpscvaani.com







ಜಿಲ್ಲೆಗಳ 12 ದ್ವೀಪಗಳನ್ನು ಸಾರ್ವಜನಿಕ-ಖಾಸಗಿ ಸಹಭಾಗಿತ್ವದಡಿ ಅಭಿವೃದ್ಧಿಪಡಿಸಲು ನಿರ್ಧರಿಸಲಾಗಿದೆ. ಮಂಗಳೂರಿನ ದೀಪಸ್ತಂಭದ ಸುತ್ತಲಿನ ಪ್ರದೇಶದಲ್ಲಿ ಪ್ರವಾಸೋದ್ಯಮ ಮತ್ತು ಆತಿಥ್ಯ ಮೂಲಸೌಕರ್ಯ ನಿರ್ಮಾಣಕ್ಕೆ ಅನುಮೋದನೆ ನೀಡಲಾಗಿದೆ. ಕೋಡಿಕಲ್ನಲ್ಲಿ ವೆಲ್‌ನೆಸ್ ರೆಸಾರ್ಟ್, ತಣ್ಣೀರುಭಾವಿಯಲ್ಲಿ ಪರಿಸರ ಸ್ನೇಹಿ ಬೀಚ್ ಪ್ರವಾಸೋದ್ಯಮ ಸೌಲಭ್ಯಗಳು ಹಾಗೂ ಉಡುಪಿಯ ತ್ರಾಸಿ-ಮರವಂತೆ ಬೀಚ್ನಲ್ಲಿ ಪ್ರವಾಸಿ ಸೌಲಭ್ಯಗಳನ್ನು ಅಭಿವೃದ್ಧಿಪಡಿಸುವ ಯೋಜನೆಗಳು ಈ ಪ್ರಯತ್ನದ ಭಾಗವಾಗಿವೆ. ಇಂತಹ ಯೋಜನೆಗಳು ಸ್ಥಳೀಯ ಉದ್ಯಮಿಗಳು, ಸಾರಿಗೆ ಸೇವೆ ಒದಗಿಸುವವರು, ಕರಕುಶಲ ವಸ್ತುಗಳ ಉತ್ಪಾದಕರು ಮತ್ತು ಆತಿಥ್ಯ ಕ್ಷೇತ್ರದಲ್ಲಿ ತೊಡಗಿಸಿಕೊಂಡವರಿಗೆ ಹೊಸ ಅವಕಾಶಗಳನ್ನು ಸೃಷ್ಟಿಸುವ ನಿರೀಕ್ಷೆಯಿದೆ.

ಮೀನುಗಾರಿಕೆ ಬಲವರ್ಧನೆಗೆ ಒತ್ತು

ಮೀನುಗಾರಿಕೆಯು ಕರಾವಳಿ ಭಾಗದ ಮುಖ್ಯ ಜೀವನೋಪಾಯ-ವಾಗಿರುವುದರಿಂದ ಮೀನುಗಾರಿಕ ವಲಯದ ಅಭಿವೃದ್ಧಿಗೆ ಆದ್ಯತೆ ನೀಡಲು ಸಂಪುಟ ಸಭೆಯಲ್ಲಿ ನಿರ್ಧರಿಸಲಾಗಿದೆ. ಮುಲ್ಕಿ ಸಮೀಪದ ಬಳ್ಕುಂಜೆಯಲ್ಲಿ 150 ಎಕರೆ ಪ್ರದೇಶದಲ್ಲಿ ಮೀನುಗಾರಿಕಾ ಪಾರ್ಕ್ ನಿರ್ಮಾಣಕ್ಕೆ ಉದ್ದೇಶಿಸಲಾಗಿದೆ. ಮೀನುಗಾರಿಕಾ ಉತ್ಪನ್ನಗಳ ಸಂಸ್ಕರಣೆ, ಮೌಲ್ಯವರ್ಧನೆ ಮತ್ತು ರಫ್ತಿಗೆ ಪೂರಕವಾದ ಸಾಮಾನ್ಯ ಸೌಲಭ್ಯಗಳನ್ನು ಅಭಿವೃದ್ಧಿಪಡಿಸಲು ರೂ.30 ಕೋಟಿ ವೆಚ್ಚದ ವಿಶೇಷ ಸಂಸ್ಕರಣಾ ವಲಯವನ್ನು ಸ್ಥಾಪಿಸಲಾಗುವುದು. ಮಂಗಳೂರು ಮೀನುಗಾರಿಕಾ ಬಂದರಿನ ಮೇಲಿನ ಒತ್ತಡ ಕಡಿಮೆ ಮಾಡಲು ಎಕ್ಕೂರಿನಲ್ಲಿ ರೂ.30 ಕೋಟಿ ವೆಚ್ಚದಲ್ಲಿ ಆಧುನಿಕ ಸಗಟು ಮೀನು ಮಾರುಕಟ್ಟೆ ನಿರ್ಮಾಣಕ್ಕೆ ನಿರ್ಧರಿಸಲಾಗಿದೆ. ಮಂಗಳೂರಿನ ಮೀನುಗಾರಿಕಾ ಕಾಲೇಜನ್ನು ಮೀನುಗಾರಿಕಾ ವಿಶ್ವವಿದ್ಯಾಲಯವಾಗಿ ಉನ್ನತೀಕರಿಸಲು ತಾತ್ವಿಕ ಅನುಮೋದನೆ ನೀಡಿರುವುದು ಈ ಕ್ಷೇತ್ರದ ಶಿಕ್ಷಣ ಮತ್ತು ಸಂಶೋಧನೆಗೆ ಉತ್ತೇಜನ ನೀಡುವ ನಿರೀಕ್ಷೆಯಿದೆ.

ಸಂಚಾರ ಮೂಲಸೌಕರ್ಯ

ಸಾರಿಗೆ ಮತ್ತು ಸಂಪರ್ಕ ವ್ಯವಸ್ಥೆಯನ್ನು ಸುಧಾರಿಸುವ ಉದ್ದೇಶದಿಂದ ಕಾರವಾರ ವಿಮಾನ ನಿಲ್ದಾಣದ ರನ್‌ವೇಯನ್ನು ವಿಸ್ತರಿಸಲು ಯೋಜನಾ ವೆಚ್ಚವನ್ನು ರೂ.98.24 ಕೋಟಿಯಿಂದ ರೂ.250.05 ಕೋಟಿಗೆ ಹೆಚ್ಚಿಸಲಾಗಿದೆ. ಮಂಗಳೂರು ಸೇರಿದಂತೆ

ಬಂದರು ಅಭಿವೃದ್ಧಿ

ಇದಲ್ಲದೆ, ಉತ್ತರ ಕನ್ನಡ ಜಿಲ್ಲೆಯ ಮಂಕಿ ಬಂದರಿನಲ್ಲಿ ರೂ.6,925 ಕೋಟಿ ವೆಚ್ಚದಲ್ಲಿ ಬಹುಉದ್ದೇಶದ ಬಂದರು ಮತ್ತು ಹಡಗು ನಿರ್ಮಾಣ ಕೇಂದ್ರವನ್ನು ಅಭಿವೃದ್ಧಿಪಡಿಸಲು ಉದ್ದೇಶಿಸಲಾಗಿದೆ. ಈ ಯೋಜನೆಯಿಂದ ಪ್ರತ್ಯಕ್ಷ ಮತ್ತು ಪರೋಕ್ಷವಾಗಿ 44,800 ಉದ್ಯೋಗಗಳು ಸೃಷ್ಟಿಯಾಗುವ ನಿರೀಕ್ಷೆಯಿದೆ. ಉಡುಪಿ ಜಿಲ್ಲೆಯ ಗಂಗೊಳ್ಳಿಯಲ್ಲಿ ಹಡಗು ನಿರ್ಮಾಣ ಅಂಗಳ ಸ್ಥಾಪನೆಗೆ ಯೋಜನೆ ರೂಪಿಸಲಾಗಿದೆ. ಈ ಯೋಜನೆಗಳು ಕರಾವಳಿಯ ಕೈಗಾರಿಕಾ ಚಟುವಟಿಕೆಗಳನ್ನು ವಿಸ್ತರಿಸುವ ಜೊತೆಗೆ ಬಂದರು ಆಧಾರಿತ ವ್ಯಾಪಾರ ಮತ್ತು ಉದ್ಯೋಗಕ್ಕೆ ಉತ್ತೇಜನ ನೀಡುವ ಸಾಧ್ಯತೆಯಿದೆ.

Downloaded From:www.kpscvaani.com



ದಕ್ಷಿಣ ಕನ್ನಡ ಮತ್ತು ಉಡುಪಿ ಜಿಲ್ಲೆಗಳಲ್ಲಿ ಹಲವು ಪ್ರಮುಖ ಸೇತುವೆಗಳ ನಿರ್ಮಾಣ ಹಾಗೂ ಮರುನಿರ್ಮಾಣಕ್ಕೆ ಅನುಮೋದನೆ ನೀಡಲಾಗಿದೆ. ಮಂಗಳೂರು ಮಹಾನಗರ ಪಾಲಿಕೆ ವ್ಯಾಪ್ತಿಯ ಹದಗೆಟ್ಟ ರಸ್ತೆಗಳನ್ನು ಸುಧಾರಿಸಲು ರೂ.400 ಕೋಟಿ ವಿಶೇಷ ಅನುದಾನ ಒದಗಿಸಲು ತೀರ್ಮಾನಿಸಲಾಗಿದೆ. ಗುರುಪುರ ಮತ್ತು ನೇತ್ರಾವತಿ ನದಿಗಳಲ್ಲಿ ಜಲ ಮೆಟ್ರೋ ಯೋಜನೆಯ ಕಾರ್ಯಸಾಧ್ಯತೆಯನ್ನು ಪರಿಶೀಲಿಸಲು ಸಹ ಒಪ್ಪಿಗೆ ನೀಡಲಾಗಿದೆ. ಈ ಯೋಜನೆಗಳು ಜನರ ದೈನಂದಿನ ಸಂಚಾರವನ್ನು ಸುಗಮಗೊಳಿಸುವ ಜೊತೆಗೆ, ವ್ಯಾಪಾರ ಮತ್ತು ಪ್ರವಾಸೋದ್ಯಮ ಚಟುವಟಿಕೆಗಳಿಗೆ ಪೂರಕವಾಗುವ ಸಾಧ್ಯತೆಯಿದೆ.

ಗ್ರಾಮೀಣ ಮೂಲಸೌಕರ್ಯಕ್ಕೆ ಸಂಬಂಧಿಸಿದಂತೆ, ರೂ.10,000 ಕೋಟಿ ವೆಚ್ಚದಲ್ಲಿ 15,000 ಕಿ.ಮೀ. ಗ್ರಾಮೀಣ ಸಂಪರ್ಕ ರಸ್ತೆಗಳ ಅಭಿವೃದ್ಧಿಗೆ ಆಡಳಿತಾತ್ಮಕ ಅನುಮೋದನೆ ನೀಡಲಾಗಿದೆ. ಗ್ರಾಮಗಳ ಒಳಗಿನ ರಸ್ತೆ ಮತ್ತು ಚರಂಡಿ ನಿರ್ಮಾಣಕ್ಕೆ ರೂ.6,000 ಕೋಟಿ ವೆಚ್ಚದ ಯೋಜನೆಗೆ ಒಪ್ಪಿಗೆ ದೊರೆತಿದೆ. ವಿವಿಧ ಬಹುಗ್ರಾಮ ಕುಡಿಯುವ ನೀರಿನ ಯೋಜನೆಗಳ ಕಾರ್ಯಾಚರಣೆ ಮತ್ತು ನಿರ್ವಹಣೆಯನ್ನು ಮುಂದುವರಿಸುವುದರಿಂದ ಸಾವಿರಾರು ಜನರಿಗೆ ಪ್ರಯೋಜನವಾಗಲಿದೆ. ದಕ್ಷಿಣ ಕನ್ನಡ, ಉಡುಪಿ ಮತ್ತು ಉತ್ತರ ಕನ್ನಡ ಜಿಲ್ಲೆಗಳ 49 ಕರ್ನಾಟಕ ಪಬ್ಲಿಕ್ ಶಾಲೆಗಳ ಅಭಿವೃದ್ಧಿಗೆ ರೂ.245 ಕೋಟಿ ಮೀಸಲಿಡಲಾಗಿದೆ.

ಆರೋಗ್ಯ, ಕ್ರೀಡಾ ಸೌಕರ್ಯ

ಆರೋಗ್ಯ ಕ್ಷೇತ್ರದಲ್ಲಿ ದಕ್ಷಿಣ ಕನ್ನಡ ಜಿಲ್ಲೆಯ ಪುತ್ತೂರಿನಲ್ಲಿ ರೂ.549.79 ಕೋಟಿ ವೆಚ್ಚದಲ್ಲಿ ಸರ್ಕಾರಿ ವೈದ್ಯಕೀಯ ಕಾಲೇಜು, ಬೋಧನಾ ಆಸ್ಪತ್ರೆ ಮತ್ತು ಹಾಸ್ಟೆಲ್‌ಗಳನ್ನು ನಿರ್ಮಿಸಲು ಸಂಪುಟ ಅನುಮೋದನೆ ನೀಡಿದೆ. ಮಂಗಳೂರಿನ ವೆನ್‌ಲಾಕ್ ಜಿಲ್ಲಾ ಆಸ್ಪತ್ರೆಯಲ್ಲಿ ಮೊದಲ ಹಂತದಲ್ಲಿ 200 ಹಾಸಿಗೆಗಳನ್ನು ಹೆಚ್ಚಿಸಲು ನಿರ್ಧರಿಸಲಾಗಿದೆ. ಈ ಕ್ರಮಗಳು ದಕ್ಷಿಣ ಕನ್ನಡ ಮಾತ್ರವಲ್ಲದೆ ನೆರೆಯ ಜಿಲ್ಲೆಗಳು ಹಾಗೂ ಕೇರಳದಿಂದ ಚಿಕಿತ್ಸೆಗಾಗಿ ಬರುವ ರೋಗಿಗಳಿಗೂ ಅನುಕೂಲ ಉಂಟುಮಾಡಲಿವೆ.

ಮಂಗಳೂರಿನ ಮಂಗಳಾ ಕ್ರೀಡಾಂಗಣವನ್ನು ಅಂತಾರಾಷ್ಟ್ರೀಯ ಮಟ್ಟಕ್ಕೆ ಅಭಿವೃದ್ಧಿಪಡಿಸುವುದು, ಉಡುಪಿ ಜಿಲ್ಲಾ ಕ್ರೀಡಾಂಗಣದಲ್ಲಿ ಸಿಂಥೆಟಿಕ್ ಟ್ರ್ಯಾಕ್ ಅಳವಡಿಸುವುದು, ಕಡಲ ಜೈವಿಕ ತಂತ್ರಜ್ಞಾನ ನೀತಿಗೆ ಅನುಮೋದನೆ ಹಾಗೂ ಕರಾವಳಿ ಪ್ರದೇಶದ ಒಳಚರಂಡಿ ವ್ಯವಸ್ಥೆ ಸುಧಾರಣೆಗೆ ರೂ.100 ಕೋಟಿ ವೆಚ್ಚದಲ್ಲಿ ಕಾಮಗಾರಿ ಕೈಗೊಳ್ಳುವ ನಿರ್ಧಾರಗಳು ಇತರ ಪ್ರಮುಖ ಅಂಶಗಳಾಗಿವೆ. ಕರಾವಳಿಯ ಧಾರ್ಮಿಕ, ಸಾಮಾಜಿಕ ಮತ್ತು ಶೈಕ್ಷಣಿಕ ಸಂಸ್ಥೆಗಳ ಮೂಲಸೌಕರ್ಯ ಅಭಿವೃದ್ಧಿಗೆ ವಿಶೇಷ ಅನುದಾನಗಳನ್ನು ಮಂಜೂರು ಮಾಡಲಾಗಿದೆ. ಕಂಬಳದ ವಾರ್ಷಿಕ ಅನುದಾನವನ್ನು ರೂ.40 ಲಕ್ಷದಿಂದ ರೂ.1 ಕೋಟಿಗೆ ಹೆಚ್ಚಿಸಲಾಗಿದೆ.

ಮಂಗಳೂರಿನಲ್ಲಿ ನಡೆದ ಸಚಿವ ಸಂಪುಟ ಸಭೆಯು ಕರಾವಳಿಯ ಅಭಿವೃದ್ಧಿಯನ್ನು ರಸ್ತೆ ಮತ್ತು ಕಟ್ಟಡಗಳ ನಿರ್ಮಾಣಕ್ಕೆ ಮಾತ್ರ ಸೀಮಿತಗೊಳಿಸದೆ, ಭಾಷೆ, ಸಂಸ್ಕೃತಿ, ಪ್ರವಾಸೋದ್ಯಮ, ಮೀನುಗಾರಿಕೆ, ಆರೋಗ್ಯ ಮತ್ತು ಶಿಕ್ಷಣವನ್ನು ಒಳಗೊಂಡ ಸಮಗ್ರ ಬೆಳವಣಿಗೆಗೆ ಗಮನ ಹರಿಸಿರುವುದು ಸ್ಪಷ್ಟವಾಗಿದೆ. ಈ ನಿರ್ಧಾರಗಳು ಪರಿಣಾಮಕಾರಿಯಾಗಿ ಅನುಷ್ಠಾನಗೊಂಡಲ್ಲಿ ಕರಾವಳಿ ಭಾಗದ ಜನರ ಜೀವನಮಟ್ಟ ಸುಧಾರಣೆಗೊಂಡು ಸ್ಥಳೀಯ ಉದ್ಯೋಗ, ಹೂಡಿಕೆ ಮತ್ತು ಆರ್ಥಿಕ ಚಟುವಟಿಕೆಗಳಿಗೆ ಹೊಸ ಅವಕಾಶಗಳು ಸೃಷ್ಟಿಯಾಗುವ ನಿರೀಕ್ಷೆಯಿದೆ. ■



Downloaded From:www.kpscvaani.com



ನವೆಂಬರ್ 26ರಂದು ಸಂವಿಧಾನ ದಿನ

ಸಂವಿಧಾನ ರಚನೆ ನಡೆದು ಬಂದ ಹಾದಿ...

ಮಹೇಶ್ ವಿ. ಮುಡಿಗುಂಡ

ಭಾರತದ ಸಂವಿಧಾನ ರಚನೆಯ ಹಿಂದೆ ಸ್ವಾತಂತ್ರ್ಯ ಹೋರಾಟದ ಆಶಯಗಳು, ಮಹನೀಯರ ದೂರದೃಷ್ಟಿ ಹಾಗೂ ಸುದೀರ್ಘ ಚರ್ಚೆಗಳ ಇತಿಹಾಸವಿದೆ. ನವೆಂಬರ್ 26 ರಂದು ಸಂವಿಧಾನ ದಿನಾಚರಣೆಯ ಹಿನ್ನೆಲೆಯಲ್ಲಿ ಈ ಲೇಖನ ಸಂವಿಧಾನ ರಚನೆಯ ಪ್ರಮುಖ ಘಟ್ಟಗಳು, ಸವಾಲುಗಳು ಮತ್ತು ಐತಿಹಾಸಿಕ ನಿರ್ಣಯಗಳ ಮೇಲೆ ಬೆಳಕು ಚೆಲ್ಲಿದೆ.

ಒಂದು ದೇಶವನ್ನು ಹೇಗೆ ನಡೆಸಬೇಕು, ಆ ದೇಶದ ಪ್ರಜೆಗಳು ಹೇಗೆ ಸಾರ್ವಜನಿಕವಾಗಿ ನಡೆದುಕೊಳ್ಳಬೇಕು. ಸರ್ಕಾರ, ಅಧಿಕಾರಿಗಳು ಮತ್ತು ಜನ ಪ್ರತಿನಿಧಿಗಳ ಹಕ್ಕು ಮತ್ತು ಕರ್ತವ್ಯಗಳು ಯಾವುವು ಎಂಬುದರ ಬಗ್ಗೆ ನಿರ್ಧರಿಸುವ ಮೂಲಭೂತ ಕಾನೂನುಗಳ ಸಮೂಹವನ್ನೇ ಸಂವಿಧಾನ ಎನ್ನಲಾಗುತ್ತದೆ.

ಪ್ರಪಂಚದ ಅತ್ಯಂತ ಹಳೆಯ ಸಂವಿಧಾನ ಯುರೋಪ್ ಭಾಗದಲ್ಲಿ ಕಂಡು ಬರುವ ಸ್ಯಾನ್ ಮೆರಿನೋ ದೇಶದ ಸಂವಿಧಾನವಾಗಿದೆ. ಇದು ಇಟಲಿಯಿಂದ ಸುತ್ತುವರೆದ ಅತ್ಯಂತ ಸಣ್ಣ ಸ್ವತಂತ್ರ ರಾಷ್ಟ್ರವಾಗಿದೆ. ಈ ಸಂವಿಧಾನವು 1263ರಲ್ಲಿ ಮೂಲತಃ ಕಾನೂನು, ಆಡಳಿತ, ರಕ್ಷಣೆ, ತೆರಿಗೆ ಸಂಗ್ರಹ ಮತ್ತು ರಾಜಕೀಯ ವ್ಯವಸ್ಥೆಯ ಬಗ್ಗೆ ರೂಪುಗೊಂಡಿತು. ತದನಂತರ 1600 ಅಕ್ಟೋಬರ್ 8ರಂದು ಶಾಸಕಾಂಗ, ಕಾರ್ಯಾಂಗ, ನಾಗರಿಕ ನ್ಯಾಯ, ಅಪರಾಧ ನ್ಯಾಯ ಮತ್ತು ಮೇಲ್ಮನವಿ ಕುರಿತು ಸಂಪೂರ್ಣ ಸಂಸದೀಯ ಗಣರಾಜ್ಯವಾಗಿ ಸ್ಯಾನ್ ಮೆರಿನೋ ಸಂವಿಧಾನ ಜಾರಿಗೆ ಬಂದಿತ್ತು.

ಅಮೆರಿಕಾ ದೇಶವು 1776ರಲ್ಲಿ ಬ್ರಿಟಿಷರಿಂದ ಸ್ವಾತಂತ್ರ್ಯ ಪಡೆದು, ಅಲ್ಲಿನ ಜನರ ಸಾರ್ವಭೌಮತ್ವವನ್ನು ಸ್ಥಾಪಿಸಲು ಜೇಮ್ಸ್ ಮ್ಯಾಡಿಸನ್ ಅವರ ನೇತೃತ್ವದಲ್ಲಿ 6 ಜನ ಸದಸ್ಯರ ಸಮ್ಮುಖದಲ್ಲಿ ಫಿಲಿಡೆಲ್ಫಿಯಾದಲ್ಲಿ ಸಭೆ ಸೇರಿ 1787ರಲ್ಲಿ ಆ ಸಂವಿಧಾನವು ಅಂಗೀಕಾರವಾಯಿತು. ಅಂತಿಮವಾಗಿ 1789ರಲ್ಲಿ ಜಾರಿಗೆ ಬಂದಿತು. ಅಮೆರಿಕಾ ಸಂಯುಕ್ತ ಸಂಸ್ಥಾನದ ಸಂವಿಧಾನವು ಪ್ರಪಂಚದ ಅತ್ಯಂತ ಹಳೆಯ ಲಿಖಿತ ಸಂವಿಧಾನವಾಗಿದೆ.

ಭಾರತೀಯ ಸಂವಿಧಾನದ ಬೆಳವಣಿಗೆ

ಬ್ರಿಟಿಷ್ ಆಳ್ವಿಕೆಯ ಕಾಲದಿಂದಲ್ಲೂ ಕಾಯ್ದೆಗಳು ಹಾಗೂ ಕಾನೂನುಗಳು ಹಂತ ಹಂತವಾಗಿ ಮಾರ್ಪಾಡು ಆಗುತ್ತಾ ಬಂದಿವೆ. ಬ್ರಿಟಿಷರ ಅವಧಿಯಲ್ಲಿ ಜಾರಿಗೆ ಬಂದ ಹಲವಾರು ಕಾನೂನುಗಳು ಭಾರತದ ಸಂವಿಧಾನದ ಚೌಕಟ್ಟಿಗೆ ಬಲವಾದ ಅಡಿಪಾಯವನ್ನು ಹಾಕುತ್ತಾ ಬಂದವು. ಈಸ್ಟ್ ಇಂಡಿಯಾ ಕಂಪನಿಯನ್ನು ನಿಯಂತ್ರಿಸಲು 1773ರಲ್ಲಿ ರೆಗ್ಯುಲೇಟಿಂಗ್ ಕಾಯ್ದೆ ಜಾರಿಗೆ ಬಂದಿತು. ಕೇಂದ್ರೀಕೃತ ಆಡಳಿತಕ್ಕೆ ಮುನ್ನುಡಿ ಬರೆಯಲು ಈ ಕಾಯ್ದೆಯನ್ನು ತರಲಾಯಿತು. 1858ರಲ್ಲಿ ಈಸ್ಟ್ ಇಂಡಿಯಾ ಕಂಪನಿ ಆಡಳಿತ ಕೊನೆಗೊಂಡು ಭಾರತದ ಆಡಳಿತವು ಬ್ರಿಟಿಷ್ ರಾಣಿಯ ವಶಕ್ಕೆ ಹೋಯಿತು. ಈ ಕಾಯ್ದೆಯು ಅಂದಿನ ಕಲ್ಕತ್ತಾದಲ್ಲಿ ಸುಪ್ರೀಂಕೋರ್ಟ್ ಸ್ಥಾಪನೆಗೆ ಅವಕಾಶ ಮಾಡಿಕೊಟ್ಟಿತ್ತು.

1784ರ ಪಿಟ್ಸ್ ಇಂಡಿಯಾ ಆಕ್ಟ್ ಬ್ರಿಟಿಷ್ ಭಾರತದ ಆಡಳಿತದಲ್ಲಿ ಹೆಚ್ಚಿನ ನಿಯಂತ್ರಣ ಸಾಧಿಸಿತು. 1813ರ ಚಾರ್ಟರ್ ಆಕ್ಟ್ ಕಾಯ್ದೆಯು ಬ್ರಿಟಿಷ್ ಈಸ್ಟ್ ಇಂಡಿಯಾ ಕಂಪನಿಯ ಮುಖಾಂತರ

Downloaded From:www.kpscvaani.com



ಭಾರತೀಯರ ಶಿಕ್ಷಣಕ್ಕಾಗಿ 1 ಲಕ್ಷ ರೂಪಾಯಿಗಳನ್ನು ಮೀಸಲಿಡುವ ವ್ಯವಸ್ಥೆಯನ್ನು ಮಾಡಲಾಯಿತು. 1833ರ ಚಾರ್ಟರ್ ಆಕ್ಟ್‌ನ ಪ್ರಕಾರ ಭಾರತದಲ್ಲಿ ಗವರ್ನರ್ ಜನರಲ್‌ರನ್ನು ನೇಮಕ ಮಾಡಲಾಯಿತು. ಮೊದಲ ಗವರ್ನರ್ ಜನರಲ್ ಆಗಿ ಲಾರ್ಡ್ ವಿಲಿಯಂ ಬೆಂಟಿಂಗ್ ನೇಮಕಗೊಂಡರು.

1853ರ ಚಾರ್ಟರ್ ಆಕ್ಟ್ ಕಾಯ್ದೆಯು ಗವರ್ನರ್ ಜನರಲ್ ಕೌನ್ಸಿಲ್ ಶಾಸನ ಮತ್ತು ಕಾರ್ಯಾಂಗ ಕಾರ್ಯಗಳನ್ನು ಪ್ರತ್ಯೇಕಿಸಿತು. ಮುಕ್ತ ಸ್ಪರ್ಧಾತ್ಮಕ ಪರೀಕ್ಷೆಯ ಮೂಲಕ ನಾಗರಿಕ ಸೇವೆಗೆ ನೇಮಕಾತಿ ಮಾಡುವ ಅವಕಾಶವನ್ನು ಕಲ್ಪಿಸಿತು. 1858ರ ಭಾರತ ಸರ್ಕಾರ ಕಾಯ್ದೆಯು ಭಾರತ ಪ್ರಥಮ ಸ್ವಾತಂತ್ರ್ಯ ಸಂಗ್ರಾಮದ ನಂತರ ಜಾರಿಗೆ ಬಂದ ಪರಿಣಾಮವಾಗಿ ಗವರ್ನರ್ ಜನರಲ್‌ಗೆ ವೈಸ್‌ರಾಯ್ ಸ್ಥಾನಮಾನ ನೀಡಲಾಯಿತು.

1861ರ ಇಂಡಿಯಾ ಕೌನ್ಸಿಲ್ ಕಾಯ್ದೆ:

1861ರ ಇಂಡಿಯಾ ಕೌನ್ಸಿಲ್ ಕಾಯ್ದೆಯ ಅನುಸಾರ ಶಾಸನ ಸಭೆಯಲ್ಲಿ ಭಾರತೀಯರನ್ನು ನಾಮನಿರ್ದೇಶನ ಮಾಡುವ ವ್ಯವಸ್ಥೆ ಆರಂಭವಾಯಿತು. ಭಾರತೀಯರಿಗೆ ಬಾಂಬೆ ಮತ್ತು ಮದ್ರಾಸ್ ಪ್ರಾಂತ್ಯಗಳಲ್ಲಿ ಕೆಲವು ಶಾಸನಾಧಿಕಾರಗಳನ್ನು ನೀಡಲಾಯಿತು. ತುರ್ತು ಪರಿಸ್ಥಿತಿ ಸಂಧರ್ಭದಲ್ಲಿ ವೈಸ್‌ರಾಯ್‌ಗೆ ವಿಶೇಷ ಅಧಿಕಾರ ಚಲಾಯಿಸುವ ಅಧಿಕಾರವನ್ನು ನೀಡಲಾಯುತು.

1892ರ ಇಂಡಿಯಾ ಕೌನ್ಸಿಲ್ ಕಾಯ್ದೆ

ಈ ಕಾಯ್ದೆಯ ಪ್ರಕಾರ ಶಾಸನ ಸಭೆಯಲ್ಲಿ ಸದಸ್ಯರ ಸಂಖ್ಯೆಯನ್ನು ಹೆಚ್ಚಿಸಲಾಯಿತು. ಬಜೆಟ್ ಕುರಿತು ಚರ್ಚಿಸಲು ಅವಕಾಶ ಮಾಡಿಕೊಡುವ ಜೊತೆಗೆ ಪ್ರಶ್ನೆ ಕೇಳುವ ಅವಕಾಶವನ್ನು ಕಲ್ಪಿಸಲಾಯಿತು. ಪರೋಕ್ಷ ಚುನಾವಣೆಗೆ ಈ ಕಾಯ್ದೆಯು ಅನುವು ಮಾಡಕೊಟ್ಟಿತು. ಹೀಗಾಗಿ ಈ 1892ರ ಇಂಡಿಯಾ ಕೌನ್ಸಿಲ್ ಕಾಯ್ದೆಯು ಅತ್ಯಂತ ಮಹತ್ವದ್ದಾಗಿದೆ.

1909 ಮಿಂಟೋ ಮಾರ್ಲೆ ಸುಧಾರಣೆ

ಈ ಕಾಯ್ದೆಯು ಭಾರತೀಯ ಶಾಸನ ಸಭೆಗಳಿಗೆ ಭಾರತೀಯರಿಗೆ ಹೆಚ್ಚಿನ ಅವಕಾಶ ಕಲ್ಪಿಸುವ ಜೊತೆಗೆ ಪ್ರತ್ಯೇಕ ಮತದಾನ ವ್ಯವಸ್ಥೆಗೆ ಅವಕಾಶ ಮಾಡಿಕೊಟ್ಟಿತು.

1919 ಮಾಂಟೆಗೋ ಚೇಮ್ಸ್ ಫರ್ಡ್ ಕಾಯ್ದೆ:

ಪ್ರಾಂತ್ಯಗಳಲ್ಲಿ ದ್ವಿಮುಖ ಆಡಳಿತ ಪದ್ಧತಿ ಜಾರಿಗೆ ಬಂದಿತು. ಕೇಂದ್ರದಲ್ಲಿ ದ್ವಿಸದನ ಶಾಸನ ಮಂಡಳಿ ಸ್ಥಾಪನೆಗೊಂಡಿತು. ಮತದಾನದ ಹಕ್ಕು ಕೆಲವು ವರ್ಗಗಳಿಗೆ ವಿಸ್ತರಣೆಗೊಂಡಿತು. ಸಾರ್ವಜನಿಕ ಸೇವಾವಲಯ ಸ್ಥಾಪನೆಗೆ ಅವಕಾಶ ಕಲ್ಪಿಸಿತು.

1927ರ ಸೈಮನ್ ಆಯೋಗ

ಭಾರತಕ್ಕೆ ಸ್ವಾತಂತ್ರ್ಯ ನೀಡುವ ಬಗ್ಗೆ ಅವಲೋಕಿಸಲು ಸರ್ ಜಾನ್ ಸೈಮನ್ ಅವರ ಅಧ್ಯಕ್ಷತೆಯಲ್ಲಿ 7 ಜನ ಬ್ರಿಟಿಷ್ ಪಾರ್ಲಿಮೆಂಟ್ ಸದಸ್ಯರ ಆಯೋಗ 1927 ಫೆಬ್ರವರಿ 3ರಂದು ಬಾಂಬೆಗೆ ಬಂದಿತು. ಈ ಸಮಿತಿಯಲ್ಲಿ ಭಾರತೀಯ ಪ್ರತಿನಿಧಿ ಇರಲಿಲ್ಲ.

1935ರ ಭಾರತ ಸರ್ಕಾರ ಕಾಯ್ದೆ

ಸಂವಿಧಾನದ ಬೆಳವಣಿಗೆಯಲ್ಲಿ 1935ರ ಕಾಯ್ದೆಯು ಅತ್ಯಂತ ಮಹತ್ವ ಪೂರ್ಣವಾದುದು. ಸಂವಿಧಾನದ ಬಹುಪಾಲು ಕಾಯ್ದೆ, ಕಾನೂನು, ವಿಧಿಗಳು ಮತ್ತು ನಿಯಮಗಳು ಈ ಕಾಯ್ದೆಯ ಪ್ರತಿಬಿಂಬವಾಗಿದೆ. ಅಂದರೆ ಒಕ್ಕೂಟ ವ್ಯವಸ್ಥೆ, ದ್ವಿಸದನ ಶಾಸಕಾಂಗ, ಪ್ರಾಂತೀಯ ಸ್ವಾಯತ್ತತೆ, ಕೇಂದ್ರ ಸರ್ಕಾರ, ಫೆಡರಲ್ ಕೋರ್ಟ್ ಹಲವು ವಿಷಯಗಳು ಸಂವಿಧಾನದ ಬೆಳವಣಿಗೆಯಲ್ಲಿ ಪ್ರಮುಖ ಅಂಶಗಳಾಗಿವೆ.

1940ರ ಕೊಡುಗೆ

ಭಾರತೀಯರ ಸಂವಿಧಾನ ರಚನಾ ಸಭೆಯ ಒತ್ತಾಯಕ್ಕೆ ಮಣಿದ ಬ್ರಿಟಿಷ್ ಸರ್ಕಾರವು 2ನೇ ಮಹಾಯುದ್ಧ ಮುಗಿದ ನಂತರ ಸಂವಿಧಾನ ರಚನೆಗೆ ಅವಕಾಶ ಕಲ್ಪಿಸಲು 1940 ಆಗಸ್ಟ್ 8ರಂದು ಒಪ್ಪಿಗೆ ನೀಡಿತು. ಆ ಮೂಲಕ ಬ್ರಿಟಿಷರು ಭಾರತೀಯರಿಗೆ ತಮ್ಮ ಸಂವಿಧಾನವನ್ನು ತಾವೇ ರಚಿಸಲು ಭಾರತೀಯರಿಗೆ ಅಧಿಕಾರ ನೀಡಿದರು. ಯುದ್ಧದ ನಂತರ ಡೊಮಿನಿಯನ್ ಮಾದರಿ ಆಧಾರದ ಮೇಲೆ ಸರ್ಕಾರ ರಚಿಸಲು ಅವಕಾಶ ನೀಡಿತು.

1942 ಕ್ರಿಪ್ಸ್ ಆಯೋಗ

1942ರ ಮಾರ್ಚ್‌ರಂದು ಕ್ರಿಪ್ಸ್ ಆಯೋಗವು ಭಾರತಕ್ಕೆ ಬಂದಿತು. ಸರ್ ಸ್ಟ್ಯಾನ್‌ಫೋರ್ಡ್ ಅವರು ಭಾರತಕ್ಕೆ ಸಂವಿಧಾನ ರಚನಾ ಸಭೆಯ ಕರಡನ್ನು ಪ್ರತಿಯನ್ನು ಭಾರತಕ್ಕೆ ತಂದರು. ಈ ಆಯೋಗವು 2ನೇ ಮಹಾಯುದ್ಧದ ನಂತರ ಸ್ವತಂತ್ರ ಸಂವಿಧಾನ ರಚಿಸಲು ಅವಕಾಶ ಕಲ್ಪಿಸುವುದಾಗಿ ಭರವಸೆ ನೀಡಿತು.

1947 ಇಂಡಿಯನ್ ಇಂಡಿಪೆಂಡೆನ್ಸ್ ಕಾಯ್ದೆ

ಈ ಕಾಯ್ದೆಯಿಂದಾಗಿ ಭಾರತ ಮತ್ತು ಪಾಕಿಸ್ತಾನ ಎಂಬ ಎರಡು ಸ್ವತಂತ್ರ ರಾಷ್ಟ್ರಗಳು ರಚನೆಗೊಂಡವು. ಬ್ರಿಟಿಷ್ ಆಡಳಿತ ಕೊನೆಯಾಗಿ ಸ್ವತಂತ್ರ ಭಾರತ ಉದಯವಾಗಿ ಸಂವಿಧಾನ ರಚಿಸುವ ಅಧಿಕಾರವನ್ನು ಭಾರತೀಯರಿಗೆ ಅನುವು ಮಾಡಿಕೊಟ್ಟಿತು. ಹೊಸ ಸಂವಿಧಾನ ಜಾರಿಗೆ ಬರುವವರೆಗೂ 1935ರ ಭಾರತ ಸರ್ಕಾರದ ಕಾಯ್ದೆಯು ಜಾರಿಯಲ್ಲಿರುತ್ತದೆ.

ಸ್ವತಂತ್ರ ಭಾರತದ ಸಂವಿಧಾನದ ರಚನೆ

ಭಾರತದ ಸಂವಿಧಾನವು ಜಗತ್ತಿನ ಸಂವಿಧಾನದಲ್ಲಿಯೇ

Downloaded From:www.kpscvaani.com

ವಿಶಿಷ್ಟ, ಬೃಹತ್ ಸಂವಿಧಾನವಾಗಿದ್ದು, ಪ್ರಜಾಪ್ರಭುತ್ವವನ್ನು ಬಲಪಡಿಸುವ ಶಕ್ತಿಯನ್ನು ಹೊಂದಿದೆ. ಅಸಂಖ್ಯ ಸ್ವಾತಂತ್ರ ಹೋರಾಟಗಾರರ ಶ್ರಮ ಹಾಗೂ ಜ್ಞಾನದ ಫಲವಾಗಿ ವ್ಯವಸ್ಥಿತ ಹಾಗೂ ಕ್ರಮ ಬದ್ದವಾದ ಲಿಖಿತ ರೂಪದ ಸಂವಿಧಾನ ಹೊರಹೊಮ್ಮಿತು.

ಭಾರತಕ್ಕೆ ಸ್ವಾತಂತ್ರ್ಯದ ಸನಿಹದಲ್ಲಿ ಸಂವಿಧಾನ ರಚನೆಗೆ ಬ್ರಿಟಿಷ್ ಸರ್ಕಾರವು ಅವಕಾಶ ಕಲ್ಪಿಸಿತು. 1946ರಲ್ಲಿ ಕ್ಯಾಬಿನೆಟ್ ಮಿಷನ್ ಯೋಜನೆಯ ಆಧಾರದ ಮೇಲೆ ಸಮಿತಿಯನ್ನು ರಚಿಸಲಾಯಿತು. ಸಂವಿಧಾನ ರಚನಾ ಸಮಿತಿಯು ಬ್ರಿಟಿಷ್ ಭಾರತದ ಪ್ರಾಂತ್ಯಗಳಿಂದ 296 ಮತ್ತು ಸಂಸ್ಥಾನಗಳಿಂದ 93 ಒಟ್ಟು 389 ಸದಸ್ಯರು ಒಳಗೊಂಡಿತ್ತು. ಮೊದಲ ಸಂವಿಧಾನ ಸಭೆಯು ಡಿಸೆಂಬರ್ 09, 1946ರಂದು ನವದೆಹಲಿಯಲ್ಲಿ ನಡೆಯಿತು. ಡಾ. ಸಚ್ಚಿದಾನಂದ ಸಿನ್ಹಾ ಇದರ ಮೊದಲ ತಾತ್ಕಾಲಿಕ ಅಧ್ಯಕ್ಷರಾಗಿದ್ದರು. ನಂತರ ಡಾ. ಬಾಬು ರಾಜೇಂದ್ರ ಪ್ರಸಾದ್ ಅವರು ಕಾಯಂ ಅಧ್ಯಕ್ಷರಾದರು.

ಕರಡು ಸಮಿತಿ 29 ಆಗಸ್ಟ್ 1947

1947 ಆಗಸ್ಟ್ 14ರಂದು ಸಂವಿಧಾನದ ರಚನೆಗಾಗಿ ವಿವಿಧ ಸಮಿತಿಗಳನ್ನು ರಚಿಸಲಾಯಿತು. 29 ಆಗಸ್ಟ್ 1947 ರಂದು ಸಂವಿಧಾನ ಕರಡು ತಯಾರಿಸಲು ಡಾ.ಬಿ.ಆರ್ ಅಂಬೇಡ್ಕರ್ ಅವರ ಅಧ್ಯಕ್ಷತೆಯಲ್ಲಿ 6 ಸದಸ್ಯರನ್ನು ಒಳಗೊಂಡ ಕರಡು ಸಮಿತಿಯನ್ನು ರಚಿಸಲಾಯಿತು. ಭಾರತದ ಸಂವಿಧಾನದ 22 ಸಮಿತಿಯಲ್ಲಿ ಇದು ಪ್ರಮುಖವಾದ ಸಮಿತಿಯಾಗಿತ್ತು. ಒಟ್ಟು 10 ಪ್ರಮುಖ ಸಮಿತಿಗಳು, 12 ಉಪ ಸಮಿತಿಗಳನ್ನು ಒಳಗೊಂಡಿತ್ತು. ಈ ಸಮಿತಿಯು ಸಂವಿಧಾನ ರಚಿಸುವಲ್ಲಿ ಪ್ರಮುಖ ಪಾತ್ರವಹಿಸಿತು. ಇದೇ ಕಾರಣಕ್ಕೆ ಡಾ.ಬಿ.ಆರ್ ಅಂಬೇಡ್ಕರ್ ಅವರನ್ನು ಸಂವಿಧಾನ ಶಿಲ್ಪಿ ಎಂದು ಕರೆಯಲಾಗುತ್ತದೆ.

ಸಂವಿಧಾನ ರಚನೆಯಲ್ಲಿ ಪ್ರಮುಖ ಪಾತ್ರ ವಹಿಸಿದವರು

ಸಂವಿಧಾನ ರಚನೆಯಲ್ಲಿ ಕೆಲವು ಸಮಿತಿಯ ಸದಸ್ಯರು ಮತ್ತು ಸಮಿತಿಗಳು ವಹಿಸಿದ ಪಾತ್ರ ಪ್ರಮುಖವಾದುದು. ಸಂವಿಧಾನ ರಚನೆಯಲ್ಲಿ ಇವರ ನೀಡಿದ ಕೊಡುಗೆ ಅನನ್ಯವಾದುದು.

ಡಾ. ಬಾಬು ರಾಜೇಂದ್ರ ಪ್ರಸಾದ್ ಅವರು ಸಂವಿಧಾನ ರಚನಾ ಸಭೆಯ ಅಧ್ಯಕ್ಷರಾಗಿದ್ದರು. ಕರ್ನಾಟಕ ಪ್ರಾಂತ್ಯದಿಂದ ಪ್ರತಿನಿಧಿಸಿದವರು ಕೆ.ಸಿ ರೆಡ್ಡಿ, ಸಿದ್ದಲಿಂಗಯ್ಯ, ಕೆಂಗಲ್ ಹನುಮಂತಯ್ಯ, ಟಿ. ಚನ್ನಯ್ಯ, ಹೆಚ್.ಸಿದ್ದವೀರಪ್ಪ, ಎಸ್.ವಿ ಕೃಷ್ಣಮೂರ್ತಿರಾವ್, ಬಾಂಬೆ ಪ್ರಾಂತ್ಯದಿಂದ ಎಸ್, ನಿಜಲಿಂಗಪ್ಪ, ಆರ್ ದಿವಾಕರ್, ಕೂರ್ಗ್‌ನಿಂದ ಪೂಣಚ್ಚ ಅವರು ಭಾಗವಹಿಸಿದರು. 15 ಜನ ಮಹಿಳೆಯರು ಸಹ ಸಂವಿಧಾನ ರಚನಾ ಸಮಿತಿಯ ಭಾಗವಾಗಿದ್ದರು.

ಡಾ.ಬಿ.ಆರ್ ಅಂಬೇಡ್ಕರ್ ಅವರು ಕರಡು ಸಮಿತಿಯ ಅಧ್ಯಕ್ಷರಾಗಿದ್ದರೆ, ಕರಡು ಸಮಿತಿಯ ಸದಸ್ಯರಾಗಿ ಅಲ್ಲಾಡಿ ಕೃಷ್ಣಸ್ವಾಮಿ ಅಯ್ಯರ್, ಡಾ. ಕೆ.ಎಂ ಮುನ್ಷಿ, ಎನ್ ಗೋಪಾಲಸ್ವಾಮಿ ಅಯ್ಯರ್, ಸಯ್ಯದ್ ಮಹಮ್ಮದ್ ಸಾದುಲ್ಲಾ, ಎನ್ ಮಾಧವರಾವ್ ಮತ್ತು ಟಿ.ಟಿ ಕೃಷ್ಣಮಾಚಾರಿ ಅವರು ಕೆಲಸ ನಿರ್ವಹಿಸಿದರು. ಉದ್ದೇಶ ಸಮಿತಿಯ ಅಧ್ಯಕ್ಷರಾಗಿ ಜವಾಹರಲಾಲ್ ನೆಹರು ಅವರು ಭಾರತದ ಸಂವಿಧಾನದ ಪ್ರಸ್ತಾವನೆಯನ್ನು ಅಳವಡಿಸಿದರು. ಬಿ.ಎನ್. ರಾವ್ ಅವರು ಸಂವಿಧಾನ ಸಭೆಯ ಸಲಹೆಗಾರರಾಗಿದ್ದರು.

ಸಂವಿಧಾನದ ಅಂತಿಮ ಕರಡು ಪರಿಷ್ಕರಣೆ

ಸಂವಿಧಾನದ ಅಂತಿಮ ಕರಡು ಪ್ರತಿಯನ್ನು 1948 ನವೆಂಬರ್ 4ರಂದು ತಯಾರಿಸಲಾಯಿತು. 1948 ನವೆಂಬರ್ 9ರವರೆಗೆ ಸುಧೀರ್ಘ ಚರ್ಚೆಗಳು ನಡೆದವು. ತದ ನಂತರ ಸೆಂಟ್ರಲ್ ಹಾಲ್‌ನಲ್ಲಿ ಕರಡು ಪ್ರತಿಯನ್ನು ಎರಡನೇ ಬಾರಿಗೆ ಓದಲಾಯಿತು. ಈ ಸಂಧರ್ಭದಲ್ಲಿ 7653 ತಿದ್ದುಪಡಿಗಳಿಗಾಗಿ ಮನವಿ ಮಾಡಲಾಯಿತು. ಅವುಗಳಲ್ಲಿ 2475 ತಿದ್ದುಪಡಿಯನ್ನು ಅಂತಿಮಗೊಳಿಸಲಾಯಿತು. ಅಂತಿಮವಾಗಿ, 1949ರ ನವೆಂಬರ್ 14ರಂದು ಮೂರನೇ ಬಾರಿಗೆ ಸಂವಿಧಾನ ಕರಡು ಪ್ರತಿಯನ್ನು ಓದಲಾಯಿತು. ಈ ಅಂತಿಮ ಅಧಿವೇಶನದಲ್ಲಿ 395 ವಿಧಿಗಳು, 22 ಭಾಗಗಳು ಮತ್ತು 8 ಅನುಸೂಚಿಗಳ ಪ್ರತಿಗೆ ಸದನವು ಸಮ್ಮತಿ ಸೂಚಿಸಿತು. ಇದರ ರಚನೆಗೆ ಹಿಡಿದ ಅವಧಿ 2 ವರ್ಷ 11 ತಿಂಗಳು 18 ದಿನಗಳು. ಈ ಅವಧಿಯಲ್ಲಿ 11 ಅಧಿವೇಶನಗಳು ನಡೆದು, 166 ದಿನಗಳು ಸಮಾವೇಶಗೊಳ್ಳಲಾಗಿತ್ತು. 1949ರ ನವೆಂಬರ್ 26ರಂದು ಅಂತಿಮ ಪ್ರತಿ ಪ್ರಕಟಗೊಂಡು ಅಂಗೀಕಾರವಾಯಿತು. ಈ ಅಧಿವೇಶನದಲ್ಲಿ 284 ಮಂದಿ ಹಾಜರಿದ್ದು, ಸರ್ವಾನುಮತದಿಂದ ಅಂಗೀಕಾರಗೊಂಡಿತು.

ಇದು ಕೈಬರಹದ ಸಂವಿಧಾನವಾಗಿದ್ದು, ಪ್ರೇಮ್ ಬಿಹಾರಿ ನಾರಾಯಣ್ ರೈಜದಾ ಅವರು ಅದನ್ನು ಪೂರ್ಣವಾಗಿ ಕೈಬರಹದಲ್ಲಿಯೇ ಬರೆದರು. ಪ್ರತಿ ಪುಟದ ಚಿತ್ರಕಲೆಯನ್ನು ರಾಮ್ ಮನೋಹರ್ ಸಿನ್ಹಾ ಮತ್ತು ನಂದಲಾಲ್ ಬೋಸ್ ಅವರು ಸುಂದರವಾಗಿ ಚಿತ್ರಿಸಿದ್ದಾರೆ. ಮೂಲ ಸಂವಿಧಾನವನ್ನು ಹೀಲಿಯಂ ಪೆಟ್ಟಿಗೆಯಲ್ಲಿ ಸಂಸತ್ತಿನಲ್ಲಿ ರಕ್ಷಿಸಲಾಗಿದೆ.

ಸಂವಿಧಾನವು ನಮ್ಮ ದೇಶದ ಆಡಳಿತ ವ್ಯವಸ್ಥೆಯ ಮೂಲ ಕೀಲಿ ಕೈ ಯಾಗಿದೆ. ಇದು ಭಾರತ ದೇಶದ ಪ್ರತಿಯೊಬ್ಬ ನಾಗರಿಕನಿಗೂ ನ್ಯಾಯ, ಸ್ವಾತಂತ್ರ್ಯ, ಸಮಾನತೆ ಮತ್ತು ಭ್ರಾತೃತ್ವದ ಮೌಲ್ಯಗಳನ್ನು ನೀಡಿದೆ. ಕೊನೆಯದಾಗಿ ಡಾ.ಬಿ.ಆರ್ ಅಂಬೇಡ್ಕರ್ ಅವರು ಸಂವಿಧಾನ ಅಂಗೀಕಾರ ನಂತರ ಸಂಸತ್ತಿನಿಂದ ಸಂತೋಷದಿಂದ ಹೊರಬರುವಾಗ ಪತ್ರಕರ್ತರ ಬಳಿ ಮಾತನಾಡಿ, "ಸಂವಿಧಾನ ಎಷ್ಟೇ ಉತ್ತಮವಾಗಿದ್ದರೂ ಅದನ್ನು ಜಾರಿಗೊಳಿಸುವವರು ಕೆಟ್ಟವರಾಗಿದ್ದರೆ ಅದು ಕೆಟ್ಟದಾಗಿ ಪರಿಣಮಿಸುತ್ತದೆ. ಸಂವಿಧಾನ ಎಷ್ಟೇ ಕೆಟ್ಟದಾಗಿದ್ದರೂ ಅದನ್ನು ಜಾರಿಗೊಳಿಸುವವರು ಉತ್ತಮವಾಗಿದ್ದರೆ ಅದು ಉತ್ತಮವಾಗಿ ಕಾರ್ಯನಿರ್ವಹಿಸಬಹುದು" ಎಂದು ಅಭಿಪ್ರಾಯಪಟ್ಟಿದ್ದರು ಎಂಬುದು ನಾವೆಲ್ಲರೂ ಗಮನಿಸಬೇಕಾದ ಸಂಗತಿಯಾಗಿದೆ. ■

Downloaded From:www.kpscvaani.com



ಕನ್ನಡದ ಅಸ್ಮಿತೆ: ಬೇರುಗಳಿಂದ ಭವಿಷ್ಯದವರೆಗೆ

ಡಾ॥ ಅನಿಲ್‌ಕುಮಾರ್ ಪಿ. ಗ್ರಾಮಪುರೋಹಿತ್

Downloaded From:www.kpscvaani.com

ಜಾಗತೀಕರಣ, ಕೈಗಾರಿಕೀಕರಣ, ನಗರೀಕರಣ ಹಾಗೂ ತಂತ್ರಜ್ಞಾನ ಕ್ರಾಂತಿಯ ವೇಗದ ಬೆಳವಣಿಗೆಯಿಂದ ಇಂದಿನ ಜಗತ್ತು ಅಪೂರ್ವವಾದ ಪರಿವರ್ತನೆಯ ಹಂತವನ್ನು ಪ್ರವೇಶಿಸಿದೆ. ಜಗತ್ತಿನ ವಿವಿಧ ಭಾಗಗಳ ನಡುವಿನ ಸಂಪರ್ಕ ಹೆಚ್ಚಾಗಿದ್ದು, ಶಿಕ್ಷಣ, ಉದ್ಯೋಗ, ವ್ಯಾಪಾರ, ವಿಜ್ಞಾನ ಮತ್ತು ತಂತ್ರಜ್ಞಾನದ ಕ್ಷೇತ್ರಗಳಲ್ಲಿ ಬಹುಭಾಷಾ ಬಳಕೆ ಅನಿವಾರ್ಯವಾಗಿದೆ. ಇಂಗ್ಲಿಷ್ ಸೇರಿದಂತೆ ಜಾಗತಿಕವಾಗಿ ವ್ಯಾಪಕವಾಗಿ ಬಳಕೆಯಲ್ಲಿರುವ ಭಾಷೆಗಳ ಮಹತ್ವವನ್ನು ಕಡೆಗಣಿಸಲಾಗದು. ಆದರೆ, ಜ್ಞಾನಾರ್ಜನೆಗೆ ನಾವು ಕಲಿಯುವ ಭಾಷೆಗಳು ಮತ್ತು ನಮ್ಮ ಭಾವನೆ, ಅನುಭವ, ಸಂಸ್ಕೃತಿ ಹಾಗೂ ಬದುಕಿನೊಂದಿಗೆ ಸಹಜವಾಗಿ ಬೆಸೆದುಕೊಂಡಿರುವ ಮಾತೃಭಾಷೆಯ ಆಳವಾದ ಪ್ರಭಾವವನ್ನು ಗಹನವಾಗಿ ಪರಿಗಣಿಸಬೇಕಾಗುತ್ತದೆ. ಈ ಹಿನ್ನೆಲೆಯಲ್ಲಿ ಕನ್ನಡವನ್ನು ಕೇವಲ ಸಂವಹನದ ಮಾಧ್ಯಮವಾಗಿ ನೋಡುವುದಕ್ಕಿಂತ, ಕನ್ನಡಿಗರ ಸಾಂಸ್ಕೃತಿಕ ಅಸ್ಮಿತೆ, ಐತಿಹಾಸಿಕ ಸ್ಮೃತಿ ಮತ್ತು ಸಾಮಾಜಿಕ ಬದುಕಿನ ಅವಿಭಾಜ್ಯ ಅಂಗವಾಗಿ ಪರಿಗಣಿಸುವುದು ಅಗತ್ಯವಾಗಿದೆ.

ಕನ್ನಡದ ಅಸ್ಮಿತೆ ಒಂದು ದಿನದ ಆಚರಣೆಯಿಂದ ಅಥವಾ ನಿರ್ದಿಷ್ಟ ಸಂದರ್ಭಗಳಲ್ಲಿ ವ್ಯಕ್ತವಾಗುವ ಭಾಷಾಭಿಮಾನದಿಂದ ಮಾತ್ರ ಉಳಿಯುವುದಿಲ್ಲ. ಕನ್ನಡದ ಜೀವಂತಿಕೆ ಕನ್ನಡಿಗರ ದೈನಂದಿನ ಬದುಕಿನೊಂದಿಗೆ ಅದರ ಸಂಬಂಧ ಎಷ್ಟು ಗಾಢವಾಗಿದೆ ಎಂಬುದರ ಮೇಲೆ ಅವಲಂಬಿತವಾಗಿದೆ. ಮನೆಗಳಲ್ಲಿ, ಶಾಲೆಗಳಲ್ಲಿ, ಕಛೇರಿಗಳಲ್ಲಿ, ಸಾರ್ವಜನಿಕ ಬದುಕಿನಲ್ಲಿ, ವ್ಯಾಪಾರ–ವಹಿವಾಟಿನಲ್ಲಿ ಹಾಗೂ ಸಾಮಾಜಿಕ ಸಂವಹನದಲ್ಲಿ ಕನ್ನಡ ಸಹಜವಾಗಿ ಬಳಕೆಯಾಗಬೇಕು. ಭಾಷೆಯೊಂದರ ಮೇಲಿನ ಅಭಿಮಾನವು ಆಚರಣೆಗೆ ಸೀಮಿತವಾದಾಗ ಅದು ನಿಧಾನವಾಗಿ ಔಪಚಾರಿಕತೆಯಾಗಿ ಬದಲಾಗುವ ಸಾಧ್ಯತೆ ಇದೆ; ಆದರೆ ಅದು ಬದುಕಿನ ಸಹಜ ಭಾಗವಾದಾಗ ಮಾತ್ರ ಭಾಷೆ ನಿರಂತರವಾಗಿ ಬೆಳೆಯುತ್ತದೆ. ಮೂಲ ಆಶಯವೂ ಇದೇ– ಕನ್ನಡದ ಅಸ್ತಿತ್ವವನ್ನು ಉಳಿಸುವ ನಿಜವಾದ ಶಕ್ತಿ ಕನ್ನಡವನ್ನು ಬಳಸುವ ಕನ್ನಡಿಗರ ಕೈಯಲ್ಲಿದೆ.

ಕನ್ನಡದ ಆಧುನಿಕ ಪುನರುಜ್ಜೀವನದ ಇತಿಹಾಸವನ್ನು ಗಮನಿಸಿದಾಗ ಅನೇಕ ಮಹನೀಯರ ಕೊಡುಗೆಗಳು ಸ್ಪಷ್ಟವಾಗಿ ಗೋಚರಿಸುತ್ತವೆ. ಕನ್ನಡದ ಕಣ್ವ ಬಿ.ಎಂ. ಶ್ರೀಕಂಠಯ್ಯರು ಕನ್ನಡಿಗರಲ್ಲಿ ಭಾಷಾಭಿಮಾನವನ್ನು ಜಾಗೃತಗೊಳಿಸುವುದರೊಂದಿಗೆ ಕನ್ನಡ ಸಾಹಿತ್ಯವನ್ನು ಹೊಸ ಚಿಂತನೆಗಳಿಗೆ ತೆರೆದಿಡುವ ಮಹತ್ವದ ಕಾರ್ಯವನ್ನು ಮಾಡಿದರು. ಕನ್ನಡವು ಇತರ ಭಾಷೆಗಳ ಪ್ರಭಾವದಿಂದ ಕುಗ್ಗಿಹೋಗದೆ, ಅವುಗಳಲ್ಲಿರುವ ಉತ್ತಮ ಸಾಹಿತ್ಯಿಕ ಹಾಗೂ ವೈಚಾರಿಕ ಅಂಶಗಳನ್ನು ಸ್ವೀಕರಿಸಿಕೊಂಡು ತನ್ನದೇ ಆದ ಸ್ವರೂಪದಲ್ಲಿ ಬೆಳೆಯಬೇಕು ಎಂಬ ದೃಷ್ಟಿಕೋನ ಅವರ ಚಿಂತನೆಗಳಲ್ಲಿ ಕಾಣುತ್ತದೆ. ಸಾಮಾನ್ಯ ಜನರು ಮಾತನಾಡುವ ನುಡಿಗಟ್ಟು, ಜನವಾಣಿ ಮತ್ತು ಜನಜೀವನವೇ ಸಾಹಿತ್ಯದ ಜೀವಂತ ಮೂಲವೆಂಬ ನಂಬಿಕೆಯೂ ಈ ಪರಂಪರೆಯಲ್ಲಿ ಪ್ರಮುಖವಾಗಿದೆ.

ಕನ್ನಡದ ಬೆಳವಣಿಗೆಯಲ್ಲಿ ಶ್ರೀ. ಡಿ.ವಿ. ಗುಂಡಪ್ಪ, ಕಡಲ ತೀರದ ಭಾರ್ಗವ ಶ್ರೀ.ಶಿವರಾಮ ಕಾರಂತ, ಶ್ರೀ.ಗೊರೂರು ರಾಮಸ್ವಾಮಿ ಅಯ್ಯಂಗಾರ್, ಶ್ರೀ.ವಿನಾಯಕ ಕೃಷ್ಣ ಗೋಕಾಕ್ ಸೇರಿದಂತೆ ಅನೇಕ ಚಿಂತಕರು ಮತ್ತು ಸಾಹಿತಿಗಳು ತಮ್ಮದೇ ಆದ ರೀತಿಯಲ್ಲಿ ಮಹತ್ವದ ಕೊಡುಗೆ ನೀಡಿದ್ದಾರೆ. ಶ್ರೀ.ಡಿ.ವಿ. ಗುಂಡಪ್ಪನವರ ದೃಷ್ಟಿಯಲ್ಲಿ ಕನ್ನಡವು ಸುಂದರ, ಮಧುರ ಮತ್ತು ಜೀವಪರವಾದ ಭಾಷೆ. ಕನ್ನಡದ ಬಗ್ಗೆ ಅಭಿಮಾನ ಮತ್ತು ಪ್ರೀತಿಯನ್ನು ಪ್ರತಿಯೊಬ್ಬ ಕನ್ನಡಿಗನಲ್ಲಿಯೂ ಬೆಳೆಸಬೇಕೆಂಬ ಅವರ ಆಶಯವು ಭಾಷೆಯನ್ನು ಕೇವಲ ಪಾಂಡಿತ್ಯದ ವಿಷಯವಾಗಿ ನೋಡದೆ, ಜನಜೀವನದ ಭಾಗವಾಗಿ ಪರಿಗಣಿಸುವುದನ್ನು ಸೂಚಿಸುತ್ತದೆ.

ಶಿವರಾಮ ಕಾರಂತರ ಚಿಂತನೆಗಳಲ್ಲಿ ಭಾಷೆ ಮತ್ತು ಅಸ್ಮಿತೆಯ ನಡುವಿನ ಸಂಬಂಧ ವಿಶೇಷವಾಗಿ ವ್ಯಕ್ತವಾಗುತ್ತದೆ. "ನಾನು ಮೊದಲು ಕನ್ನಡಿಗ, ಆಮೇಲೆ ಭಾರತೀಯ" ಎಂಬ ಅವರ ಪ್ರಸಿದ್ಧ ನಿಲುವನ್ನು ಭಾಷಾಭಿಮಾನದ ಪರಾಕಾಷ್ಠೆಯಾಗಿ ಮೂಲವು ಉಲ್ಲೇಖಿಸುತ್ತದೆ. ಇದು ಇತರ ಭಾಷೆ ಅಥವಾ ಸಂಸ್ಕೃತಿಯ ವಿರೋಧದ ಅಭಿವ್ಯಕ್ತಿಯಲ್ಲ; ಬದಲಾಗಿ, ಸ್ವಂತ ಭಾಷೆ ಮತ್ತು ಪ್ರಾದೇಶಿಕ ಅಸ್ಮಿತೆಯ ಬಗ್ಗೆ ಆತ್ಮಗೌರವ ಹೊಂದುವ ಅಗತ್ಯವನ್ನು ಪ್ರತಿಪಾದಿಸುವ ದೃಷ್ಟಿಕೋನವಾಗಿದೆ. ಕನ್ನಡವು ಕೇವಲ ಸಂವಹನದ ಸಾಧನವಲ್ಲ; ಅದು ಜನರ ಬದುಕು, ನೆಲ, ಸಂಸ್ಕೃತಿ ಮತ್ತು ಆತ್ಮಪರಿಚಯದ ಭಾಗವಾಗಿದೆ ಎಂಬ ವಿಚಾರ ಇಲ್ಲಿ ಮುಖ್ಯವಾಗುತ್ತದೆ.

ಕನ್ನಡದ ಈ ಅಸ್ಮಿತೆಯನ್ನು ಸಂರಕ್ಷಿಸುವ ಸಂದರ್ಭದಲ್ಲಿ ಭಾಷೆಯನ್ನು ಇತರ ಭಾಷೆಗಳಿಂದ ಪ್ರತ್ಯೇಕಿಸಿ ನೋಡುವುದು ಸೂಕ್ತವಲ್ಲ. ಜಗತ್ತಿನ ಯಾವುದೇ ಜೀವಂತ ಭಾಷೆಯೂ ಕಾಲಾನುಗುಣವಾಗಿ ಹೊಸ ಪದಗಳು, ಪರಿಕಲ್ಪನೆಗಳು ಮತ್ತು ಅಭಿವ್ಯಕ್ತಿಯ ರೂಪಗಳನ್ನು ಸ್ವೀಕರಿಸುತ್ತಾ ಬೆಳೆಯುತ್ತದೆ. ಕನ್ನಡವೂ ಇದೇ ರೀತಿಯಲ್ಲಿ ಮುಕ್ತ ಮನೋಭಾವದಿಂದ ಬೆಳೆಯಬೇಕಾಗಿದೆ. ಭಾಷೆಯ ಶುದ್ಧತೆಯ ಹೆಸರಿನಲ್ಲಿ ಅದರ ಸಹಜ ಬೆಳವಣಿಗೆಯನ್ನು ನಿರ್ಬಂಧಿಸುವ ಬದಲು, ಅಗತ್ಯವಿರುವಲ್ಲಿ ಇತರ ಭಾಷೆಗಳಲ್ಲಿರುವ ಸೂಕ್ತ ಪದಗಳನ್ನು ಸ್ವೀಕರಿಸಿ ಕನ್ನಡದ ಅಭಿವ್ಯಕ್ತಿ ಸಾಮರ್ಥ್ಯವನ್ನು ವಿಸ್ತರಿಸುವುದು ಹೆಚ್ಚು ಪರಿಣಾಮಕಾರಿ ಮಾರ್ಗವಾಗಿದೆ. ಮೂಲದಲ್ಲಿಯೂ ಭಾಷೆಯ ಬೆಳವಣಿಗೆಗೆ ಅತಿಯಾದ ಮಡಿವಂತಿಕೆಯ ಬದಲಾಗಿ ಉತ್ತಮ ಪದಗಳನ್ನು ಸ್ವೀಕರಿಸುವ ಮುಕ್ತ ಮನೋಭಾವದ ಅಗತ್ಯವನ್ನು ಒತ್ತಿಹೇಳಲಾಗಿದೆ. ಇತ್ತೀಚಿನ ವರದಿಗಳ ಪ್ರಕಾರ ಜೆನ್ ಝೀ ಗಳು ಆಂಗ್ಲ ಭಾಷೆಗೆ ಹೊಸ ಪದಗಳನ್ನು ಸೇರಿಸುತ್ತಿದ್ದಾರೆ. ಈ ಹಿನ್ನೆಲೆಯಲ್ಲಿ ಶೇಕ್ಸ್‌ಪಿಯರ್ ನನ್ನೂ ಅವರು ಹಿಂದಿಕ್ಕುತ್ತಿದ್ದಾರೆ. ಹೌದು ಭಾಷೆ ನಿಂತ ನೀರಲ್ಲ.

ಈ ಸಂದರ್ಭದಲ್ಲಿ ಕೆ.ಪಿ. ಪೂರ್ಣಚಂದ್ರ ತೇಜಸ್ವಿಯವರ ಚಿಂತನೆಗಳು ಅತ್ಯಂತ ಪ್ರಸ್ತುತವಾಗುತ್ತವೆ. ಆಧುನಿಕ ತಂತ್ರಜ್ಞಾನ ಮತ್ತು ಬದಲಾಗುತ್ತಿರುವ ಕಾಲಘಟ್ಟಕ್ಕೆ

Downloaded From:www.kpscvaani.com

ಅನುಗುಣವಾಗಿ ಕನ್ನಡವನ್ನು ಅಭಿವೃದ್ಧಿಪಡಿಸದಿದ್ದರೆ ಭಾಷೆಯ ಉಳಿವು ಕಷ್ಟವಾಗಬಹುದು ಎಂಬ ಎಚ್ಚರಿಕೆಯನ್ನು ಮೂಲವು ದಾಖಲಿಸುತ್ತದೆ. ವಿಶೇಷವಾಗಿ ಮಾಹಿತಿ ತಂತ್ರಜ್ಞಾನ ಕ್ಷೇತ್ರದಲ್ಲಿ ಕನ್ನಡದ ಬಳಕೆಯನ್ನು ವಿಸ್ತರಿಸುವುದು ಅತ್ಯಗತ್ಯ. ಕಂಪ್ಯೂಟರ್, ಮೊಬೈಲ್, ಅಂತರ್ಜಾಲ, ಡಿಜಿಟಲ್ ಮಾಧ್ಯಮ ಮತ್ತು ಸಾಮಾಜಿಕ ಜಾಲತಾಣಗಳ ಯುಗದಲ್ಲಿ ಕನ್ನಡವು ತನ್ನ ಸ್ಥಾನವನ್ನು ಪಡೆದುಕೊಳ್ಳಬೇಕಾದರೆ, ಅದು ಹೊಸ ತಂತ್ರಜ್ಞಾನಗಳೊಂದಿಗೆ ಹೆಜ್ಜೆ ಹಾಕಬೇಕು. ಕನ್ನಡದಲ್ಲಿ ಜ್ಞಾನ ಸೃಷ್ಟಿ, ಮಾಹಿತಿ ಹಂಚಿಕೆ ಮತ್ತು ಡಿಜಿಟಲ್ ಸಂವಹನ ಸಾಧ್ಯವಾಗುವಂತೆ ಭಾಷೆಯ ತಾಂತ್ರಿಕ ಸಾಮರ್ಥ್ಯವನ್ನು ನಿರಂತರವಾಗಿ ಅಭಿವೃದ್ಧಿಪಡಿಸಬೇಕಾಗಿದೆ.

ಮಾತೃಭಾಷೆಯ ಮತ್ತೊಂದು ಮಹತ್ವದ ಆಯಾಮ ಅದರ ಆತ್ಮೀಯತೆ. ಮನುಷ್ಯನ ಆಲೋಚನೆ ಮತ್ತು ಅಭಿವ್ಯಕ್ತಿಯ ನಡುವೆ ಮಾತೃಭಾಷೆ ಅತ್ಯಂತ ಸಹಜವಾದ ಸೇತುವೆಯಾಗಿ ಕಾರ್ಯನಿರ್ವಹಿಸುತ್ತದೆ. ಬಾಲ್ಯದ ಅನುಭವಗಳು, ಕುಟುಂಬದ ಸಂಬಂಧಗಳು, ಸಂತೋಷ, ದುಃಖ, ಪ್ರೀತಿ, ನೋವು, ನೆನಪುಗಳು ಮತ್ತು ಸಾಮಾಜಿಕ ಅನುಭವಗಳು ಮಾತೃಭಾಷೆಯ ಮೂಲಕವೇ ಅತ್ಯಂತ ಸಹಜವಾಗಿ ವ್ಯಕ್ತವಾಗುತ್ತವೆ. ಆದ್ದರಿಂದ ಮಾತೃಭಾಷೆಯನ್ನು ಕೇವಲ ಒಂದು ವಿಷಯವಾಗಿ ಕಲಿಯುವುದಕ್ಕಿಂತ, ಬದುಕಿನ ಅನುಭವಗಳೊಂದಿಗೆ ಬೆಸೆದುಕೊಂಡ ಭಾಷೆಯಾಗಿ ಉಳಿಸಿಕೊಳ್ಳುವುದು ಅಗತ್ಯವಾಗಿದೆ. ಮನೆಯ ಮಕ್ಕಳೊಂದಿಗೆ ನಮ್ಮ ಮೂಲ ಭಾಷಾ ಸೊಗಡನ್ನು ಹಂಚಿಕೊಳ್ಳಬೇಕಾಗಿದೆ.

ಕನ್ನಡದ ವೈಭವವು ಅದರ ವೈವಿಧ್ಯತೆಯಲ್ಲಿಯೂ ಅಡಗಿದೆ. ಕರ್ನಾಟಕದ ವಿವಿಧ ಭಾಗಗಳಲ್ಲಿ ಬಳಕೆಯಲ್ಲಿರುವ ಪ್ರಾದೇಶಿಕ ಭಾಷಾ ರೂಪಗಳು ಕನ್ನಡದ ಜೀವಂತಿಕೆಯ ಸಾಕ್ಷಿಗಳಾಗಿವೆ. ಗ್ರಾಮೀಣ ಜನರ ಆಡುಮಾತು, ಜನಪದ ಪದಪ್ರಯೋಗಗಳು, ಸ್ಥಳೀಯ ನುಡಿಗಟ್ಟುಗಳು ಮತ್ತು ಪ್ರಾದೇಶಿಕ ಉಪಭಾಷೆಗಳು ಕನ್ನಡವನ್ನು ಇನ್ನಷ್ಟು ಶ್ರೀಮಂತಗೊಳಿಸಿವೆ. ಶ್ರೀ.ಗೊರೂರು ರಾಮಸ್ವಾಮಿ ಅಯ್ಯಂಗಾರ್ ಅವರ ದೃಷ್ಟಿಯಲ್ಲಿ ಗ್ರಾಮೀಣ ಬದುಕಿನ ಸಹಜತೆ, ಜನರ ಸರಳತೆ ಮತ್ತು ದೈನಂದಿನ ಸಂಭಾಷಣೆಗಳು ಕನ್ನಡದ ನಿಜವಾದ ಸೊಗಡಿಗೆ ಪ್ರಮುಖ ಆಕರಗಳಾಗಿವೆ. ಗ್ರಾಮೀಣ ಜನರ ಭಾಷೆಯಲ್ಲಿ ಅಡಗಿರುವ ಹಾಸ್ಯಪ್ರಜ್ಞೆ, ಅನುಭವ ಮತ್ತು ಬದುಕಿನ ಸೂಕ್ಷ್ಮತೆಗಳು ಸಾಹಿತ್ಯಕ್ಕೂ ಸಮೃದ್ಧಿಯನ್ನು ನೀಡಬಲ್ಲವು.

ಈ ವೈವಿಧ್ಯವನ್ನು ಸಾಹಿತ್ಯದಲ್ಲಿಯೂ ಅಳವಡಿಸಿಕೊಳ್ಳುವ ಅಗತ್ಯವನ್ನು ವೈದೇಹಿಯವರ ಚಿಂತನೆಗಳು ಸೂಚಿಸುತ್ತವೆ. ಅವರ ಬರಹಗಳಲ್ಲಿ ಕುಂದಾಪುರ ಕನ್ನಡದಂತಹ ಕರಾವಳಿ ಪ್ರದೇಶದ ಉಪಭಾಷೆಯ ಬಳಕೆ ಭಾಷೆಯ ಪ್ರಾದೇಶಿಕ ಸೊಗಡನ್ನು ಜೀವಂತಗೊಳಿಸುತ್ತದೆ. ಭಾಷೆ ಎಂದರೆ ಕೇವಲ ಸಂದೇಶವನ್ನು ಒಬ್ಬರಿಂದ ಮತ್ತೊಬ್ಬರಿಗೆ ತಲುಪಿಸುವ ಸಾಧನವಲ್ಲ; ಅದು ಒಂದು ಸಂಸ್ಕೃತಿ ಮತ್ತು ಜೀವಂತಿಕೆಯ ಪ್ರತೀಕ. ಪ್ರತಿಯೊಂದು ಉಪಭಾಷೆಯೂ ತನ್ನದೇ ಆದ ಸೌಂದರ್ಯ, ಅನುಭವ ಮತ್ತು ಭಾವಸಂಪತ್ತನ್ನು ಹೊಂದಿದೆ. ಆದ್ದರಿಂದ ಪ್ರಾದೇಶಿಕ ಭಾಷಾ ರೂಪಗಳನ್ನು ಕಡೆಗಣಿಸುವ



Downloaded From:www.kpscvaani.com

ಬದಲು ಅವುಗಳನ್ನು ಕನ್ನಡದ ವಿಶಾಲ ಭಾಷಾ ಪರಂಪರೆಯ ಅಂಗಗಳಾಗಿ ಗೌರವಿಸಬೇಕು.

ಇದೇ ವಿಚಾರವನ್ನು ಶ್ರೀ.ದೇವನೂರು ಮಹಾದೇವರ ಚಿಂತನೆ ಮತ್ತೊಂದು ಆಯಾಮದಲ್ಲಿ ಮುಂದುವರಿಸುತ್ತದೆ. ಭಾಷೆ ಮನುಷ್ಯನಿಗೆ ಹೊರಗಿನಿಂದ ತೊಡಿಸಿಕೊಳ್ಳುವ ಉಡುಪಿನಂತಲ್ಲ; ಅದು ವ್ಯಕ್ತಿಯ ಅಸ್ತಿತ್ವದೊಂದಿಗೆ ಬೆಸೆದುಕೊಂಡಿರುವ ಚರ್ಮದಂತದ್ದು ಎಂಬ ರೂಪಕದ ಮೂಲಕ ಭಾಷೆ ಮತ್ತು ಅಸ್ಮಿತೆಯ ಸಂಬಂಧವನ್ನು ಅವರು ವಿವರಿಸುತ್ತಾರೆ. ಸಾಹಿತ್ಯಿಕ ಕನ್ನಡವು ಒಂದೇ ರೀತಿಯ ಭಾಷಾ ಮಾದರಿಯಲ್ಲಿ ಸೀಮಿತವಾಗದೆ, ಸಮಾಜದ ವಿವಿಧ ವರ್ಗಗಳ ಅನುಭವ ಮತ್ತು ಭಾಷಾ ವೈವಿಧ್ಯವನ್ನು ಒಳಗೊಂಡಾಗ ಮಾತ್ರ ಅದು ನಿಜವಾದ ಜನಭಾಷೆಯಾಗಬಲ್ಲದು.

ಶ್ರೀ ಗಿರೀಶ್ ಕಾರ್ನಾಡರ ಕನ್ನಡದ ಕುರಿತ ದೃಷ್ಟಿಕೋನವೂ ಭಾಷೆಯ ಮುಕ್ತತೆ ಮತ್ತು ಸ್ವೀಕಾರಶೀಲತೆಯನ್ನು ಪ್ರತಿಬಿಂಬಿಸುತ್ತದೆ. ಕನ್ನಡವು ನಿರ್ದಿಷ್ಟ ಭೌಗೋಳಿಕ ಗಡಿಯೊಳಗೆ ಸೀಮಿತವಾಗಿರುವ ಭಾಷೆಯಲ್ಲ; ವಿಭಿನ್ನ ಭಾಷಾ ಮತ್ತು ಸಾಂಸ್ಕೃತಿಕ ಹಿನ್ನೆಲೆಯ ಜನರನ್ನು ತನ್ನೊಳಗೆ ಸ್ವೀಕರಿಸುವ ಸಾಮರ್ಥ್ಯವನ್ನು ಹೊಂದಿದೆ. ಕಾರ್ನಾಡರು ತಮ್ಮ ಸೃಜನಶೀಲ ಅಭಿವ್ಯಕ್ತಿಗೆ ಕನ್ನಡವನ್ನು ಆಯ್ಕೆ ಮಾಡಿಕೊಂಡದ್ದು, ಆ ಭಾಷೆಯ ಮೂಲಕ ಸಂಕೀರ್ಣವಾದ ಆಲೋಚನೆಗಳು ಮತ್ತು ನಾಟಕೀಯ ಅನುಭವಗಳಿಗೆ ಸೂಕ್ತ ರೂಪ ನೀಡಬಹುದು ಎಂಬ ಅವರ ವಿಶ್ವಾಸವನ್ನು ತೋರಿಸುತ್ತದೆ. ಕನ್ನಡದ ಈ ಮುಕ್ತ ಸ್ವಭಾವವೇ ಅದನ್ನು ವಿಶಾಲವಾದ ಸಾಹಿತ್ಯಿಕ ಮತ್ತು ಸಾಂಸ್ಕೃತಿಕ ಸಂವಾದದ ಭಾಗವನ್ನಾಗಿ ಮಾಡಿದೆ ಎಂದರೆ ಉತ್ಪ್ರೇಕ್ಷೆಯಾಗಲಾರದು.

ಕನ್ನಡದ ಭವಿಷ್ಯವನ್ನು ನಿರ್ಧರಿಸುವ ಮತ್ತೊಂದು ಪ್ರಮುಖ ಕ್ಷೇತ್ರ ಶಿಕ್ಷಣ. ಪ್ರಾಥಮಿಕ ಹಂತದಲ್ಲಿ ಮಾತೃಭಾಷೆಯ ಮೂಲಕ ಶಿಕ್ಷಣ ನೀಡುವುದರಿಂದ ಮಕ್ಕಳ ಬೌದ್ಧಿಕ ಬೆಳವಣಿಗೆಗೆ ಅನುಕೂಲವಾಗುತ್ತದೆ ಎಂಬ ವಿಚಾರದಲ್ಲಿ ಯಾವುದೇ ಅನುಮಾನವಿಲ್ಲ. ಕನ್ನಡಕ್ಕೆ ಶಿಕ್ಷಣ ಕ್ಷೇತ್ರದಲ್ಲಿ ಸಮರ್ಪಕ ಸ್ಥಾನ ದೊರಕುವುದರ ಜೊತೆಗೆ, ಉನ್ನತ ಜ್ಞಾನ, ವಿಜ್ಞಾನ, ತಂತ್ರಜ್ಞಾನ ಮತ್ತು ಸಂಶೋಧನೆಯ ಕ್ಷೇತ್ರಗಳಲ್ಲಿಯೂ ಕನ್ನಡದ ಬಳಕೆಗೆ ಅವಕಾಶ ವಿಸ್ತರಿಸಬೇಕು. ಭಾಷೆಯು ಶಿಕ್ಷಣದೊಂದಿಗೆ ಸಂಪರ್ಕ ಕಳೆದುಕೊಂಡರೆ ಮುಂದಿನ ಪೀಳಿಗೆಯೊಂದಿಗೆ ಅದರ ಸಂಬಂಧ ದುರ್ಬಲವಾಗುವ ಸಾಧ್ಯತೆ ಇದೆ. ಆದ್ದರಿಂದ ಶಿಕ್ಷಣ ಮತ್ತು ಭಾಷೆಯ ನಡುವಿನ ಸಂಬಂಧವನ್ನು ಬಲಪಡಿಸುವುದು ಕನ್ನಡದ ಭವಿಷ್ಯಕ್ಕಾಗಿ ಮಹತ್ವದ್ದಾಗಿದೆ.

ಅದೇ ರೀತಿ ಸಾರ್ವಜನಿಕ ಮತ್ತು ವಾಣಿಜ್ಯ ಬದುಕಿನಲ್ಲಿಯೂ ಕನ್ನಡದ ಬಳಕೆ ಹೆಚ್ಚಾಗಬೇಕು. ಅಂಗಡಿಗಳು, ಕಛೇರಿಗಳು, ಸಾರ್ವಜನಿಕ ಸೇವಾ ಸಂಸ್ಥೆಗಳು ಮತ್ತು ವಿವಿಧ ಸಾಮಾಜಿಕ ವ್ಯವಹಾರಗಳಲ್ಲಿ ಕನ್ನಡಕ್ಕೆ ಆದ್ಯತೆ ದೊರಕುವುದು ಭಾಷೆಯನ್ನು ಜನಜೀವನದೊಂದಿಗೆ ನಿರಂತರವಾಗಿ ಸಂಪರ್ಕದಲ್ಲಿಡುತ್ತದೆ. ಡಿಜಿಟಲ್ ಯುಗದಲ್ಲಿ ಅಂತರ್ಜಾಲ, ವಿಕಿಪೀಡಿಯಾ, ಬ್ಲಾಗ್‌ಗಳು, ಸಾಮಾಜಿಕ ಜಾಲತಾಣಗಳು ಮತ್ತು ಇತರ ಡಿಜಿಟಲ್ ವೇದಿಕೆಗಳಲ್ಲಿ ಕನ್ನಡದ ವಿಷಯಸೃಷ್ಟಿ ಹೆಚ್ಚಾಗುವುದು ಭಾಷೆಯ ಹೊಸ ಪೀಳಿಗೆಯೊಂದಿಗೆ ಸಂಬಂಧವನ್ನು ಬಲಪಡಿಸಬಲ್ಲದು.

ಅಂತಿಮವಾಗಿ, ಕನ್ನಡವನ್ನು ಉಳಿಸುವುದು ಎಂದರೆ ಕೇವಲ ಭೂತಕಾಲದ ಸ್ಮಾರಕಗಳನ್ನು ಸಂರಕ್ಷಿಸುವುದಲ್ಲ. ಭಾಷೆಯೊಂದಿಗೆ ಸಂಬಂಧಿಸಿದ ಸ್ಥಳೀಯ ಜ್ಞಾನ, ಐತಿಹಾಸಿಕ ಅರಿವು, ಸಾಂಸ್ಕೃತಿಕ ನೆನಪುಗಳು ಮತ್ತು ಜೀವನಾನುಭವಗಳು ದೈನಂದಿನ ಬಳಕೆಯ ಮೂಲಕವೇ ಮುಂದಿನ ಪೀಳಿಗೆಗೆ ಸಾಗುತ್ತವೆ. ಒಂದು ಭಾಷೆ ಜನರ ದೈನಂದಿನ ಬದುಕಿನಿಂದ ದೂರವಾದಾಗ ಅದರೊಂದಿಗೆ ಬೆಸೆದುಕೊಂಡಿರುವ ಜ್ಞಾನಪರಂಪರೆಯೂ ನಿಧಾನವಾಗಿ ಕ್ಷೀಣಿಸಬಹುದು. ಹೀಗಾಗಿ ಕನ್ನಡದ ಭವಿಷ್ಯವು ಸರ್ಕಾರದ ನೀತಿಗಳು, ಶೈಕ್ಷಣಿಕ ಸಂಶೋಧನೆ ಮತ್ತು ಸಂಸ್ಥೆಗಳ ಪ್ರಯತ್ನಗಳಷ್ಟೇ ಅಲ್ಲದೆ, ಪ್ರತಿಯೊಬ್ಬ ಕನ್ನಡಿಗನ ದೈನಂದಿನ ಭಾಷಾ ಆಯ್ಕೆಯ ಮೇಲೂ ಅವಲಂಬಿತವಾಗಿದೆ.

ಕನ್ನಡವು ಕೇವಲ ಪ್ರಾಚೀನ ಪರಂಪರೆಯ ಅವಶೇಷವಲ್ಲ; ಬದಲಾಗಿ, ಕಾಲದ ಬದಲಾವಣೆಗಳಿಗೆ ಹೊಂದಿಕೊಳ್ಳುವ, ಹೊಸ ಜ್ಞಾನವನ್ನು ಸ್ವೀಕರಿಸುವ ಮತ್ತು ಜಾಗತಿಕ ಸವಾಲುಗಳಿಗೆ ಉತ್ತರ ನೀಡುವ ಜೀವಂತ ಭಾಷಾ ವ್ಯವಸ್ಥೆಯಾಗಿದೆ. ಅದರ ಭವಿಷ್ಯವನ್ನು ಭೂತಕಾಲದ ವೈಭವವನ್ನು ನೆನಪಿಸಿಕೊಳ್ಳುವುದರಿಂದ ಮಾತ್ರ ನಿರ್ಮಿಸಲು ಸಾಧ್ಯವಿಲ್ಲ. ಪರಂಪರೆಯ ಬೇರುಗಳನ್ನು ಗಟ್ಟಿಯಾಗಿ ಹಿಡಿದುಕೊಂಡೇ ಆಧುನಿಕ ತಂತ್ರಜ್ಞಾನ, ಶಿಕ್ಷಣ, ವಿಜ್ಞಾನ, ಸಾಹಿತ್ಯ ಮತ್ತು ಜಾಗತಿಕ ಸಂವಾದಗಳೊಂದಿಗೆ ಕನ್ನಡವನ್ನು ಮುನ್ನಡೆಸಬೇಕಾಗಿದೆ. ಜಗತ್ತಿನ ಭಾಷೆಗಳೊಂದಿಗೆ ಸಹಬಾಳ್ವೆ ನಡೆಸುತ್ತಾ, ತನ್ನದೇ ಆದ ಸಾಂಸ್ಕೃತಿಕ ಸ್ವರೂಪವನ್ನು ಉಳಿಸಿಕೊಂಡು, ಹೊಸ ಪೀಳಿಗೆಯ ಬದುಕಿನ ಸಹಜ ಭಾಷೆಯಾಗಿ ಕನ್ನಡ ಬೆಳೆಯುವುದೇ ಅದರ ನಿಜವಾದ ಜೀವಂತಿಕೆ.

ಆದ್ದರಿಂದ ಕನ್ನಡದ ಭವಿಷ್ಯದ ಪ್ರಶ್ನೆ ಕೇವಲ 'ಕನ್ನಡ ಉಳಿಯುತ್ತದೆಯೇ?' ಎಂಬುದಲ್ಲ; 'ನಾವು ಕನ್ನಡವನ್ನು ನಮ್ಮ ಬದುಕಿನಲ್ಲಿ ಎಷ್ಟು ಜೀವಂತವಾಗಿಡುತ್ತೇವೆ?' ಎಂಬುದಾಗಿದೆ. ಮನೆಮಾತಿನಿಂದ ತಂತ್ರಜ್ಞಾನದವರೆಗೆ, ಶಿಕ್ಷಣದಿಂದ ಸಾಹಿತ್ಯದವರೆಗೆ, ಗ್ರಾಮೀಣ ಆಡುಮಾತಿನಿಂದ ಜಾಗತಿಕ ವೇದಿಕೆಯವರೆಗೆ ಕನ್ನಡದ ವ್ಯಾಪ್ತಿಯನ್ನು ವಿಸ್ತರಿಸುವ ಹೊಣೆಗಾರಿಕೆ ನಮ್ಮೆಲ್ಲರ ಮೇಲಿದೆ. ಪರಂಪರೆಯನ್ನು ಗೌರವಿಸುತ್ತಾ ಪರಿವರ್ತನೆಯನ್ನು ಸ್ವೀಕರಿಸುವ ಕನ್ನಡವೇ ಭವಿಷ್ಯದ ಕನ್ನಡ.

Downloaded From:www.kpscvaani.com



ಕೌಂಟರ್‌ನಿಂದ ಮೊಬೈಲ್‌ಗೆ

ಸಾರಿಗೆ ಸೇವೆಗೆ ಡಿಜಿಟಲ್ ಸ್ಪರ್ಶ

ಟಿಕೆಟ್ ಕಾಯ್ದಿರಿಸುವುದರಿಂದ ರದ್ದತಿಯವರೆಗೆ ಹಲವು ಸೇವೆಗಳು ಈಗ ಒಂದೇ ವೇದಿಕೆಯಲ್ಲಿ ಲಭ್ಯ. ಅದರಲ್ಲೂ ವಾಟ್ಸಾಪ್‌ನಲ್ಲೇ ಬಸ್ ಟಿಕೆಟ್ ಕಾಯ್ದಿರಿಸುವ ಸೌಲಭ್ಯದಿಂದ ಕೆಎಸ್‌ಆರ್‌ಟಿಸಿ ಸೇವೆ ಪ್ರಯಾಣಿಕರ ಕೈಬೆರಳ ತುದಿಗೆ ಬಂದಿದೆ. ತಂತ್ರಜ್ಞಾನ ಮತ್ತು ಸಾರಿಗೆಯ ಈ ಸಂಗಮವು ಪ್ರಯಾಣವನ್ನು ಮತ್ತಷ್ಟು ಸುಲಭ, ವೇಗದ ಹಾಗೂ ಜನಸ್ನೇಹಿಯಾಗಿಸುತ್ತಿದೆ.

ಭಾಗ್ಯ ಎಂ.

ರಾಜ್ಯ ರಸ್ತೆ ಸಾರಿಗೆ ಸಂಸ್ಥೆಯ ಸೇವೆ ಪಡೆಯಲು ಇನ್ನು ಮುಂದೆ ಕೌಂಟರ್‌ಗೆ ತೆರಳಿ ಸರತಿ ಸಾಲಿನಲ್ಲಿ ನಿಲ್ಲಬೇಕಾದ ಅನಿವಾರ್ಯತೆ ಕ್ರಮೇಣ ಕಡಿಮೆಯಾಗುತ್ತಿದೆ. ಮೊಬೈಲ್‌ನಲ್ಲೇ ಟಿಕೆಟ್ ಬುಕ್ ಮಾಡುವುದು, ಪಾವತಿ ಮಾಡುವುದು, ಇ-ಟಿಕೆಟ್ ಪಡೆಯುವುದು, ಅಗತ್ಯವಿದ್ದರೆ ಟಿಕೆಟ್ ರದ್ದುಪಡಿಸುವುದು ಇವೆಲ್ಲವೂ ಡಿಜಿಟಲ್ ಮೂಲಕವೇ ಸಾಧ್ಯವಾಗುತ್ತಿದೆ.

"ಸಾರಿಗೆ ಸೇವೆ ಜನರ ಬಳಿಗೆ ಹೋಗುವುದಲ್ಲ ಈಗ ಸಾರಿಗೆ ಸೇವೆಯೇ ಜನರ ಮೊಬೈಲ್‌ಗೆ ಬರುತ್ತಿದೆ" ಎಂಬ ಹೊಸ ಪರಿಕಲ್ಪನೆಯೊಂದಿಗೆ ಕರ್ನಾಟಕವು ಸಾರ್ವಜನಿಕ ಸಾರಿಗೆಯನ್ನು ಮತ್ತಷ್ಟು ಸರಳ ಮತ್ತು ಪ್ರಯಾಣಿಕ ಸ್ನೇಹಿಯಾಗಿಸುವತ್ತ ಹೆಜ್ಜೆ ಇಡುತ್ತಿದೆ.

ಈ ನಿಟ್ಟಿನಲ್ಲಿ ಕರ್ನಾಟಕ ರಾಜ್ಯ ರಸ್ತೆ ಸಾರಿಗೆ ನಿಗಮ (ಕೆಎಸ್‌ಆರ್‌ಟಿಸಿ) ವಾಟ್ಸಾಪ್ ಆಧಾರಿತ ಮುಂಗಡ ಟಿಕೆಟ್ ಬುಕ್ಕಿಂಗ್ ವ್ಯವಸ್ಥೆಯನ್ನು ಪರಿಚಯಿಸುತ್ತಿದೆ. ಜನರು ಪ್ರತಿದಿನ ಬಳಸುವ ವಾಟ್ಸಾಪ್ ವೇದಿಕೆಯಲ್ಲೇ ಬಸ್ ಟಿಕೆಟ್ ಕಾಯ್ದಿರಿಸುವ ಅವಕಾಶ ದೊರೆಯುವುದರಿಂದ, ಸಾರ್ವಜನಿಕ ಸಾರಿಗೆ ಸೇವೆ ಮತ್ತಷ್ಟು ಸುಲಭವಾಗಿ ಜನರ ಕೈಗೆ ತಲುಪಲಿದೆ.

Downloaded From:www.kpscvaani.com

ಒಂದೇ ವೇದಿಕೆಯಲ್ಲಿ ನಾಲ್ಕು ಸಾರಿಗೆ ಸಂಸ್ಥೆಗಳು

ರಾಜ್ಯದ ಸಾರ್ವಜನಿಕ ಸಾರಿಗೆ ವ್ಯವಸ್ಥೆಯನ್ನು ಮತ್ತಷ್ಟು ಸಮಗ್ರಗೊಳಿಸುವ ಉದ್ದೇಶದಿಂದ 'ಒಂದು ಕರ್ನಾಟಕ ಮೊಬಿಲಿಟಿ ಆಪ್' ಅಭಿವೃದ್ಧಿಪಡಿಸಲಾಗಿದೆ. ಈ ವೇದಿಕೆಯಲ್ಲಿ ರಾಜ್ಯದ ಕರ್ನಾಟಕ ರಾಜ್ಯ ರಸ್ತೆ ಸಾರಿಗೆ ನಿಗಮ (ಕೆಎಸ್ಆರ್‌ಟಿಸಿ), ವಾಯವ್ಯ ಕರ್ನಾಟಕ ರಸ್ತೆ ಸಾರಿಗೆ ಸಂಸ್ಥೆ (ಎನ್‌ಡಬ್ಲ್ಯೂಕೆಎಸ್ಆರ್‌ಟಿ), ಕಲ್ಯಾಣ ಕರ್ನಾಟಕ ರಸ್ತೆ ಸಾರಿಗೆ ನಿಗಮ (ಕೆಕೆಆರ್‌ಟಿಸಿ) ಹಾಗೂ ಬೆಂಗಳೂರು ಮಹಾನಗರ ಸಾರಿಗೆ ಸಂಸ್ಥೆ (ಬಿಎಂಟಿಸಿ) ಈ ನಾಲ್ಕು ಪ್ರಮುಖ ಸಾರಿಗೆ ಸಂಸ್ಥೆಗಳನ್ನು ಒಗ್ಗೂಡಿಸುವ ವ್ಯವಸ್ಥೆ ರೂಪಿಸಲಾಗಿದೆ.

2026ರ ಸೆಪ್ಟೆಂಬರ್ 10ರಂದು ವಿಧಾನಸೌಧದಲ್ಲಿ ನಡೆದ ಸರ್ಕಾರದ 100 ದಿನಗಳ ಕಾರ್ಯಕ್ರಮದ ಅಂಗವಾಗಿ ನವೀಕೃತ 'ಒಂದು ಕರ್ನಾಟಕ ಮೊಬಿಲಿಟಿ ಆಪ್' ಹಾಗೂ ವಾಟ್ಸ್ಆಪ್ ಮೂಲಕ ಟಿಕೆಟ್ ಬುಕ್ಕಿಂಗ್ ಸೌಲಭ್ಯವನ್ನು ಲೋಕಾರ್ಪಣೆಗೊಳಿಸಲಾಯಿತು.

ವಾಟ್ಸ್ಆಪ್‌ನಲ್ಲೇ ಟಿಕೆಟ್ ಬುಕ್ಕಿಂಗ್

ಪ್ರಯಾಣಿಕರು ಮುಂಗಡವಾಗಿ ಬಸ್ ಟಿಕೆಟ್ ಕಾಯ್ದಿರಿಸಲು ಕೆಎಸ್ಆರ್‌ಟಿಸಿಯ AWATAR-Advanced Web and Android Ticketing and Reservation ವ್ಯವಸ್ಥೆಯನ್ನು ಬಳಸಬಹುದಾಗಿದೆ.

ಈಗಾಗಲೇ ಆನ್ಲೈನ್, ಮೊಬೈಲ್ ಹಾಗೂ ಮುಂಗಡ ಟಿಕೆಟ್ ಕಾಯ್ದಿರಿಸುವ ಕೌಂಟರ್‌ಗಳ ಮೂಲಕ ಟಿಕೆಟ್ ಬುಕ್ಕಿಂಗ್ ವ್ಯವಸ್ಥೆ ಲಭ್ಯವಿದೆ. ಇದರ ಮುಂದುವರಿದ ಭಾಗವಾಗಿ ವಾಟ್ಸ್ಆಪ್ ಮೂಲಕವಾಗಿಯೂ ಟಿಕೆಟ್ ಕಾಯ್ದಿರಿಸುವ ಸೌಲಭ್ಯ ಒದಗಿಸಲಾಗುತ್ತಿದೆ.

ಇದರಿಂದ ಪ್ರಯಾಣಿಕರು ತಮ್ಮ ಮೊಬೈಲ್‌ನಲ್ಲೇ ಪ್ರಯಾಣದ ವಿವರಗಳನ್ನು ನಮೂದಿಸಿ, ಸೂಕ್ತ ಬಸ್ ಮತ್ತು ಆಸನವನ್ನು ಆಯ್ಕೆ ಮಾಡಿಕೊಂಡು ಟಿಕೆಟ್ ಬುಕ್ ಮಾಡಬಹುದು. ಪಾವತಿ ಪೂರ್ಣಗೊಂಡ ನಂತರ ಇ-ಟಿಕೆಟ್ ಪಡೆಯಲು ಸಾಧ್ಯವಾಗುತ್ತದೆ.

30 ದಿನಗಳ ಮುಂಚಿತವಾಗಿ ಟಿಕೆಟ್ ಕಾಯ್ದಿರಿಸಿ

ಪ್ರಯಾಣಿಕರು ತಮ್ಮ ಪ್ರಯಾಣವನ್ನು ಮುಂಚಿತವಾಗಿಯೇ ಯೋಜಿಸಿಕೊಳ್ಳಲು 30 ದಿನಗಳ ಮುಂಚಿತವಾಗಿ ಟಿಕೆಟ್ ಕಾಯ್ದಿರಿಸುವ ಅವಕಾಶವಿದೆ. ದೂರದ ಪ್ರಯಾಣ, ಕುಟುಂಬದೊಂದಿಗೆ ಪ್ರವಾಸ, ಹಬ್ಬ-ಹರಿದಿನಗಳ ಪ್ರಯಾಣ ಅಥವಾ ಮುಂಚಿತ ಯೋಜನೆ ಅಗತ್ಯವಿರುವ ಸಂದರ್ಭಗಳಲ್ಲಿ ಈ ಸೌಲಭ್ಯ ಹೆಚ್ಚು ಅನುಕೂಲಕರವಾಗಲಿದೆ.

ಡಿಜಿಟಲ್ ಪಾವತಿ : ಇ-ಟಿಕೆಟ್ ನೇರವಾಗಿ ಮೊಬೈಲ್‌ಗೆ

ಟಿಕೆಟ್ ಬುಕ್ಕಿಂಗ್ ಸಂದರ್ಭದಲ್ಲಿ ಯುಪಿಐ, ಕ್ರೆಡಿಟ್ ಕಾರ್ಡ್, ಡೆಬಿಟ್ ಕಾರ್ಡ್ ಹಾಗೂ ವಾಲೆಟ್ ಸೇರಿದಂತೆ ವಿವಿಧ ಡಿಜಿಟಲ್ ಪಾವತಿ ವಿಧಾನಗಳನ್ನು ಬಳಸಬಹುದು. ಪಾವತಿ ಯಶಸ್ವಿಯಾದ ನಂತರ ಬುಕ್ಕಿಂಗ್ ದೃಢೀಕರಣ ಮತ್ತು ಇ-ಟಿಕೆಟ್ ಅನ್ನು ವಾಟ್ಸ್ಆಪ್ ಹಾಗೂ ಇ-ಮೇಲ್ ಮೂಲಕ ಪ್ರಯಾಣಿಕರಿಗೆ ಕಳುಹಿಸಲಾಗುತ್ತದೆ. ಹೀಗಾಗಿ ಕಾಗದದ ಟಿಕೆಟ್‌ನ್ನು ಪ್ರತ್ಯೇಕವಾಗಿ ತೆಗೆದುಕೊಂಡು ಹೋಗುವ ಅಗತ್ಯವೂ ಇರುವುದಿಲ್ಲ.

ವಾಟ್ಸ್ಆಪ್‌ನಲ್ಲೇ ಟಿಕೆಟ್ ರದ್ದುಪಡಿಸಿ

ಟಿಕೆಟ್ ಬುಕ್ ಮಾಡಿದ ನಂತರ ಪ್ರಯಾಣ ರದ್ದುಪಡಿಸುವ ಪರಿಸ್ಥಿತಿ ಬಂದರೂ ಕೌಂಟರ್‌ಗೆ ತೆರಳಬೇಕಾಗಿಲ್ಲ. ವಾಟ್ಸ್ಆಪ್ ಮೂಲಕ ಬುಕ್ ಮಾಡಿರುವ ಟಿಕೆಟ್ ಅನ್ನು ಅದೇ ಸಂಖ್ಯೆಯ ಮೂಲಕ ರದ್ದುಪಡಿಸಬಹುದು. ಇದಕ್ಕಾಗಿ ವಾಟ್ಸ್ಆಪ್‌ನಲ್ಲಿ 'Ticket Cancellation' ಆಯ್ಕೆಯನ್ನು ಆರಿಸಿ, PNR ಸಂಖ್ಯೆ, ಮೊಬೈಲ್ ಸಂಖ್ಯೆ ಮತ್ತು ಬುಕ್ಕಿಂಗ್ ಸಂದರ್ಭದಲ್ಲಿ ಪಡೆದ Transaction Password ಅನ್ನು ನಮೂದಿಸಿ ರದ್ದತಿ ಪ್ರಕ್ರಿಯೆಯನ್ನು ಪೂರ್ಣಗೊಳಿಸಬಹುದು.

ದೂರುಗಳಿಗೂ ಒಂದೇ ಡಿಜಿಟಲ್ ವೇದಿಕೆ

'ಒಂದು ಕರ್ನಾಟಕ ಮೊಬಿಲಿಟಿ ಆಪ್'ನ ಮತ್ತೊಂದು ಪ್ರಮುಖ ಸೌಲಭ್ಯವೆಂದರೆ ದೂರು ನಿರ್ವಹಣೆ. ಕೆಎಸ್ಆರ್‌ಟಿಸಿ, ವಾಯವ್ಯ ಕರ್ನಾಟಕ ರಸ್ತೆ ಸಾರಿಗೆ ಸಂಸ್ಥೆ, ಕಲ್ಯಾಣ ಕರ್ನಾಟಕ ರಸ್ತೆ ಸಾರಿಗೆ ನಿಗಮ ಹಾಗೂ ಬೆಂಗಳೂರು ಮಹಾನಗರ ಸಾರಿಗೆ ಸಂಸ್ಥೆಗಳಿಗೆ ಸಂಬಂಧಿಸಿದ ದೂರುಗಳನ್ನು ಒಂದೇ ವೇದಿಕೆಯಲ್ಲಿ ದಾಖಲಿಸಬಹುದು. ದೂರು ದಾಖಲಿಸಿದ ನಂತರ ಅದರ ಸ್ಥಿತಿ ಏನು, ಯಾವ ಹಂತದಲ್ಲಿದೆ ಹಾಗೂ ಪರಿಹಾರದ ಪ್ರಗತಿ ಹೇಗಿದೆ ಎಂಬುದನ್ನು ಪ್ರಯಾಣಿಕರು ಪರಿಶೀಲಿಸಬಹುದು. ಅಗತ್ಯವಿದ್ದಲ್ಲಿ ದೂರುವನ್ನು ಮೇಲ್ದರ್ಜೆಯ ಅಧಿಕಾರಿಗಳ ಗಮನಕ್ಕೂ ಕೊಂಡೊಯ್ಯುವ ವ್ಯವಸ್ಥೆ ಇದೆ. ಇದರಿಂದ ದೂರು ನೀಡುವುದಷ್ಟೇ ಅಲ್ಲದೆ, ತಾನು ಕೊಟ್ಟು ದೂರು ಈಗ ಯಾವ ಹಂತದಲ್ಲಿದೆ ಎಂಬುದನ್ನು ಪ್ರಯಾಣಿಕನೇ ತಿಳಿದುಕೊಳ್ಳಲು ಸಾಧ್ಯವಾಗಲಿದೆ.

ಬುಕ್ಕಿಂಗ್ ಮಾಹಿತಿಯಲ್ಲೂ ಪಾರದರ್ಶಕತೆ

ವಾಟ್ಸ್ಆಪ್ ಮೂಲಕ ಮಾಡಲಾದ ಎಲ್ಲಾ ಬುಕ್ಕಿಂಗ್‌ಗಳನ್ನು ಪ್ರತ್ಯೇಕವಾಗಿ "WhatsApp Booking" ಎಂದು ಗುರುತಿಸಲಾಗುತ್ತದೆ. ಈ ಬುಕ್ಕಿಂಗ್‌ಗಳ ಮಾಹಿತಿಯನ್ನು Mode-wise Booking Report, Trip Sheet ಹಾಗೂ Track Ticket ವರದಿಗಳಲ್ಲಿಯೂ ಪ್ರತ್ಯೇಕವಾಗಿ ಪ್ರದರ್ಶಿಸುವ ವ್ಯವಸ್ಥೆ ಮಾಡಲಾಗಿದೆ. ಇದರಿಂದ ಟಿಕೆಟ್ ಬುಕ್ಕಿಂಗ್ ಮತ್ತು ಬಸ್ ಕಾರ್ಯಾಚರಣೆಗೆ ಸಂಬಂಧಿಸಿದ ಮಾಹಿತಿಯನ್ನು ವ್ಯವಸ್ಥಿತವಾಗಿ ನಿರ್ವಹಿಸಲು ಅನುಕೂಲವಾಗಲಿದೆ.

Downloaded From:www.kpscvaani.com



ಸಿಬ್ಬಂದಿಗೂ ಡಿಜಿಟಲ್ ನೆರವು

ಡಿಜಿಟಲ್ ವ್ಯವಸ್ಥೆಯ ಪ್ರಯೋಜನ ಪ್ರಯಾಣಿಕರಿಗೆ ಮಾತ್ರ ಸೀಮಿತವಾಗಿಲ್ಲ. ಬಸ್ ನಿಲ್ದಾಣಗಳು, ನಿಗಮದ ಘಟಕಗಳು, ಟಿಕೆಟ್ ಕೌಂಟರ್‌ಗಳು ಹಾಗೂ ಸಂಬಂಧಿತ ಸಿಬ್ಬಂದಿಗೂ ಅಗತ್ಯ ಮಾಹಿತಿಯನ್ನು ತ್ವರಿತವಾಗಿ ಪಡೆಯಲು ಇದು ನೆರವಾಗಲಿದೆ. ಟಿಕೆಟ್ ನಿರ್ವಹಣೆ, ಬುಕ್ಕಿಂಗ್ ಮಾಹಿತಿ ಹಾಗೂ ಪ್ರಯಾಣಿಕರ ಸೇವೆಗೆ ಸಂಬಂಧಿಸಿದ ಮಾಹಿತಿಯನ್ನು ಡಿಜಿಟಲ್ ರೂಪದಲ್ಲಿ ನಿರ್ವಹಿಸುವುದರಿಂದ ಆಡಳಿತಾತ್ಮಕ ಕಾರ್ಯಗಳು ಮತ್ತಷ್ಟು ಸರಳವಾಗಲಿವೆ. ಮಾಹಿತಿಯ ನಿಖರತೆ ಹೆಚ್ಚುವುದರ ಜೊತೆಗೆ ಸೇವೆ ನೀಡುವಲ್ಲಿ ಆಗುವ ವಿಳಂಬವನ್ನು ಕಡಿಮೆ ಮಾಡುವ ನಿರೀಕ್ಷೆಯಿದೆ.

ಮುಂದಿನ ಹೆಜ್ಜೆ– ಡಿಜಿಟಲ್ ಬಸ್ ಪಾಸ್

ಸಾರ್ವಜನಿಕ ಸಾರಿಗೆಯ ಡಿಜಿಟಲೀಕರಣವು ಟಿಕೆಟ್ ಬುಕ್ಕಿಂಗ್‌ನಲ್ಲೇ ನಿಲ್ಲುವುದಿಲ್ಲ. ಮುಂದಿನ ಹಂತದಲ್ಲಿ ಡಿಜಿಟಲ್ ಮಾಸಿಕ ಬಸ್ ಪಾಸ್ ವ್ಯವಸ್ಥೆಯನ್ನು ಜಾರಿಗೆ ತರಲು ಉದ್ದೇಶಿಸಲಾಗಿದೆ. ಆನ್‌ಲೈನ್‌ನಲ್ಲಿಯೇ ಬಸ್ ಪಾಸ್ ಬುಕ್ಕಿಂಗ್, ವಿತರಣೆ ಮತ್ತು ನಿರ್ವಹಣೆ ಮಾಡುವ ವ್ಯವಸ್ಥೆ ರೂಪುಗೊಳ್ಳಲಿದ್ದು, ಕ್ಯೂಆರ್ ಕೋಡ್ ಆಧಾರಿತ ಡಿಜಿಟಲ್ ಪರಿಶೀಲನೆಗೂ ಅವಕಾಶ ಕಲ್ಪಿಸುವ ಉದ್ದೇಶವಿದೆ.

ಹೊಸ ಡಿಜಿಟಲ್ ಪಯಣ

ಸಾರ್ವಜನಿಕ ಸಾರಿಗೆಯ ಯಶಸ್ಸು ಕೇವಲ ಬಸ್‌ಗಳ ಸಂಖ್ಯೆ ಅಥವಾ ಮಾರ್ಗಗಳ ವಿಸ್ತರಣೆಯಿಂದ ಮಾತ್ರ ನಿರ್ಧಾರವಾಗುವುದಿಲ್ಲ. ಪ್ರಯಾಣಿಕರಿಗೆ ಸೇವೆ ಎಷ್ಟು ಸುಲಭ, ವೇಗ, ವಿಶ್ವಾಸಾರ್ಹ ಮತ್ತು ಪಾರದರ್ಶಕವಾಗಿ ದೊರೆಯುತ್ತದೆ ಎಂಬುದೂ ಅಷ್ಟೇ ಮುಖ್ಯ. ಪ್ರತಿದಿನ ಮೊಬೈಲ್ ಮತ್ತು ಡಿಜಿಟಲ್ ಸೇವೆಗಳನ್ನು ಬಳಸುವ ಜನರಿಗೆ ಪರಿಚಿತವಾಗಿರುವ ವಾಟ್ಸ್‌ಆಪ್‌ನಲ್ಲೇ ಟಿಕೆಟ್ ಬುಕ್ಕಿಂಗ್ ಸೌಲಭ್ಯ ಕಲ್ಪಿಸುವುದು ಈ ಬದಲಾವಣೆಯ ಪ್ರಮುಖ ಹೆಜ್ಜೆಯಾಗಿದೆ.

ಕೌಂಟರ್‌ಗೆ ಹೋಗುವ ಸಮಯವನ್ನು ಉಳಿಸುವುದು, ಪ್ರಯಾಣವನ್ನು ಮುಂಚಿತವಾಗಿ ಯೋಜಿಸಲು ನೆರವಾಗುವುದು, ಡಿಜಿಟಲ್ ಪಾವತಿಗೆ ಅವಕಾಶ ನೀಡುವುದು, ಇ–ಟಿಕೆಟ್ ನೇರವಾಗಿ ಮೊಬೈಲ್‌ಗೆ ತಲುಪಿಸುವುದು ಮತ್ತು ಟಿಕೆಟ್ ರದ್ದತಿಯನ್ನೂ ಸುಲಭಗೊಳಿಸುವುದು ಇವೆಲ್ಲವೂ ಪ್ರಯಾಣಿಕರ ಅನುಭವವನ್ನು ಉತ್ತಮಗೊಳಿಸುವ ಉದ್ದೇಶ ಹೊಂದಿವೆ. 'ಪ್ರಯಾಣಿಕರ ಕೈಯಲ್ಲೇ ಸಾರಿಗೆ ಸೇವೆ' ಎಂಬ ಪರಿಕಲ್ಪನೆಯೊಂದಿಗೆ ಕರ್ನಾಟಕದ ಸಾರ್ವಜನಿಕ ಸಾರಿಗೆ ವ್ಯವಸ್ಥೆ ಡಿಜಿಟಲ್ ಪಯಣದಲ್ಲಿ ಮತ್ತೊಂದು ಹೆಜ್ಜೆ ಮುಂದಿಟ್ಟಿದೆ.

ತಂತ್ರಜ್ಞಾನವನ್ನು ಕೇವಲ ಕಚೇರಿ ಕೆಲಸಕ್ಕೆ ಬಳಸುವುದಕ್ಕಿಂತ, ಅದನ್ನು ನೇರವಾಗಿ ಪ್ರಯಾಣಿಕರ ದಿನನಿತ್ಯದ ಬದುಕಿಗೆ ತಲುಪಿಸುವ ಪ್ರಯತ್ನ ಇದಾಗಿದೆ. ■

Downloaded From:www.kpscvaani.com



ಗ್ಯಾರಂಟಿ ಯೋಜನೆಗಳಿಂದ ಸಬಲೀಕರಣ; ಗೃಹಲಕ್ಷ್ಮಿಯರ ಹರ್ಷ

ಡಿ.ಎಸ್. ಬಸವರಾಜು

ಕರ್ನಾಟಕದ ಇತಿಹಾಸದಲ್ಲಿ ಮಹಿಳೆಯರ ಸಾಮಾಜಿಕ ಮತ್ತು ಆರ್ಥಿಕ ಸಬಲೀಕರಣದ ದೃಷ್ಟಿಯಿಂದ ಗ್ಯಾರಂಟಿ ಯೋಜನೆಗಳ ಅನುಷ್ಠಾನವು ಒಂದು ಅಭೂತಪೂರ್ವ ಮೈಲಿಗಲ್ಲಾಗಿ ದಾಖಲಾಗಲಿದೆ. ರಾಜ್ಯ ಸರ್ಕಾರದ ಮಹತ್ವಾಕಾಂಕ್ಷೆಯ ಯೋಜನೆಗಳಾದ **'ಶಕ್ತಿ'** (ಉಚಿತ ಸಾರಿಗೆ ಸೌಲಭ್ಯ) ಮತ್ತು **'ಗೃಹಲಕ್ಷ್ಮಿ'** (ಮನೆ ಒಡತಿಗೆ ಮಾಸಿಕ ರೂ.2,000) ಯೋಜನೆಗಳು ಕೇವಲ ಕಲ್ಯಾಣ ಕಾರ್ಯಕ್ರಮಗಳಾಗಿ ಉಳಿದಿಲ್ಲ. ಬದಲಿಗೆ, ಅವು ಕೋಟ್ಯಂತರ ಮಹಿಳೆಯರ ಆತ್ಮವಿಶ್ವಾಸ, ಚಲನಶೀಲತೆ ಮತ್ತು ಆರ್ಥಿಕ ಸ್ವಾತಂತ್ರ್ಯವನ್ನು ಮರುರೂಪಿಸುತ್ತಿರುವ ಸದ್ದಿಲ್ಲದ ಕ್ರಾಂತಿಯಾಗಿ ಮಾರ್ಪಟ್ಟಿವೆ.

Downloaded From:www.kpscvaani.com

ಈಚೆಗೆ ಕರ್ನಾಟಕ ಸರ್ಕಾರ ಬಿಡುಗಡೆ ಮಾಡಿರುವ ಅಧಿಕೃತ ಅಂಕಿ-ಅಂಶಗಳ ವರದಿಯು, ಈ ಯೋಜನೆಗಳು ಪ್ರತಿಯೊಂದು ಜಿಲ್ಲೆಯ ಗ್ರಾಮೀಣ ಮತ್ತು ನಗರ ಪ್ರದೇಶಗಳ ಬಡತನದ ರೇಖೆಗಿಂತ ಕೆಳಗಿರುವ ಮಹಿಳೆಯರ ಬದುಕನ್ನು ಹೇಗೆ ಬದಲಾಯಿಸಿವೆ ಎಂಬುದನ್ನು ಸ್ಪಷ್ಟಪಡಿಸಿದೆ. ರಾಜ್ಯದಾದ್ಯಂತ 'ಗೃಹಲಕ್ಷ್ಮಿ' ಯೋಜನೆಯಡಿ ಸರ್ಕಾರವು ರೂ.76,951.13 ಕೋಟಿಯನ್ನು ಮಹಿಳೆಯರ ಖಾತೆಗಳಿಗೆ ನೇರವಾಗಿ ಜಮೆ ಮಾಡಿದ್ದರೆ, 'ಶಕ್ತಿ' ಯೋಜನೆಯಡಿ ಸಾರಿಗೆ ಸಂಸ್ಥೆಗಳ ಮೂಲಕ ಉಚಿತ ಪ್ರಯಾಣಕ್ಕಾಗಿ ರೂ.15,735ಕೋಟಿ ಭರಿಸಿದೆ. ಇಡೀ ರಾಜ್ಯದಲ್ಲಿ ಮಹಿಳೆಯರು 821 ಕೋಟಿ ಟ್ರಿಪ್‌ಗಳನ್ನು ಉಚಿತವಾಗಿ ಪಯಣಿಸಿ 'ಶಕ್ತಿ' ಯೋಜನೆಯ ಸೌಲಭ್ಯ ಪಡೆದಿದ್ದಾರೆ ಆ ಮೂಲಕ ಮಹಿಳೆಯರ ಸಂಚಾರದ ಗಡಿಗಳು ವಿಸ್ತರಿಸಿವೆ.

ಜಿಲ್ಲೆಯಿಂದ ಜಿಲ್ಲೆಗೆ ಹರಡಿದ ಸಬಲೀಕರಣದ ರಶ್ಮಿ

ರಾಜ್ಯದ ಭೌಗೋಳಿಕ ಮತ್ತು ಸಾಂಸ್ಕೃತಿಕ ವೈವಿಧ್ಯತೆಗೆ ತಕ್ಕಂತೆ ಈ ಯೋಜನೆಗಳ ಬಳಕೆ ಮತ್ತು ಪ್ರಭಾವವು ವಿಭಿನ್ನ ಹಾಗೂ ರೋಚಕ ಒಳನೋಟಗಳನ್ನು ನೀಡುತ್ತದೆ. ದಕ್ಷಿಣ ಕರ್ನಾಟಕದ ರಾಜಧಾನಿ ವಲಯದಿಂದ ಹಿಡಿದು ಕಲ್ಯಾಣ ಕರ್ನಾಟಕ ಮತ್ತು ಕಿತ್ತೂರು ಕರ್ನಾಟಕದ ಗಡಿ ಗ್ರಾಮಗಳವರೆಗೆ ಈ ಯೋಜನೆಗಳು ವಿಭಿನ್ನ ಸ್ವರೂಪದಲ್ಲಿ ತಲುಪುತ್ತಿವೆ.

ಉದ್ಯೋಗ ಮತ್ತು ಸಂಚಾರದ ರಾಜಧಾನಿ

ಬೆಂಗಳೂರು ನಗರದಲ್ಲಿ ಉದ್ಯೋಗಸ್ಥ ಮಹಿಳೆಯರು, ಗಾರ್ಮೆಂಟ್ಸ್ ಕಾರ್ಮಿಕರು ಮತ್ತು ವಿದ್ಯಾರ್ಥಿನಿಯರ ಸಂಖ್ಯೆ ಹೆಚ್ಚಿದೆ. ಹೀಗಾಗಿ, ಇಲ್ಲಿ 'ಶಕ್ತಿ' ಯೋಜನೆಯು ಸಾರಿಗೆ ವ್ಯವಸ್ಥೆಯ ಚಿತ್ರಣವನ್ನೇ ಬದಲಾಯಿಸಿದೆ. ರಾಜ್ಯದಲ್ಲೇ ಅತಿ ಹೆಚ್ಚು, ಅಂದರೆ 221.13 ಲಕ್ಷ ಮಹಿಳೆಯರು 'ಶಕ್ತಿ' ಯೋಜನೆಯಡಿ ಬಿಎಂಟಿಸಿ ಮತ್ತು ಕೆಎಸ್‌ಆರ್‌ಟಿಸಿ ಬಸ್‌ಗಳಲ್ಲಿ ಸಂಚರಿಸಿದ್ದಾರೆ. ಇದಕ್ಕಾಗಿ ಸರ್ಕಾರ ರೂ.15,735 ಕೋಟಿ ಮೊತ್ತವನ್ನು ಭರಿಸಿದೆ.

ಅದೇ ರೀತಿ, ಬೆಂಗಳೂರಿನಲ್ಲಿ 'ಗೃಹಲಕ್ಷ್ಮಿ' ಯೋಜನೆಯಡಿ ಮಹಿಳೆಯರ ಆರ್ಥಿಕ ಸ್ಥಿರತೆಗಾಗಿ ರೂ.4,964.40 ಕೋಟಿಯನ್ನು ವ್ಯಯಿಸಲಾಗಿದೆ.

ತುಮಕೂರು, ರಾಮನಗರ, ಬೆಂಗಳೂರು ಗ್ರಾಮಾಂತರ ಮತ್ತು ಕೋಲಾರದಂತಹ ಬಯಲುಸೀಮೆಯ ಜಿಲ್ಲೆಗಳಲ್ಲಿ ಬೆಂಗಳೂರಿಗೆ ದಿನನಿತ್ಯದ ವ್ಯಾಪಾರ ಮತ್ತು ಉದ್ಯೋಗಕ್ಕಾಗಿ ಬರಲು ಮಹಿಳೆಯರಿಗೆ 'ಶಕ್ತಿ' ಯೋಜನೆ ದೊಡ್ಡ ಆಸರೆಯಾಗಿದೆ. ತುಮಕೂರಿನಲ್ಲಿ 'ಶಕ್ತಿ' ಯೋಜನೆಗೆ ರೂ.682.27 ಕೋಟಿ, 'ಗೃಹಲಕ್ಷ್ಮಿ'ಗಾಗಿ ರೂ.3,537.64 ಕೋಟಿ ವ್ಯಯಿಸಲಾಗಿದ್ದು, ಕೋಲಾರದಲ್ಲಿ 'ಗೃಹಲಕ್ಷ್ಮಿ' ಯೋಜನೆಯ ವೆಚ್ಚ ರೂ.1,765.48 ಕೋಟಿ ದಾಟಿದೆ.

ಕೃಷಿ, ಕರಕುಶಲತೆಯ ನೆಲೆ

ಹಳೇ ಮೈಸೂರು ಭಾಗದಲ್ಲಿ ಮಹಿಳೆಯರು ಪ್ರವಾಸೋದ್ಯಮ, ಕೃಷಿ ಮತ್ತು ಡೈರಿ ಉದ್ಯಮದಲ್ಲಿ (ಹೈನುಗಾರಿಕೆ) ಹೆಚ್ಚು ಸಕ್ರಿಯರಾಗಿದ್ದಾರೆ. ಇಲ್ಲಿ 'ಶಕ್ತಿ' ಯೋಜನೆಯಡಿ 46.43 ಲಕ್ಷ ಮಹಿಳೆಯರು ನೋಂದಾಯಿಸಿಕೊಂಡಿದ್ದು, ರೂ.1,200.74 ಕೋಟಿ ವೆಚ್ಚವಾಗಿದೆ. 'ಗೃಹಲಕ್ಷ್ಮಿ' ಯೋಜನೆಗೆ ಮೈಸೂರಿನಲ್ಲಿ ರೂ.3,844.07 ಕೋಟಿ ಒದಗಿಸಲಾಗಿದೆ.

ಕೃಷಿ ಪ್ರಧಾನ ಜಿಲ್ಲೆಯಾದ ಮಂಡ್ಯದಲ್ಲಿ 'ಗೃಹಲಕ್ಷ್ಮಿ'ಯ ರೂ.2,554.38 ಕೋಟಿ ಗ್ರಾಮೀಣ ಮಹಿಳೆಯರ ಸಣ್ಣ ಉಳಿತಾಯಕ್ಕೆ ನೆರವಾಗಿದೆ. ಹಾಸನದಲ್ಲಿ 'ಶಕ್ತಿ' ಯೋಜನೆಗೆ ರೂ.761.33 ಕೋಟಿ ವೆಚ್ಚವಾಗಿದ್ದು, ಮಹಿಳೆಯರ ಮುಕ್ತ ಚಲನೆಗೆ ಇದು ಸಾಕ್ಷಿಯಾಗಿದೆ.

ಉತ್ತರ ಕರ್ನಾಟಕದ ಆರ್ಥಿಕ ಶಕ್ತಿ

ಆರ್ಥಿಕ ಸವಾಲುಗಳನ್ನು ಎದುರಿಸುತ್ತಿರುವ ಉತ್ತರ ಕರ್ನಾಟಕದ ಮಹಿಳಾ ವಲಯದಲ್ಲಿ ಈ ಯೋಜನೆಗಳು ಸಂಚಲನ ಮೂಡಿಸಿವೆ. 'ಗೃಹಲಕ್ಷ್ಮಿ' ಯೋಜನೆಯ ಅನುಷ್ಠಾನ ಮತ್ತು ವೆಚ್ಚದಲ್ಲಿ ಬೆಳಗಾವಿ ಜಿಲ್ಲೆಯು ಇಡೀ ರಾಜ್ಯದಲ್ಲೇ ಪ್ರಥಮ ಸ್ಥಾನದಲ್ಲಿದೆ. ಇಲ್ಲಿನ ಮನೆ ಒಡತಿಯರ ಖಾತೆಗೆ ಬರೋಬ್ಬರಿ ರೂ.6,393.53 ಕೋಟಿ ಜಮೆಯಾಗಿದೆ. ಕಲ್ಯಾಣ ಕರ್ನಾಟಕದ ಹೆಬ್ಬಾಗಿಲಾದ ಕಲಬುರಗಿಯಲ್ಲಿ 'ಗೃಹಲಕ್ಷ್ಮಿ'ಯ ಒಟ್ಟು ವೆಚ್ಚ ರೂ.3,142.83 ಕೋಟಿ ಆಗಿದ್ದು, ಬಡತನ ನಿರ್ಮೂಲನೆಗೆ ಮಹತ್ವದ ಪಾತ್ರ ವಹಿಸಿದೆ. ವಿಜಯಪುರದಲ್ಲಿ 'ಗೃಹಲಕ್ಷ್ಮಿ' ಯೋಜನೆಗೆ ರೂ.2,805.13 ಕೋಟಿ ವೆಚ್ಚ ಮಾಡಲಾಗಿದೆ.

ಶಿಕ್ಷಣ ಮತ್ತು ಪ್ರಗತಿಯ ತೀರ

ದಕ್ಷಿಣ ಕನ್ನಡ, ಉಡುಪಿ ಮತ್ತು ಉತ್ತರ ಕನ್ನಡ ಜಿಲ್ಲೆಗಳಲ್ಲಿ ಸಾಕ್ಷರತಾ ಪ್ರಮಾಣ ಹೆಚ್ಚಿರುವುದರಿಂದ ಈ ಯೋಜನೆಗಳ ಮೂಲಕ ಪಾವತಿಯಾಗುವ ಹಣವು ಶಿಕ್ಷಣಕ್ಕಾಗಿ ಹೆಚ್ಚು ಬಳಕೆಯಾಗುತ್ತಿರುವುದು ಕಂಡುಬಂದಿದೆ. ದಕ್ಷಿಣ ಕನ್ನಡದಲ್ಲಿ 'ಗೃಹಲಕ್ಷ್ಮಿ' ಯೋಜನೆಗೆ ರೂ.2,011.73 ಕೋಟಿ ವೆಚ್ಚವಾಗಿದ್ದರೆ, ಉಡುಪಿಯಲ್ಲಿ ರೂ.1,265.71 ಕೋಟಿ ವ್ಯಯಿಸಲಾಗಿದೆ. ಕರಾವಳಿ ಭಾಗದಲ್ಲಿ ಖಾಸಗಿ ಸಾರಿಗೆಯ ಲಭ್ಯತೆಯ ನಡುವೆಯೂ ಸರ್ಕಾರಿ ಬಸ್‌ಗಳಲ್ಲಿ 'ಶಕ್ತಿ' ಯೋಜನೆಯ ಬಳಕೆ ಗಮನಾರ್ಹವಾಗಿದ್ದು, ದಕ್ಷಿಣ ಕನ್ನಡದಲ್ಲಿ ರೂ.490.98 ಕೋಟಿ ವೆಚ್ಚ ದಾಖಲಾಗಿದೆ.

(ಮೇ ತಿಂಗಳಾಂತ್ಯದವರೆಗೆ ಜಿಲ್ಲಾವಾರು ಗ್ಯಾರಂಟಿ ಯೋಜನೆಗಳ ಅನುಷ್ಠಾನದ ಮಾಹಿತಿಯ ಅನ್ವಯ)

ಸಾಮಾಜಿಕ-ಆರ್ಥಿಕ ಪ್ರಭಾವ

ಮಹಿಳೆಯರ ಬದುಕಿಗೆ ಹೊಸ ಆಯಾಮ ನೀಡಿರುವ ಗ್ಯಾರಂಟಿ ಯೋಜನೆಗಳ ಅಂಕಿ-ಅಂಶಗಳು ಕೇವಲ

Downloaded From:www.kpscvaani.com

ಸರ್ಕಾರದ ವೆಚ್ಚದ ವಿವರಗಳಲ್ಲ. ಇವುಗಳ ಹಿಂದೆ ಸಮಾಜದಲ್ಲಿ ಸೃಷ್ಟಿಯಾಗಿರುವ ದೊಡ್ಡ ಬದಲಾವಣೆ ಇದೆ. ಪ್ರಮುಖವಾಗಿ ಮೂರು ವಲಯಗಳಲ್ಲಿ ಇದರ ಪರಿಣಾಮ ಎದ್ದು ಕಾಣುತ್ತಿದೆ. ಪ್ರತಿ ಮನೆಯ ಆರ್ಥಿಕ ಸಬಲೀಕರಣ ಮತ್ತು ಪೌಷ್ಟಿಕಾಂಶ ಭದ್ರತೆಯ ಹಿನ್ನೆಲೆಯಲ್ಲಿ ಈ ಯೋಜನೆಗಳ ಪರಿಣಾಮವನ್ನು ವಿಶ್ಲೇಷಿಸಬಹುದಾಗಿದೆ.

'ಗೃಹಲಕ್ಷ್ಮಿ' ಯೋಜನೆಯಡಿ ಸಿಗುವ ರೂ.2,000 ಬಡ ಕುಟುಂಬಗಳ ಮಾಸಿಕ ಆದಾಯಕ್ಕೆ ದೊಡ್ಡ ಪೂರಕ ಶಕ್ತಿಯಾಗಿದೆ. ಗ್ರಾಮೀಣ ಭಾಗದ ಮಹಿಳೆಯರು ಈ ಹಣವನ್ನು ಮನೆಗೆ ಬೇಕಾದ ಬೇಳೆಕಾಳು, ತರಕಾರಿ ಮತ್ತು ಹಾಲಿನ ಖರೀದಿಗೆ ಬಳಸುತ್ತಿದ್ದಾರೆ. ಇದು ಕುಟುಂಬದ, ವಿಶೇಷವಾಗಿ ಮಕ್ಕಳ ಮತ್ತು ಗರ್ಭಿಣಿಯರ ಪೌಷ್ಟಿಕಾಂಶದ ಮಟ್ಟವನ್ನು ಹೆಚ್ಚಿಸಲು ನೆರವಾಗಿದೆ. ಕೆಲವು ಕಡೆ ಮಹಿಳೆಯರು ಈ ಹಣವನ್ನು ಸಣ್ಣ ಪ್ರಮಾಣದ ಚೀಟಿ ಉಳಿತಾಯ ಅಥವಾ ಸ್ವಸಹಾಯ ಸಂಘಗಳ (ಸ್ತ್ರೀಶಕ್ತಿ ಸಂಘ) ಉಳಿತಾಯಕ್ಕೆ ತೊಡಗಿಸುತ್ತಿದ್ದಾರೆ. ಆ ಮೂಲಕ ಆರ್ಥಿಕ ಸ್ವಾವಲಂಬನೆಗೆ ದಾರಿ ಮಾಡಿಕೊಡುತ್ತಿದ್ದಾರೆ. ಮತ್ತೊಂದೆಡೆ, ಶಿಕ್ಷಣ ಮತ್ತು ಉದ್ಯೋಗದಲ್ಲಿ ಚಲನಶೀಲತೆಯ ಕ್ರಾಂತಿಯ ಸ್ವರೂಪದಲ್ಲಿ 'ಶಕ್ತಿ' ಯೋಜನೆಯನ್ನು ಗುರುತಿಸಬಹುದಾಗಿದೆ. ಈ ಯೋಜನೆಯು ಹೆಣ್ಣುಮಕ್ಕಳ ಶಿಕ್ಷಣಕ್ಕೆ ಇದ್ದ ದೊಡ್ಡ ತಡೆಯೊಂದನ್ನು ನಿವಾರಿಸಿದೆ.

ಹಳ್ಳಿಗಳಿಂದ ನಗರದ ಕಾಲೇಜುಗಳಿಗೆ ಹೋಗುವ ವಿದ್ಯಾರ್ಥಿನಿಯರ ಸಾರಿಗೆ ವೆಚ್ಚ ಶೂನ್ಯವಾಗಿರುವುದರಿಂದ, ಹೆತ್ತವರು ಹೆಣ್ಣುಮಕ್ಕಳನ್ನು ಉನ್ನತ ಶಿಕ್ಷಣಕ್ಕೆ ಕಳುಹಿಸಲು ಹಿಂಜರಿಯುತ್ತಿಲ್ಲ. ಇದರೊಂದಿಗೆ, ಸಣ್ಣಪುಟ್ಟ ಹೈನುಗಾರಿಕೆ, ಹೊಲಿಗೆ ಕೆಲಸ ಅಥವಾ ಮಾರುಕಟ್ಟೆಯಲ್ಲಿ ವ್ಯಾಪಾರ ಮಾಡುವ 18 ವರ್ಷ ಮೇಲ್ಪಟ್ಟ ಮಹಿಳೆಯರು ಯಾವುದೇ ಆರ್ಥಿಕ ಹೊರೆಯಿಲ್ಲದೆ ದಿನನಿತ್ಯ ಪ್ರಯಾಣ ಬೆಳೆಸುತ್ತಿದ್ದಾರೆ. ಇದು ಅವರ ನಿವ್ವಳ ಆದಾಯವನ್ನು ಹೆಚ್ಚಿಸಿದೆ. ಆ ಮೂಲಕ ಕುಟುಂಬಗಳ ಶಿಕ್ಷಣ ಮತ್ತು ಔದ್ಯೋಗಿಕ ಬದುಕಿಗೆ ಈ ಯೋಜನೆಗಳು ಆಧಾರವಾಗಿ ನಿಂತಿವೆ.

ವಿಶೇಷವಾಗಿ, ಈ ಯೋಜನೆಗಳ ಪರಿಣಾಮ ಮಹಿಳೆಯರ ನಿರ್ಧಾರ ಕೈಗೊಳ್ಳುವ ಸ್ವಾಯತ್ತತೆಯಲ್ಲೂ ಗೋಚರಿಸುತ್ತಿದೆ. ಸಾಂಪ್ರದಾಯಿಕವಾಗಿ ಭಾರತೀಯ ಕುಟುಂಬಗಳಲ್ಲಿ ಹಣಕಾಸಿನ ನಿರ್ಧಾರಗಳನ್ನು ಪುರುಷರೇ ತೆಗೆದುಕೊಳ್ಳುತ್ತಾರೆ. ಆದರೆ, 'ಗೃಹಲಕ್ಷ್ಮಿ' ಹಣ ನೇರವಾಗಿ ಮಹಿಳೆಯರ ಬ್ಯಾಂಕ್ ಖಾತೆಗೆ ಜಮೆಯಾಗುತ್ತಿರುವುದರಿಂದ ಬ್ಯಾಂಕಿಂಗ್ ವ್ಯವಹಾರಗಳ ಬಗ್ಗೆ ಅವರ ಅರಿವು ಹೆಚ್ಚಾಗಿದೆ. ಮನೆಯ ಸಣ್ಣಪುಟ್ಟ ನಿರ್ಧಾರಗಳನ್ನು ತೆಗೆದುಕೊಳ್ಳುವಲ್ಲಿ



Downloaded From:www.kpscvaani.com

ಅವರ ಸ್ವಾತಂತ್ರ್ಯ ಮತ್ತು ಗೌರವವೂ ವಿಸ್ತರಿಸಿದೆ ಎನ್ನುವುದು ಸರ್ಕಾರ ಮತ್ತು ಆರ್ಥಿಕ ತಜ್ಞರ ಅಭಿಪ್ರಾಯವಾಗಿದೆ.

ಮಹಿಳಾ ಕ್ಷೇತ್ರಕ್ಕೆ ಮೀಸಲಿಟ್ಟ ಕೊಡುಗೆಗಳು

ಮಹಿಳೆಯರ ಸಬಲೀಕರಣವನ್ನು ಗ್ಯಾರಂಟಿ ಯೋಜನೆಗಳಿಗೆ ಮಾತ್ರ ಸೀಮಿತಗೊಳಿಸದೆ, ಶಿಕ್ಷಣ, ಆರೋಗ್ಯ, ವಸತಿ, ಕೌಶಲ್ಯಾಭಿವೃದ್ಧಿ ಮತ್ತು ಉದ್ಯೋಗ ಸೇರಿದಂತೆ ವಿವಿಧ ಕ್ಷೇತ್ರಗಳಲ್ಲೂ ಹಲವು ಕ್ರಮಗಳನ್ನು ಕೈಗೊಳ್ಳಲಾಗಿದೆ.

ಗರ್ಭಿಣಿ ಮತ್ತು ಬಾಣಂತಿಯರಿಗೆ ಬಿಸಿಯೂಟ: ಮಾತೃಪೂರ್ಣ ಯೋಜನೆಯಡಿ ಗರ್ಭಿಣಿ ಮತ್ತು ಬಾಣಂತಿಯರಿಗೆ ಅಂಗನವಾಡಿ ಕೇಂದ್ರಗಳಲ್ಲಿಯೇ ಮಧ್ಯಾಹ್ನದ ಬಿಸಿಯೂಟ ಒದಗಿಸುವುದು.

ಬಾಲಕಿಯರ ಹೊಸ ವಿದ್ಯಾರ್ಥಿನಿಲಯಗಳು: ಪ್ರತಿ ಜಿಲ್ಲೆಗೆ 150 ಸಂಖ್ಯಾಬಲದ ಒಂದು ಹೊಸ ಮೆಟ್ರಿಕ್ ನಂತರದ ಬಾಲಕಿಯರ ವಿದ್ಯಾರ್ಥಿನಿಲಯ ಪ್ರಾರಂಭ.

ಪರಿಶಿಷ್ಟ ಜಾತಿ/ಪರಿಶಿಷ್ಟ ವರ್ಗಗಳ ಉದ್ಯೋಗಸ್ಥ ಮಹಿಳೆಯರ ವಸತಿನಿಲಯ: ಪರಿಶಿಷ್ಟ ಜಾತಿ ಮತ್ತು ಪರಿಶಿಷ್ಟ ಪಂಗಡದ ಉದ್ಯೋಗಸ್ಥ ಮಹಿಳೆಯರಿಗಾಗಿ ಬೆಂಗಳೂರು, ಮೈಸೂರು, ಹುಬ್ಬಳ್ಳಿ–ಧಾರವಾಡ, ಮಂಗಳೂರು, ಬೆಳಗಾವಿ ಮತ್ತು ಕಲಬುರಗಿಯಲ್ಲಿ ಒಟ್ಟು 10 ಉದ್ಯೋಗಸ್ಥ ಮಹಿಳೆಯರ ವಸತಿನಿಲಯಗಳ ಸ್ಥಾಪನೆ.

ಆಶ್ರಮ ಶಾಲೆಗಳಿಗೆ ಮಹಿಳಾ ಕೇರ್‌ಟೇಕರ್‌ಗಳು: ಆಶ್ರಮ ಶಾಲೆಗಳಿಗೆ 119 ಮಹಿಳಾ ಕೇರ್‌ಟೇಕರ್ ಹುದ್ದೆಗಳ ಮಂಜೂರಾತಿ.

ಬೆಂಗಳೂರಿನಲ್ಲಿ ಉದ್ಯೋಗಸ್ಥ ಮಹಿಳೆಯರ ವಸತಿನಿಲಯ: ಬೆಂಗಳೂರಿನಲ್ಲಿ 100 ಸಂಖ್ಯಾಬಲದ ನಾಲ್ಕು ಹೊಸ ಉದ್ಯೋಗಸ್ಥ ಮಹಿಳೆಯರ ವಸತಿನಿಲಯಗಳ ಪ್ರಾರಂಭ.

ಮಹಿಳಾ ಪಿಯು ಕಾಲೇಜುಗಳ ಉನ್ನತೀಕರಣ: ರಾಜ್ಯದ 31 ಮಹಿಳಾ ಪಿಯು ಕಾಲೇಜುಗಳನ್ನು ಪದವಿ ಕಾಲೇಜುಗಳನ್ನಾಗಿ ಉನ್ನತೀಕರಿಸುವುದು.

ಹೊಸ ಮಹಿಳಾ ಪಿಯು ಕಾಲೇಜು: ಸವಣೂರಿನಲ್ಲಿ ಒಂದು ಹೊಸ ಮಹಿಳಾ ಪಿಯು ಕಾಲೇಜು ಪ್ರಾರಂಭ.

ಗರ್ಭಕಂಠ (ಸರ್ವಿಕಲ್) ಕ್ಯಾನ್ಸರ್ ಲಸಿಕಾ ಕಾರ್ಯಕ್ರಮ: ಮಹಿಳೆಯರ ಆರೋಗ್ಯ ರಕ್ಷಣೆಗಾಗಿ ಸರ್ವಿಕಲ್ ಕ್ಯಾನ್ಸರ್ ಲಸಿಕಾ ಕಾರ್ಯಕ್ರಮ ಜಾರಿ.

ಐಟಿಐ ಮಹಿಳಾ ತರಬೇತಿದಾರರಿಗೆ ಶುಲ್ಕ ವಿನಾಯಿತಿ: ಐಟಿಐ ಮಹಿಳಾ ತರಬೇತಿದಾರರಿಗೆ ರೂ.1,200 ವಾರ್ಷಿಕ ಬೋಧನಾ ಶುಲ್ಕ ವಿನಾಯಿತಿ.

ರೈತ ಮಹಿಳೆಯರಿಗೆ ಕೌಶಲ್ಯಾಭಿವೃದ್ಧಿ ತರಬೇತಿ: ಅಂತರರಾಷ್ಟ್ರೀಯ ರೈತ ಮಹಿಳಾ ವರ್ಷ 2026ರ ಅಂಗವಾಗಿ 5,000 ರೈತ ಮಹಿಳೆಯರಿಗೆ ಆಧುನಿಕ ಕೃಷಿ ಕೌಶಲ್ಯಾಭಿವೃದ್ಧಿ ತರಬೇತಿ.

ನೀಟ್/ಜೆಇಇ/ಕೆ–ಸಿಇಟಿ: ಸರ್ಕಾರಿ ಶಾಲೆಗಳ ವಿದ್ಯಾರ್ಥಿ–ವಿದ್ಯಾರ್ಥಿನಿಯರಿಗೆ ನೀಟ್, ಜೆಇಇ ಮತ್ತು ಕೆ–ಸಿಇಟಿ ಪರೀಕ್ಷೆಗಳಿಗೆ ವಿಶೇಷ ತರಬೇತಿ.

ಅಲ್ಪಸಂಖ್ಯಾತ ವಿದ್ಯಾರ್ಥಿನಿಯರಿಗೆ ಲ್ಯಾಪ್‌ಟಾಪ್ ನೆರವು: ಅಲ್ಪಸಂಖ್ಯಾತ ಸಮುದಾಯದ 5,000 ಪ್ರತಿಭಾವಂತ ವಿದ್ಯಾರ್ಥಿ–ವಿದ್ಯಾರ್ಥಿನಿಯರಿಗೆ ಲ್ಯಾಪ್‌ಟಾಪ್ ಖರೀದಿಗೆ ತಲಾ ರೂ.50,000 ಸಹಾಯಧನ.

ಯುವನಿಧಿ ಯೋಜನೆ: ಯುವತಿಯರು ಸೇರಿದಂತೆ ಅರ್ಹ ನಿರುದ್ಯೋಗಿ ಪದವೀಧರ ಫಲಾನುಭವಿಗಳಿಗೆ ನಿರುದ್ಯೋಗ ಭತ್ಯೆ ಪಾವತಿ.

ವಸತಿ ಯೋಜನೆಯಡಿ ಸಹಾಯಧನ ಪರಿಷ್ಕರಣೆ: ಮನೆ ನಿರ್ಮಾಣಕ್ಕಾಗಿ ಸಾಮಾನ್ಯ ವರ್ಗದ ಫಲಾನುಭವಿಗಳಿಗೆ ರೂ.2 ಲಕ್ಷ ಹಾಗೂ ಪರಿಶಿಷ್ಟ ಜಾತಿ/ಪಂಗಡದ ಫಲಾನುಭವಿಗಳಿಗೆ ರೂ.3 ಲಕ್ಷ ಸಹಾಯಧನ.

ನಮ್ಮ ಮನೆ ಯೋಜನೆಯಡಿ ನಿವೇಶನ: ಕುಟುಂಬಗಳ ಸಬಲೀಕರಣಕ್ಕಾಗಿ ರಿಯಾಯಿತಿ ದರದಲ್ಲಿ 50,000 ನಿವೇಶನಗಳ ವಿತರಣೆ.

ವಿದ್ಯಾರ್ಥಿನಿಲಯಗಳ ವೆಚ್ಚ ಹೆಚ್ಚಳ: ಎಸ್ಸಿ, ಎಸ್ಟಿ, ಹಿಂದುಳಿದ ವರ್ಗ ಹಾಗೂ ಅಲ್ಪಸಂಖ್ಯಾತರ ಮೆಟ್ರಿಕ್ ಪೂರ್ವ ಮತ್ತು ನಂತರದ ವಿದ್ಯಾರ್ಥಿನಿಲಯಗಳ ನಿರ್ವಹಣಾ ವೆಚ್ಚಕ್ಕಾಗಿ ಹೆಚ್ಚುವರಿ ರೂ.56 ಕೋಟಿ ಹಂಚಿಕೆ.

ಪದವಿಪೂರ್ವ ಶಿಕ್ಷಣಕ್ಕಾಗಿ 31 ವಸತಿ ಶಾಲೆಗಳ ಉನ್ನತೀಕರಣ: ಪರಿಶಿಷ್ಟ ಜಾತಿ, ಪರಿಶಿಷ್ಟ ವರ್ಗ ಮತ್ತು ಹಿಂದುಳಿದ ವರ್ಗಗಳ ವಿದ್ಯಾರ್ಥಿ–ವಿದ್ಯಾರ್ಥಿನಿಯರ ಉನ್ನತ ಶಿಕ್ಷಣಕ್ಕೆ ಅನುಕೂಲವಾಗುವಂತೆ ಶಾಲೆಗಳ ಉನ್ನತೀಕರಣ.



Downloaded From:www.kpscvaani.com



40 ಹೊಸ ವಸತಿ ಶಾಲೆಗಳ ಸ್ಥಾಪನೆ: ಪರಿಶಿಷ್ಟ ಜಾತಿ, ಪರಿಶಿಷ್ಟ ವರ್ಗ ಮತ್ತು ಹಿಂದುಳಿದ ವರ್ಗಗಳ ಗ್ರಾಮೀಣ ವಿದ್ಯಾರ್ಥಿನಿಯರು ಮತ್ತು ವಿದ್ಯಾರ್ಥಿಗಳಿಗಾಗಿ 40 ಹೊಸ ವಸತಿ ಶಾಲೆಗಳ ಪ್ರಾರಂಭ.

ವಿದ್ಯಾರ್ಥಿನಿಲಯಗಳಲ್ಲಿ 'ಮೆಸ್ ಸಮಿತಿ' ರಚನೆ: ಆಹಾರದ ಗುಣಮಟ್ಟ ಉತ್ತಮಪಡಿಸಲು ಮೆಟ್ರಿಕ್ ನಂತರದ ವಿದ್ಯಾರ್ಥಿನಿಲಯಗಳಲ್ಲಿ ಪ್ರಾಯೋಗಿಕವಾಗಿ ಮೆಸ್ ಸಮಿತಿಗಳ ರಚನೆ.

ಅಲೆಮಾರಿ ಜನಾಂಗದ ಮಕ್ಕಳಿಗೆ ವಸತಿ ಶಾಲೆ: ಅಲೆಮಾರಿ ಜನಾಂಗದ ವಿದ್ಯಾರ್ಥಿ–ವಿದ್ಯಾರ್ಥಿನಿಯರಿಗಾಗಿ ಪ್ರತಿ ಕಂದಾಯ ವಿಭಾಗಕ್ಕೆ ಒಂದರಂತೆ ನಾಲ್ಕು ವಿಶೇಷ ವಸತಿ ಶಾಲೆಗಳ ಪ್ರಾರಂಭ.

ಸಿಬಿಎಸ್‌ಇ ಪಠ್ಯಕ್ರಮದ ಹೊಸ ವಸತಿ ಶಾಲೆಗಳು: ಕಲಬುರಗಿ, ವಿಜಯಪುರ, ಬೆಳಗಾವಿ ಹಾಗೂ ಕೋಲಾರ ಜಿಲ್ಲೆಗಳಲ್ಲಿ ಡಾ. ಬಿ.ಆರ್. ಅಂಬೇಡ್ಕರ್ ಹೆಸರಿನಲ್ಲಿ ನಾಲ್ಕು ಕ್ರೈಸ್ ವಸತಿ ಶಾಲೆಗಳ ಪ್ರಾರಂಭ.

ಹೊಸ ಮೆಟ್ರಿಕ್ ನಂತರದ 50 ವಿದ್ಯಾರ್ಥಿನಿಲಯಗಳು: ಪರಿಶಿಷ್ಟ ಪಂಗಡದ ವಿದ್ಯಾರ್ಥಿ–ವಿದ್ಯಾರ್ಥಿನಿಯರಿಗಾಗಿ 150 ಸಂಖ್ಯಾಬಲದ 50 ಹೊಸ ಮೆಟ್ರಿಕ್ ನಂತರದ ವಿದ್ಯಾರ್ಥಿನಿಲಯಗಳ ಪ್ರಾರಂಭ.

ಹಿಂದುಳಿದ ವರ್ಗಗಳಿಗಾಗಿ 50 ಹೊಸ ಮೆಟ್ರಿಕ್ ನಂತರದ ವಿದ್ಯಾರ್ಥಿನಿಲಯಗಳು: ಬೆಂಗಳೂರು, ಮೈಸೂರು ಸೇರಿದಂತೆ ವಿವಿಧ ಜಿಲ್ಲೆಗಳಲ್ಲಿ 150 ಸಂಖ್ಯಾಬಲದ 50 ಹೊಸ ವಸತಿ ನಿಲಯಗಳ ಸ್ಥಾಪನೆ.

ಐಟಿಐ ವಿದ್ಯಾರ್ಥಿಗಳಿಗೆ ಪದವಿಪೂರ್ವ ಪ್ರಮಾಣಪತ್ರ: ಎರಡು ಹೆಚ್ಚುವರಿ ವಿಷಯಗಳ ಬೋಧನೆಯ ಮೂಲಕ ಐಟಿಐ ಓದುತ್ತಿರುವ ಹೆಣ್ಣುಮಕ್ಕಳು ಹಾಗೂ ಗಂಡುಮಕ್ಕಳಿಗೆ ಪಿಯುಸಿಗೆ ಸಮಾನವಾದ ಕೌಶಲ್ಯ ಪ್ರಮಾಣಪತ್ರ ವಿತರಣೆ.

ವಿಕೇಂದ್ರೀಕೃತ ಕೌಶಲ್ಯಾಭಿವೃದ್ಧಿ ಪೋರ್ಟಲ್: ಯುವತಿಯರಿಗೆ ಉದ್ಯೋಗಾವಕಾಶ ಮತ್ತು ತರಬೇತಿ ಮಾಹಿತಿ ನೀಡಲು ರೂ.2 ಕೋಟಿ ವೆಚ್ಚದಲ್ಲಿ ಹೊಸ ಪೋರ್ಟಲ್ ಅಭಿವೃದ್ಧಿ.

ವಿದ್ಯಾರ್ಥಿವೇತನ: ಸರ್ಕಾರಿ ಶಾಲಾ–ಕಾಲೇಜುಗಳಲ್ಲಿ ಅಧ್ಯಯನ ಮಾಡಿ ಉನ್ನತ ಶಿಕ್ಷಣ ಮುಂದುವರಿಸುತ್ತಿರುವ ವಿದ್ಯಾರ್ಥಿನಿಯರಿಗೆ ತಲಾ ರೂ.30,000 ವಿದ್ಯಾರ್ಥಿವೇತನ.

ಮಾತೃತ್ವ ರಜೆ: ಪ್ರಥಮ ದರ್ಜೆ ಕಾಲೇಜು, ಪಾಲಿಟೆಕ್ನಿಕ್ ಹಾಗೂ ಎಂಜಿನಿಯರಿಂಗ್ ಕಾಲೇಜುಗಳಲ್ಲಿನ ಮಹಿಳಾ ಅತಿಥಿ ಉಪನ್ಯಾಸಕರಿಗೆ 90 ದಿನಗಳ ಮಾತೃತ್ವ ರಜೆ ಸೌಲಭ್ಯ.

ಕಾಲೇಜುಗಳ ಸೌಲಭ್ಯ ವಿಸ್ತರಣೆ: ರೂ.31 ಕೋಟಿ ವೆಚ್ಚದಲ್ಲಿ ವಿದ್ಯಾರ್ಥಿನಿಯರ ಸಂಖ್ಯೆ ಹೆಚ್ಚಿರುವ ಕಾಲೇಜುಗಳಿಗೆ ಅಗತ್ಯ ಮೂಲಸೌಲಭ್ಯಗಳ ಒದಗಿಸುವಿಕೆ.

ರೋಹಿತ್ ವೇಮುಲ ಕಾಯ್ದೆ: ಜಾತಿ ಆಧಾರದ ಮೇಲೆ ವಿದ್ಯಾರ್ಥಿನಿಯರು/ವಿದ್ಯಾರ್ಥಿಗಳ ಮೇಲಾಗುವ ಶೈಕ್ಷಣಿಕ ಮತ್ತು ಸಾಮಾಜಿಕ ದೌರ್ಜನ್ಯ ತಡೆಗೆ 'ರೋಹಿತ್ ವೇಮುಲ ಕಾಯ್ದೆ' ಜಾರಿ.

ಉಚಿತ ಇನ್ಸುಲಿನ್ ಪೆನ್: 18 ವರ್ಷದವರೆಗಿನ ಟೈಪ್–1 ಮಧುಮೇಹ ಹೊಂದಿರುವ ಹೆಣ್ಣುಮಕ್ಕಳು/ಮಕ್ಕಳ ಆರೋಗ್ಯ ಸುಧಾರಣೆಗೆ ಉಚಿತ ಇನ್ಸುಲಿನ್ ಪೆನ್‌ಗಳ ವಿತರಣೆ.

ಐವಿಎಫ್ ಕೇಂದ್ರಗಳ ಸ್ಥಾಪನೆ: ಬೆಂಗಳೂರಿನ ವಾಣಿವಿಲಾಸ ಆಸ್ಪತ್ರೆ ಮತ್ತು ಕಲಬುರಗಿಯ ಗುಲ್ಬರ್ಗಾ ವೈದ್ಯಕೀಯ ವಿಜ್ಞಾನ ಸಂಸ್ಥೆಯಲ್ಲಿ ತಲಾ ರೂ.1 ಕೋಟಿ ವೆಚ್ಚದಲ್ಲಿ ಐವಿಎಫ್ (ಸಂತಾನಹೀನತೆ ಚಿಕಿತ್ಸಾ) ಕೇಂದ್ರಗಳ ಸ್ಥಾಪನೆ.

ಅಂಗನವಾಡಿ ಕಾರ್ಯಕರ್ತೆಯರಿಗೆ ಸೌಲಭ್ಯ: ರಾಜ್ಯದ ಅಂಗನವಾಡಿ ಕಾರ್ಯಕರ್ತೆಯರು ಮತ್ತು ಸಹಾಯಕಿಯರಿಗೆ ಹೆಚ್ಚುವರಿಯಾಗಿ ಒಂದು ಜೊತೆ ಸಮವಸ್ತ್ರ ವಿತರಣೆ.

ಮಾಜಿ ದೇವದಾಸಿಯರ ಮಕ್ಕಳ ಉನ್ನತಿ: ಮಾಜಿ ದೇವದಾಸಿಯರ ಮಕ್ಕಳಿಗೆ ಉನ್ನತ ಶಿಕ್ಷಣ, ಸ್ವಯಂ ಉದ್ಯೋಗ ಮತ್ತು ವೈಯಕ್ತಿಕ ಆದಾಯೋತ್ಪನ್ನ ಚಟುವಟಿಕೆಗಳಿಗಾಗಿ ರೂ.5 ಕೋಟಿ ಅನುದಾನ.

Downloaded From:www.kpscvaani.com

ಪಂಚ ಗ್ಯಾರಂಟಿಗಳ ನೆರವಿನ ಹಸ್ತ

ರಾಜ್ಯದಲ್ಲಿ ಈವರೆಗೆ ಗ್ಯಾರಂಟಿ ಯೋಜನೆಗಳಿಗೆ ರೂ.1.45 ಲಕ್ಷ ಕೋಟಿಗೂ ಹೆಚ್ಚು ಅನುದಾನ ಒದಗಿಸಲಾಗಿದೆ. ರಾಜ್ಯ ಸರ್ಕಾರದ ಮಹತ್ವಾಕಾಂಕ್ಷೆಯ ಪಂಚಗ್ಯಾರಂಟಿ ಯೋಜನೆಗಳು ಯಾವುದೇ ಅಡೆತಡೆಯಿಲ್ಲದೆ ಜನರಿಗೆ ತಲುಪುತ್ತಿವೆ. ಯೋಜನೆಗಳ ಜಾರಿಯ ಸಮಗ್ರ ಪ್ರಗತಿ ಮತ್ತು ವೆಚ್ಚದ ಅಂಕಿ-ಅಂಶಗಳ ಪ್ರಕಾರ, ಈವರೆಗೆ ಒಟ್ಟು ರೂ.1,45,416 ಕೋಟಿ ಅನುದಾನವನ್ನು ಫಲಾನುಭವಿಗಳಿಗೆ ತಲುಪಿಸಲಾಗಿದೆ.

'ಗೃಹಲಕ್ಷ್ಮಿ' ಯೋಜನೆ (ಜೂನ್ 2026ರವರೆಗೆ)

ಫಲಾನುಭವಿಗಳ ಸಂಖ್ಯೆ (ಡಿಬಿಟಿ ಪ್ರಕಾರ): **ರೂ.1.24 ಕೋಟಿ**

ಒಟ್ಟು ಪಾವತಿಸಿದ ಮೊತ್ತ: **ರೂ.76,951.13 ಕೋಟಿ**

ಮಾರ್ಚ್ 2026ರ 32ನೇ ಕಂತಿನಲ್ಲಿ 1.22 ಕೋಟಿ ಫಲಾನುಭವಿಗಳಿಗೆ ರೂ. 2,454.08 ಕೋಟಿ ವರ್ಗಾಯಿಸಲಾಗಿದೆ.

(ಜೂನ್ ತಿಂಗಳ ಡಿಬಿಟಿ ಪ್ರಕ್ರಿಯೆ ಚಾಲ್ತಿಯಲ್ಲಿದೆ.)

'ಗೃಹಜ್ಯೋತಿ' ಯೋಜನೆ (ಜುಲೈ 2026ರವರೆಗೆ)

ಫಲಾನುಭವಿಗಳ ಸಂಖ್ಯೆ: **1.67 ಕೋಟಿ ಮನೆಗಳು**

ಒಟ್ಟು ಪಾವತಿಸಿದ ಮೊತ್ತ: **ರೂ. 30,522 ಕೋಟಿ**

'ಅನ್ನಭಾಗ್ಯ' ಯೋಜನೆ

ನೇರ ಹಣ ವರ್ಗಾವಣೆ (ಡಿಬಿಟಿ, ಡಿಸೆಂಬರ್ 2024ರವರೆಗೆ): **72.02 ಕೋಟಿ ಫಲಾನುಭವಿಗಳ ಖಾತೆಗಳಿಗೆ ಒಟ್ಟು ರೂ.11,821.17 ಕೋಟಿ.**

ಆಹಾರ ಧಾನ್ಯಗಳ ವಿತರಣೆ (ಫೆಬ್ರವರಿ 2025-ಜುಲೈ 2026): **37.03 ಲಕ್ಷ ಮೆಟ್ರಿಕ್ ಟನ್ ಆಹಾರ ಧಾನ್ಯ ವಿತರಿಸಲಾಗಿದ್ದು, ಅದಕ್ಕಾಗಿ ರೂ.8,510.77 ಕೋಟಿ ವೆಚ್ಚ ಮಾಡಲಾಗಿದೆ.**

ಒಟ್ಟು ಯೋಜನೆ ವೆಚ್ಚ: ರೂ.21,054 ಕೋಟಿ

'ಶಕ್ತಿ' ಯೋಜನೆ (ಆಗಸ್ಟ್ 13ರವರೆಗೆ)

ಉಚಿತ ಪ್ರಯಾಣದ ಸಂಖ್ಯೆ: **821 ಕೋಟಿ ಟ್ರಿಪ್‌ಗಳು**

ಸರ್ಕಾರದಿಂದ ಪಾವತಿಸಿದ ಮೊತ್ತ: **ರೂ.15,735 ಕೋಟಿ**

'ಯುವನಿಧಿ' ಯೋಜನೆ

(ಡಿಸೆಂಬರ್ 2023ರಿಂದ ಜೂನ್ 2026ರವರೆಗೆ)

ಫಲಾನುಭವಿಗಳ ಸಂಖ್ಯೆ: **3.72 ಲಕ್ಷ**

ಬಿಡುಗಡೆಯಾದ ಒಟ್ಟು ಅನುದಾನ: **ರೂ.1,154 ಕೋಟಿ**

ಪ್ರಸ್ತುತ, ಜುಲೈ 2026ರ 1,51,123 ಫಲಾನುಭವಿಗಳಿಗೆ ರೂ. 44.82 ಕೋಟಿ ಹಣ ವರ್ಗಾವಣೆ ಪ್ರಕ್ರಿಯೆಯಲ್ಲಿದೆ.

ಆದಾಯೋತ್ಪನ್ನ ಪ್ರೋತ್ಸಾಹಧನ ಹೆಚ್ಚಳ: ಮಾಜಿ ದೇವದಾಸಿಯರು, ಲಿಂಗತ್ವ ಅಲ್ಪಸಂಖ್ಯಾತರು, ಚೇತನ ಹಾಗೂ ಧನಶ್ರೀ ಯೋಜನೆಗಳ ಫಲಾನುಭವಿಗಳಿಗೆ ಆದಾಯೋತ್ಪನ್ನ ಚಟುವಟಿಕೆಗಳ ಪ್ರೋತ್ಸಾಹಧನವನ್ನು ರೂ.45,000ಕ್ಕೆ ಹೆಚ್ಚಳ.

'ಗೃಹಲಕ್ಷ್ಮಿ'ಗೆ ಮುಖಚಹರೆ ಕಡ್ಡಾಯ

'ಗೃಹಲಕ್ಷ್ಮಿ' ಯೋಜನೆ ಅರ್ಹರನ್ನು ಮಾತ್ರ ತಲುಪಬೇಕೆಂಬ ಉದ್ದೇಶದಿಂದ ಎಲ್ಲ ಫಲಾನುಭವಿಗಳ ಬಯೋಮೆಟ್ರಿಕ್ ಮತ್ತು ಮುಖಚಹರೆ ದೃಢೀಕರಣವನ್ನು ಕಡ್ಡಾಯಗೊಳಿಸಲು ಕರ್ನಾಟಕ ಸರ್ಕಾರ ನಿರ್ಧರಿಸಿದೆ. ಅನರ್ಹರನ್ನು ಕೈಬಿಡುವ ಪ್ರಕ್ರಿಯೆಗೆ ರೂ.20 ಕೋಟಿ ವೆಚ್ಚವಾಗಬಹುದು ಎಂದು ಅಂದಾಜಿಸಲಾಗಿದೆ.

'2023ರ ಆಗಸ್ಟ್ 30ರಂದು 'ಗೃಹಲಕ್ಷ್ಮಿ' ಯೋಜನೆ ರಾಜ್ಯದಲ್ಲಿ ಜಾರಿಯಾಗಿತ್ತು. ಮೂರು ವರ್ಷಗಳಲ್ಲಿ 1.24 ಕೋಟಿ 'ಗೃಹಲಕ್ಷ್ಮಿ'ಯರಿಗೆ 32 ಕಂತುಗಳಲ್ಲಿ ರೂ.76,951.13 ಕೋಟಿ ಜಮೆ ಮಾಡಲಾಗಿದೆ. ಈ ಅವಧಿಯಲ್ಲಿ ಮರಣ ಹೊಂದಿದವರು, ವಲಸೆ ಹೋದವರು ಹಾಗೂ ಫಲಾನುಭವಿ (ಮನೆಯ ಯಜಮಾನಿ) ಅಥವಾ ಅವರ ಪತಿ ಆದಾಯ ತೆರಿಗೆ ಪಾವತಿಸುತ್ತಿರುವ ಪ್ರಕರಣಗಳು ವರದಿಯಾಗಿವೆ. ಹೀಗಾಗಿ, ಅರ್ಹರಿಗೆ ಮಾತ್ರ ಈ ಸೌಲಭ್ಯ ಮುಂದುವರಿಸಲು ಮರುಪರಿಶೀಲನಾ ಅಭಿಯಾನ ಹಮ್ಮಿಕೊಳ್ಳಲಾಗಿದೆ' ಎಂದು ರಾಜ್ಯ ಗ್ಯಾರಂಟಿ ಅನುಷ್ಠಾನ ಪ್ರಾಧಿಕಾರದ ಉಪಾಧ್ಯಕ್ಷ ದಿನೇಶ್ ಗೂಳಿಗೌಡ ತಿಳಿಸಿದ್ದಾರೆ.

ಫಲಾನುಭವಿಗಳ ಬಯೋಮೆಟ್ರಿಕ್ ಮತ್ತು ಮುಖಚಹರೆ ದೃಢೀಕರಣ ಪ್ರಕ್ರಿಯೆಯು ವಿದ್ಯುನ್ಮಾನ ನಾಗರಿಕ ಸೇವಾ ವಿತರಣಾ (ಇಡಿಸಿಎಸ್) ನಿರ್ದೇಶನಾಲಯ ಅಭಿವೃದ್ಧಿಪಡಿಸಿರುವ ಮೊಬೈಲ್ ಚಿಪ್ ಮೂಲಕ ನಡೆಯಲಿದೆ. ಮನೆಮನೆ ಸಮೀಕ್ಷೆ ಹಾಗೂ ಗ್ರಾಮ ಒನ್, ಕರ್ನಾಟಕ ಒನ್, ಬೆಂಗಳೂರು ಒನ್ ಮತ್ತು ಬಾಪೂಜಿ ಸೇವಾ ಕೇಂದ್ರಗಳ ಮೂಲಕ ಈ ಪ್ರಕ್ರಿಯೆ ಅನುಷ್ಠಾನಗೊಳ್ಳಲಿದೆ.

'ಮುಖ್ಯಮಂತ್ರಿಯವರ ನಿರ್ದೇಶನದಂತೆ ನಿರ್ದಿಷ್ಟ ಪ್ರಮಾಣಿತ ಕಾರ್ಯಾಚರಣಾ ಕಾರ್ಯವಿಧಾನದ (ಎಸ್‌ಒಪಿ) ಅನ್ವಯವೇ ಕಟ್ಟುನಿಟ್ಟಾಗಿ ಫಲಾನುಭವಿಗಳ ಮರುಪರಿಶೀಲನೆ ಕೈಗೊಳ್ಳಬೇಕು' ಎಂದೂ ಈ ಕುರಿತು ಸರ್ಕಾರ ಹೊರಡಿಸಿರುವ ಆದೇಶದಲ್ಲಿ ವಿವರಿಸಲಾಗಿದೆ.

ಮರುಪರಿಶೀಲನೆಯ ಹಂತಗಳು

ಮಹಿಳಾ ಮತ್ತು ಮಕ್ಕಳ ಅಭಿವೃದ್ಧಿ ಇಲಾಖೆಯು ಮಾದರಿ ನಮೂನೆಗಳನ್ನು ಸಿದ್ಧಪಡಿಸಿ, ಮಾಸ್ಟರ್ ತರಬೇತುದಾರರ ಮೂಲಕ ಕ್ಷೇತ್ರ ಗಣತಿದಾರರಿಗೆ ತರಬೇತಿ ನೀಡಿ, ಒಂದು ತಿಂಗಳೊಳಗೆ ಕ್ಷೇತ್ರ ಪರಿಶೀಲನೆ ಪೂರ್ಣಗೊಳಿಸಬೇಕು.

Downloaded From:www.kpscvaani.com

ಮೃತಪಟ್ಟವರ ಮಾಹಿತಿ

3,13,297 – ಜೂನ್ 2026ರವರೆಗೆ ಮರಣ ಹೊಂದಿದವರ ಸಂಖ್ಯೆ

1,10,562 – ಮರಣದ ನಂತರವೂ ಹಣ ಜಮೆಯಾದ ಫಲಾನುಭವಿಗಳ ಸಂಖ್ಯೆ

ರೂ. 117.31 ಕೋಟಿ – ಮೃತಪಟ್ಟವರ ಖಾತೆಗಳಿಗೆ ಜಮೆಯಾದ ಮೊತ್ತ

ಮರುಪರಿಶೀಲನಾ ಪ್ರಕ್ರಿಯೆಯಲ್ಲಿ ಸಿಬ್ಬಂದಿಯಿಂದ ಮನೆ–ಮನೆ ಭೇಟಿ ಮತ್ತು ಪರಿಶೀಲನೆ, ಮೊಬೈಲ್ ತಂತ್ರಾಂಶದಲ್ಲಿ ಮಾಹಿತಿ ಸಂಗ್ರಹ ಹಾಗೂ ಸ್ಥಳೀಯ ಗ್ಯಾರಂಟಿ ಸಮಿತಿ ಸದಸ್ಯರ ನೇತೃತ್ವದಲ್ಲಿ ಪರಿಶೀಲನೆ ನಡೆಯಲಿದೆ.

ಜಿಲ್ಲಾ ಮತ್ತು ತಾಲ್ಲೂಕು ಗ್ಯಾರಂಟಿ ಸಮಿತಿಗಳು ಹಾಗೂ ಸ್ಥಳೀಯ ಮಟ್ಟದ ಸಮಿತಿಗಳು ಪರಿಶೀಲನಾ ಪ್ರಕ್ರಿಯೆಯನ್ನು ನಿಗದಿತ ಅವಧಿಯಲ್ಲಿ ಪೂರ್ಣಗೊಳಿಸಬೇಕು. ಗ್ರಾಮೀಣ ಮತ್ತು ನಗರ ಪ್ರದೇಶಗಳಲ್ಲಿ ಗ್ಯಾರಂಟಿ ಸಮಿತಿ ಸದಸ್ಯರನ್ನು ಸಜ್ಜುಗೊಳಿಸಬೇಕು.

ನಗರ ಪ್ರದೇಶಗಳಲ್ಲಿ ಕಂದಾಯ ನಿರೀಕ್ಷಕರು, ಬಿಲ್ ಕಲೆಕ್ಟರ್‌ಗಳು ಮತ್ತು ಅಂಗನವಾಡಿ ಕಾರ್ಯಕರ್ತೆಯರನ್ನು, ಗ್ರಾಮೀಣ ಪ್ರದೇಶಗಳಲ್ಲಿ ಗ್ರಾಮ ಪಂಚಾಯಿತಿ ಕಾರ್ಯದರ್ಶಿಗಳು ಹಾಗೂ ಸಿಬ್ಬಂದಿಯನ್ನು ಗಣತಿದಾರರನ್ನಾಗಿ ನೇಮಿಸಬೇಕು. ಜಿಲ್ಲಾಧಿಕಾರಿಗಳು ಮತ್ತು ಸಿಇಒಗಳು ವಾರ್ಡ್ ಹಾಗೂ ಗ್ರಾಮವಾರು ಸ್ಪಷ್ಟ ನಿಯೋಜನೆಯೊಂದಿಗೆ ಗಣತಿದಾರರಿಗೆ ಲಿಖಿತ ಆದೇಶಗಳನ್ನು ನೀಡಬೇಕು ಎಂದೂ ತಿಳಿಸಲಾಗಿದೆ.

ಗ್ಯಾರಂಟಿ ಸಮಿತಿ ಸದಸ್ಯರು ಮತ್ತು ಸಿಬ್ಬಂದಿ ಕಡ್ಡಾಯವಾಗಿ ಮನೆಗಳಿಗೆ ಭೇಟಿ ನೀಡಿ ಗಣತಿ ನಮೂನೆಗಳನ್ನು ವಿತರಿಸಬೇಕು. ಫಲಾನುಭವಿಗಳು ಅಥವಾ ಅವರ ಕುಟುಂಬದ ಸದಸ್ಯರು ನಮೂನೆಯನ್ನು ಭರ್ತಿ ಮಾಡಿ ಹಿಂತಿರುಗಿಸಬೇಕು. ಯಾವುದೇ ಕಾರಣಕ್ಕೂ ಮನೆ ಭೇಟಿ ತಪ್ಪಿಸಬಾರದು. ಗಣತಿದಾರರು ಮೊಬೈಲ್ ಚಿಪ್ ಬಳಸಿ ಫಲಾನುಭವಿಯ ಭಾವಚಿತ್ರ ಅಥವಾ ಮನೆಯ ಫೋಟೊ ತೆಗೆದು ಜಿಪಿಎಸ್ ಮ್ಯಾಪಿಂಗ್ ಮಾಡಬೇಕು. ಸ್ಥಳದಲ್ಲೇ ಮುಖಿದ ದೃಢೀಕರಣ ಹಾಗೂ ಮತದಾರರ ಗುರುತಿನ ಚೀಟಿ ವಿವರಗಳನ್ನು ಮೊಬೈಲ್ ಆಪ್‌ನಲ್ಲಿ ದಾಖಲಿಸಬೇಕು.

ಫಲಾನುಭವಿಗಳು ವಲಸೆ ಹೋಗಿದ್ದರೆ, ಸ್ಥಳಾಂತರಗೊಂಡಿದ್ದರೆ ಅಥವಾ ಮೃತಪಟ್ಟಿದ್ದರೆ, ಆ ಕುರಿತು ಆಪ್‌ನಲ್ಲಿ ಸ್ಪಷ್ಟವಾಗಿ ನಮೂದಿಸಬೇಕು. ಮನೆ ಭೇಟಿಯ ವೇಳೆ ಮುಖಿದ ದೃಢೀಕರಣ ವಿಫಲವಾದರೆ ಅಥವಾ ಫಲಾನುಭವಿ ಲಭ್ಯವಿಲ್ಲದಿದ್ದರೆ, ಹತ್ತಿರದ ನ್ಯಾಯಬೆಲೆ ಅಂಗಡಿ ಅಥವಾ ಒನ್ ಕೇಂದ್ರಗಳಿಗೆ ಭೇಟಿ ನೀಡಿ ಬಯೋಮೆಟ್ರಿಕ್ ಪೂರ್ಣಗೊಳಿಸಬಹುದು. ಇದೇ ಜುಲೈ 1ರ ನಂತರ ಪಡಿತರ ಪಡೆಯಲು ನ್ಯಾಯಬೆಲೆ ಅಂಗಡಿಯಲ್ಲಿ ಬಯೋಮೆಟ್ರಿಕ್ ನೀಡಿರುವ ಫಲಾನುಭವಿಗಳ ದತ್ತಾಂಶವನ್ನು ಆಹಾರ ಇಲಾಖೆಯಿಂದ ಪಡೆದು ಪರಿಶೀಲನೆಗೆ ಬಳಸಿಕೊಳ್ಳಲಾಗುವುದು ಎಂದೂ ಆದೇಶದಲ್ಲಿ ವಿವರಿಸಲಾಗಿದೆ.

ದಾಖಲೆ ಒದಗಿಸಿ

'ಕರ್ನಾಟಕ ಸರ್ಕಾರ ಜಾರಿಗೆ ತಂದಿರುವ 'ಗೃಹಲಕ್ಷ್ಮಿ' ಯೋಜನೆಯ ಮರುಪರಿಶೀಲನೆಗೆ ಗ್ಯಾರಂಟಿ ಸಮಿತಿಯ ಸದಸ್ಯರು ಮನೆಗೆ ಬಂದು ಕೇಳುವ ದಾಖಲೆಗಳನ್ನು ಫಲಾನುಭವಿಗಳು ಒದಗಿಸಿ, ಯೋಜನೆ ಕೈತಪ್ಪದಂತೆ ನೋಡಿಕೊಳ್ಳಬೇಕು' ಎಂದು ಮುಖ್ಯಮಂತ್ರಿ ಡಿ.ಕೆ. ಶಿವಕುಮಾರ್ ಮನವಿ ಮಾಡಿದ್ದಾರೆ.

'ಗೃಹಲಕ್ಷ್ಮಿ' ಯೋಜನೆಗೆ ಮೂರು ವರ್ಷ ಪೂರ್ಣಗೊಂಡ ಹಿನ್ನೆಲೆಯಲ್ಲಿ ಸಾಮಾಜಿಕ ಜಾಲತಾಣದಲ್ಲಿ ವಿಡಿಯೊ ಸಂದೇಶದ ಮೂಲಕ ಫಲಾನುಭವಿಗಳಿಗೆ ಅವರು ಈ ಮನವಿ ಮಾಡಿದ್ದಾರೆ.

'ಗೃಹಲಕ್ಷ್ಮಿ ಯೋಜನೆ ಮೂಲಕ ನಾಡಿನ ಮಹಿಳೆಯರಿಗೆ ಆರ್ಥಿಕ ಶಕ್ತಿಯಾಗಿ, ಕಷ್ಟದಲ್ಲಿ ಬೆನ್ನೆಲುಬಾಗಿ ನಾವು ನಿಂತಿದ್ದೇವೆ. ಈ ಯೋಜನೆ ಯಶಸ್ವಿಯಾಗಿ ಮೂರು ವರ್ಷ ಪೂರೈಸಿದೆ. ರಾಜ್ಯದ 1.24 ಕೋಟಿ ಗೃಹಿಣಿಯರ ಬ್ಯಾಂಕ್ ಖಾತೆಗೆ ಮೂರು ವರ್ಷಗಳಿಂದ ತಿಂಗಳಿಗೆ ತಲಾ ರೂ. 2,000ದಂತೆ ಈವರೆಗೆ ಪ್ರತಿಯೊಬ್ಬರಿಗೂ ರೂ. 66,000 ಹಣ ಜಮೆ ಮಾಡಲಾಗಿದೆ' ಎಂದಿದ್ದಾರೆ.

'ನಾಡಿನ ಮಹಿಳೆಯರ ಆತ್ಮವಿಶ್ವಾಸ ಮತ್ತು ಸ್ವಾಭಿಮಾನದ ಪ್ರತೀಕವಾಗಿರುವ 'ಗೃಹಲಕ್ಷ್ಮಿ' ಯೋಜನೆಯ ಪರಿಶೀಲನೆಗೆ ಗ್ಯಾರಂಟಿ ಸಮಿತಿ ಸದಸ್ಯರು ಮನೆ ಬಾಗಿಲಿಗೆ ಬರುತ್ತಿದ್ದಾರೆ. ಅವರಿಗೆ ಅಗತ್ಯ ಮಾಹಿತಿ ಒದಗಿಸಲು ಅವಕಾಶವಿದೆ. ಅವರು ಹೊಸ ಅರ್ಜಿ ನೀಡುತ್ತಾರೆ. ಅದನ್ನು ಸೂಕ್ತ ಮಾಹಿತಿಯೊಂದಿಗೆ ಭರ್ತಿ ಮಾಡಿ ಕೊಡಿ. ಜೊತೆಗೆ ಫಲಾನುಭವಿಗಳ ಹೊಸ ಭಾವಚಿತ್ರ, ಮೊಬೈಲ್ ಸಂಖ್ಯೆ ಸೇರಿದಂತೆ ಕೆಲವು ದಾಖಲೆಗಳನ್ನು ಪಡೆಯುತ್ತಾರೆ. ಎಲ್ಲ ದಾಖಲೆಗಳನ್ನು ಒದಗಿಸಿ ಸರ್ಕಾರಕ್ಕೆ ಸಹಕರಿಸಿ, ಆರ್ಥಿಕ ಸ್ವಾತಂತ್ರ್ಯವನ್ನು ಸಂಭ್ರಮಿಸಿ' ಎಂದು ಮುಖ್ಯಮಂತ್ರಿ ಕೋರಿದ್ದಾರೆ.

Downloaded From:www.kpscvaani.com



ಸುಧಾರಣಾ ಮಸೂದೆಗಳ ಅಂಗೀಕಾರಕ್ಕೆ ಸಾಕ್ಷಿಯಾದ

ವಿಧಾನಮಂಡಲ ಅಧಿವೇಶನ

ಭಾಗ್ಯಲಕ್ಷ್ಮಿ ಜೆ.

ಕರ್ನಾಟಕ ವಿಧಾನಮಂಡಲದ ಈಚೆಗಿನ ಕಲಾಪವು ಸುಧಾರಣಾತ್ಮಕ ಶಾಸನಗಳ ಮಂಡನೆ ಮತ್ತು ಅಂಗೀಕಾರಕ್ಕೆ ಸಾಕ್ಷಿಯಾಯಿತು. ರಾಜ್ಯದಲ್ಲಿ ಹೂಡಿಕೆ ವಾತಾವರಣವನ್ನು ಸುಗಮಗೊಳಿಸುವುದು, ಲಕ್ಷಾಂತರ ಕುಟುಂಬಗಳ ಆಸ್ತಿ ಮಾಲೀಕತ್ವದ ಗೊಂದಲಗಳಿಗೆ ತೆರೆ ಎಳೆಯುವುದು, ಅಪಾರ್ಟ್‌ಮೆಂಟ್ ನಿವಾಸಿಗಳ ಹಕ್ಕುಗಳನ್ನು ರಕ್ಷಿಸುವುದು ಸೇರಿದಂತೆ ಮಹತ್ವದ ನಿರ್ಧಾರಗಳನ್ನು ಒಳಗೊಂಡ ಪ್ರಮುಖ ವಿಧೇಯಕಗಳು ಉಭಯ ಸದನಗಳಲ್ಲಿ ಅಂಗೀಕಾರಗೊಂಡವು.

ಅಪಾರ್ಟ್‌ಮೆಂಟ್ ನಿವಾಸಿಗಳ ಹಿತರಕ್ಷಣೆ ಹಾಗೂ ಅವರಿಗೆ ಶಾಸನಬದ್ಧ ಹಕ್ಕುಗಳನ್ನು ಒದಗಿಸುವ ಸಲುವಾಗಿ ಕರ್ನಾಟಕ ಸರ್ಕಾರ ರೂಪಿಸಿರುವ 'ಕರ್ನಾಟಕ ಅಪಾರ್ಟ್‌ಮೆಂಟ್ ಮಾಲೀಕತ್ವ ಮತ್ತು ನಿರ್ವಹಣಾ ಮಸೂದೆ'ಗೆ ವಿಧಾನಮಂಡಲದ ಅಧಿವೇಶನದಲ್ಲಿ ವಿಧಾನಸಭೆ ಮತ್ತು ವಿಧಾನಪರಿಷತ್‌ಗಳು ಅಂಗೀಕಾರ ನೀಡಿದವು.

Downloaded From:www.kpscvaani.com

ಮೊದಲು ವಿಧಾನಸಭೆಯಲ್ಲಿ, ನಂತರ ವಿಧಾನ ಪರಿಷತ್‌ನಲ್ಲಿ ಸಂಸದೀಯ ವ್ಯವಹಾರಗಳ ಸಚಿವ ಕೃಷ್ಣ ಬೈರೇಗೌಡ ಈ ಮಸೂದೆ ಮಂಡಿಸಿದರು.

ಕಟ್ಟಡದ ಆವರಣ ಪ್ರದೇಶ ಸೇರಿದಂತೆ ಸಮುಚ್ಚಯದ ನಿವಾಸಿಗಳೆಲ್ಲರೂ ಬಳಸುವ ಜಾಗಗಳು (ಕಾಮನ್ ಸ್ಪೇಸ್), ರಸ್ತೆಗಳು ಹಾಗೂ ಕಾಂಪೌಂಡ್ ಗೋಡೆಗಳ ಮಾಲೀಕತ್ವದ ವಿಚಾರದಲ್ಲಿ ಸಾಕಷ್ಟು ಗೊಂದಲಗಳಿವೆ. ಫ್ಲ್ಯಾಟ್‌ಗಳನ್ನು ಸಂಪೂರ್ಣ ಮಾರಾಟ ಮಾಡಿದ ನಂತರವೂ ಇಂತಹ ಜಾಗಗಳ ಮೇಲೆ ನಿರ್ಮಾಣ ಕಂಪನಿಗಳ ಮಾಲೀಕರು ಹಕ್ಕುಸ್ವಾಮ್ಯ ಹೊಂದಿದ್ದು, ಇವನ್ನು ಬಳಕೆ ಮಾಡಿಕೊಳ್ಳುತ್ತಿದ್ದಾರೆ. ಈ ಕುರಿತು ವ್ಯಾಜ್ಯಗಳು ಸಾಮಾನ್ಯವಾಗಿವೆ. ಕುಂದುಕೊರತೆಗಳನ್ನು ನಿವಾರಿಸಲು ಹಳೆಯ ಕಾನೂನಿನಲ್ಲಿ ಸೂಕ್ತ ಪರಿಹಾರ ಇಲ್ಲ. ರಾಜ್ಯದಲ್ಲಿ ಅಪಾರ್ಟ್‌ಮೆಂಟ್‌ಗಳ ಸಂಖ್ಯೆ ಹೆಚ್ಚಾಗುತ್ತಿದ್ದು ಅಲ್ಲಿ ಫ್ಲ್ಯಾಟ್‌ಗಳನ್ನು ಖರೀದಿಸಿದ ನಿವಾಸಿಗಳು ಎದುರಿಸುತ್ತಿರುವ ಗೊಂದಲಗಳಿಗೆ ಶಾಶ್ವತ ಮುಕ್ತಿ ನೀಡಲು ಮಸೂದೆ ಸಿದ್ಧಪಡಿಸಲಾಗಿದೆ ಎಂದು ಸಚಿವರು ವಿವರಿಸಿದರು.

'ನಿವೇಶನಗಳ ಲಭ್ಯತೆ ಸೀಮಿತವಾಗುತ್ತಿದ್ದು, ಕೈಗೆಟುಕದ ದರ ಮತ್ತಿತರ ಕಾರಣಗಳಿಂದ ಬಹುತೇಕ ನಾಗರಿಕರು ಅಪಾರ್ಟ್‌ಮೆಂಟ್ ಜೀವನವನ್ನು ಆಯ್ಕೆ ಮಾಡಿಕೊಳ್ಳುತ್ತಿದ್ದಾರೆ. 1972–73ರ ಹಳೆಯ ಕಾಯ್ದೆಗಳು ಹಾಗೂ ಯುಪಿಎ ಸರ್ಕಾರದ ಅವಧಿಯಲ್ಲಿ ಜಾರಿಗೆ ತಂದ 'ರಿಯಲ್ ಎಸ್ಟೇಟ್ ನಿಯಂತ್ರಣ ಮತ್ತು ಅಭಿವೃದ್ಧಿ ಕಾಯ್ದೆ (ರೇರಾ) ನಿಯಮಗಳು' ಇಂದಿನ ಸಂಕೀರ್ಣ ಸಮಸ್ಯೆಗಳಿಗೆ ಸ್ಪಂದಿಸಲು ವಿಫಲವಾಗಿವೆ. ಹೀಗಾಗಿ, ಹೊಸ ಕಾಯ್ದೆಯ ಅಗತ್ಯವಿದೆ' ಎಂದು ಕೃಷ್ಣ ಬೈರೇಗೌಡ ಸದನಕ್ಕೆ ಮಾಹಿತಿ ನೀಡಿದರು.

'ಒಂದೇ ಅಪಾರ್ಟ್‌ಮೆಂಟ್‌ನಲ್ಲಿ ಎರಡು–ಮೂರು ಸಂಘಗಳು ನೋಂದಣಿಯಾಗಿ ನಿವಾಸಿಗಳ ನಡುವೆ ವ್ಯಾಜ್ಯಗಳು ಸೃಷ್ಟಿಯಾಗುತ್ತಿವೆ. ಮುಖ್ಯಮಂತ್ರಿ ಡಿ.ಕೆ.ಶಿವಕುಮಾರ್ ಅವರು ನಿವಾಸಿಗಳ ಜತೆ ನಡೆಸಿದ ಮಾತುಕತೆಯ ಫಲವಾಗಿ ವಸತಿ ಸಮುಚ್ಚಯಗಳನ್ನು ನಿಯಂತ್ರಿಸಲು ಮತ್ತು ನಿವಾಸಿಗಳಿಗೆ ಶಾಸನಬದ್ಧ ಹಕ್ಕುಗಳನ್ನು ಒದಗಿಸಲು ಈ ಕಾನೂನು ರೂಪಿಸಲಾಗುತ್ತಿದೆ' ಎಂದೂ ತಿಳಿಸಿದರು.

ಮಸೂದೆಯ ಪ್ರಮುಖ ಅಂಶಗಳು:

- ಒಂದು ಅಪಾರ್ಟ್‌ಮೆಂಟ್‌ಗೆ ಒಂದೇ ನಿವಾಸಿಗಳ ಸಂಘ, ನೋಂದಣಿ ಕಡ್ಡಾಯ
- ಎಲ್ಲರೂ ಬಳಸುವ 'ಕಾಮನ್ ಸ್ಪೇಸ್' ಸಂಘದ ಒಡೆತನಕ್ಕೆ
- ವ್ಯಾಜ್ಯಗಳ ವಿಲೇವಾರಿಗೆ ಸಕ್ಷಮ ಪ್ರಾಧಿಕಾರಗಳ ನೇಮಕ, ನ್ಯಾಯಿಕ ಅಧಿಕಾರ
- ಕಟ್ಟಡ ಮರುನಿರ್ಮಾಣಕ್ಕೆ ಶೇಕಡಾ 75ರಷ್ಟು ಮಾಲೀಕರ ಸಮ್ಮತಿ ಕಡ್ಡಾಯ

ಬಡಾವಣೆ ಅನಧಿಕೃತ: ಎ–ಖಾತಾ ಖಚಿತ

ನಗರ ಸ್ಥಳೀಯ ಸಂಸ್ಥೆಗಳ ವ್ಯಾಪ್ತಿಯಲ್ಲಿ ನಿರ್ಮಾಣವಾಗಿರುವ ಅನಧಿಕೃತ ಬಡಾವಣೆಗಳಲ್ಲಿ ನಿವೇಶನ, ಮನೆ ಹೊಂದಿರುವವರಿಗೆ ಎ–ಖಾತಾ ನೀಡುವ ಹಾಗೂ ಮಾಲೀಕರ ಹೆಸರಿನಲ್ಲೇ ಇರುವ ರಸ್ತೆ, ಚರಂಡಿಗಳನ್ನು ಯಾವುದೇ ಪರಿಹಾರ ನೀಡದೆ ವಶಕ್ಕೆ ಪಡೆದು, ಮೂಲಸೌಕರ್ಯ ಕಲ್ಪಿಸುವ 'ಕರ್ನಾಟಕ ನಗರ ಪಾಲಿಕೆಗಳ ಮಸೂದೆ' ಹಾಗೂ 'ಮುನ್ಸಿಪಾಲಿಟಿಗಳ ಮಸೂದೆ'ಗಳಿಗೆ ವಿಧಾನಸಭೆ ಹಾಗೂ ವಿಧಾನಪರಿಷತ್ ಅನುಮೋದನೆ ನೀಡಿದವು.

ನಗರ ಪಾಲಿಕೆಗಳ ಮಸೂದೆಯನ್ನು ಕೃಷ್ಣ ಬೈರೇಗೌಡ ಹಾಗೂ ಕರ್ನಾಟಕ ಮುನ್ಸಿಪಾಲಿಟಿಗಳ ಮಸೂದೆಯನ್ನು ಪೌರಾಡಳಿತ ಸಚಿವ ಎಚ್.ಸಿ.ಬಾಲಕೃಷ್ಣ ಮಂಡಿಸಿದರು.

ನಗರ ಪಾಲಿಕೆ, ನಗರಸಭೆ, ಪುರಸಭೆ, ಪಟ್ಟಣ ಪಂಚಾಯಿತಿ ವ್ಯಾಪ್ತಿಯ ಅನಧಿಕೃತ ಬಡಾವಣೆಗಳಲ್ಲಿ ನಿವೇಶನಗಳನ್ನು ಖರೀದಿಸಿದವರ ಹೆಸರಿಗೆ ಖಾತೆಯಾಗಿದ್ದರೂ ರಸ್ತೆ, ಚರಂಡಿ ಒಳಗೊಂಡ ಪ್ರದೇಶಗಳು ಮೂಲ ಮಾಲೀಕರ ಹೆಸರಿನಲ್ಲೇ ಉಳಿದಿವೆ. ನಿಗದಿಗೊಳಿಸಿರುವಷ್ಟು ವಿಸ್ತಾರದ ರಸ್ತೆ, ವಿದ್ಯುತ್ ಸೌಕರ್ಯ, ಒಳಚರಂಡಿ ವ್ಯವಸ್ಥೆ, ಕುಡಿಯುವ ನೀರಿನ ವ್ಯವಸ್ಥೆ ಇರುವುದಿಲ್ಲ. ಮಳೆ ನೀರು ಸರಾಗವಾಗಿ ಹೋಗಲು ವ್ಯವಸ್ಥೆ ಮಾಡಿರುವುದಿಲ್ಲ. ಇದಕ್ಕಾಗಿ ಅಗತ್ಯವಿರುವ ಜಾಗವನ್ನು ಯಾವುದೇ ಪರಿಹಾರ ನೀಡದೆ ಸ್ಥಳೀಯ ಸಂಸ್ಥೆಗಳ ಹೆಸರಿಗೆ ವರ್ಗಾವಣೆ ಮಾಡಿಕೊಂಡು 'ಸಾರ್ವಜನಿಕ ರಸ್ತೆ' ಎಂದು ಘೋಷಿಸಲು ಈ ಮಸೂದೆಯಲ್ಲಿ ಅವಕಾಶ ನೀಡಲಾಗಿದೆ.

ರಸ್ತೆಗಳು ಅಧಿಕೃತಗೊಳ್ಳುತ್ತಿದ್ದಂತೆ, ಅಂತಹ ಬಡಾವಣೆಗಳಲ್ಲಿರುವ ನಿವೇಶನ ಮತ್ತು ಮನೆಗಳಿಗೆ ನಿಯಮಾನುಸಾರ ಎ ಖಾತಾ ನೀಡಲಾಗುತ್ತದೆ. ಇದರಿಂದ ಆಸ್ತಿ ಮಾಲೀಕರು ಬ್ಯಾಂಕುಗಳಿಂದ ಸುಲಭವಾಗಿ ಗೃಹ ಅಥವಾ ಆಸ್ತಿ ಸಾಲ ಪಡೆಯಲು ಸಾಧ್ಯವಾಗುತ್ತದೆ. ಜತೆಗೆ, ಕಟ್ಟಡ ನಕ್ಷೆ ಮಂಜೂರಾತಿ ಮತ್ತು ವಾಸಯೋಗ್ಯ ಪ್ರಮಾಣಪತ್ರ ಪಡೆಯಲು ಇದ್ದ ಅಡೆತಡೆಗಳು ನಿವಾರಣೆಯಾಗಲಿವೆ. ಭವಿಷ್ಯದಲ್ಲಿ ಅನಧಿಕೃತ ಬಡಾವಣೆಗಳು ತಲೆ ಎತ್ತದಂತೆಯೂ ತಡೆ ಬೀಳಲಿದೆ ಎಂಬುದು ಸರ್ಕಾರದ ನಿರೀಕ್ಷೆಯಾಗಿದೆ.

'ಬೆಂಗಳೂರು ಅಭಿವೃದ್ಧಿ ಪ್ರಾಧಿಕಾರ ಮಸೂದೆ'ಗೆ ವಿಧಾನಸಭೆ ಅಂಗೀಕಾರ : ಅನಧಿಕೃತ ಮನೆ: ಶುಲ್ಕ ಇಳಿಕೆ

ಬೆಂಗಳೂರು ಅಭಿವೃದ್ಧಿ ಪ್ರಾಧಿಕಾರದ (ಬಿಡಿಎ) ಬಡಾವಣೆಗಳಿಗಾಗಿ ಈ ಹಿಂದೆ ಭೂಸ್ವಾಧೀನಪಡಿಸಿಕೊಂಡಿದ್ದ ಭೂಮಿಯಲ್ಲಿ ರಚನೆಯಾಗಿರುವ ಅನಧಿಕೃತ ಬಡಾವಣೆ ನಿವಾಸಿಗಳು ತಮ್ಮ ವಾಸದ ಮನೆಗಳ ಮಾಲೀಕತ್ವ ಪಡೆಯಲು ಈವರೆಗೆ ವಿಧಿಸುತ್ತಿದ್ದ ಶುಲ್ಕದ ಪ್ರಮಾಣವನ್ನು ಶೇ 50ರಷ್ಟು ಇಳಿಸುವ ಉದ್ದೇಶದ ಮಸೂದೆಗೆ ವಿಧಾನಸಭೆ ಅಂಗೀಕಾರ ನೀಡಿದೆ.

ಗ್ರೇಟರ್ ಬೆಂಗಳೂರು ಅಭಿವೃದ್ಧಿ ಸಚಿವ ಕೃಷ್ಣ ಬೈರೇಗೌಡ, 'ಬೆಂಗಳೂರು ಅಭಿವೃದ್ಧಿ ಪ್ರಾಧಿಕಾರ (ತಿದ್ದುಪಡಿ) ಮಸೂದೆ –2026' ಅನ್ನು ಪರ್ಯಾಲೋಚನೆಗೆ ಮಂಡಿಸಿದರು.

Downloaded From:www.kpscvaani.com



ಬಿಡಿಎ ವಶದಲ್ಲಿರುವ ಜಾಗದಲ್ಲಿರುವ ಸುಮಾರು 1.11 ಲಕ್ಷಕ್ಕೂ ಹೆಚ್ಚು ಮನೆಗಳಲ್ಲಿರುವ ನಿವಾಸಿಗಳು ಈ ತಿದ್ದುಪಡಿ ಜಾರಿಗೆ ಬಂದ ಎರಡು ವರ್ಷದ ಒಳಗೆ ಮಾಲೀಕತ್ವದ ಹಕ್ಕು ಪಡೆದುಕೊಳ್ಳದಿದ್ದರೆ, ಅಂಥವರನ್ನು ಸ್ಥಳದಿಂದ ಹೊರಹಾಕಲು ಕೂಡಾ ಈ ಮಸೂದೆ ಅವಕಾಶ ಕಲ್ಪಿಸಲಿದೆ.

ರೂ.50 ಲಕ್ಷದವರೆಗಿನ ಕಾಮಗಾರಿಗಳಿಗೆ ಬಿಡಿಎ ಆಯುಕ್ತರು ತಮ್ಮ ಹಂತದಲ್ಲೇ ಮಂಜೂರಾತಿ, ಟೆಂಡರ್ ನೀಡಲು ಅವಕಾಶ ಇತ್ತು. ಆ ಮೊತ್ತವನ್ನು ರೂ. 5 ಕೋಟಿಯವರೆಗೆ ಹೆಚ್ಚಿಸಲು ಕೂಡಾ ತಿದ್ದುಪಡಿ ಮಸೂದೆಯಲ್ಲಿ ಅವಕಾಶ ಕಲ್ಪಿಸಲಾಗಿದೆ. ಬಿಡಿಎ ಫ್ಲಾಟ್‌ಗಳು, ವಿಲ್ಲಾಗಳು, ಬಡಾವಣೆಗಳ ದುರಸ್ತಿ ಮತ್ತು ನಿರ್ವಹಣೆಯಂತಹ ತ್ವರಿತ ಕಾಮಗಾರಿಗಳು ವಿಳಂಬ ಆಗುವುದನ್ನು ತಪ್ಪಿಸಲು ಆಯುಕ್ತರ ಆರ್ಥಿಕ ಮಂಜೂರಾತಿ ಮಿತಿ ಹೆಚ್ಚಿಸಲಾಗಿದೆ.

"ಬೆಂಗಳೂರಿನ ವಿವಿಧೆಡೆ ಬಿಡಿಎ ಬಡಾವಣೆಗಳ ರಚನೆಗಾಗಿ ಸ್ವಾಧೀನಪಡಿಸಿಕೊಂಡಿರುವ ಭೂಮಿಯಲ್ಲಿ ಕೆಲವೊಂದು ಅನಧಿಕೃತ ಬಡಾವಣೆಗಳು ನಿರ್ಮಾಣಗೊಂಡಿವೆ. ಆ ಜಾಗ ಬಿಡಿಎಗೆ ಸೇರಿದ್ದರೂ ಅಲ್ಲಿರುವ 1,11,560 ಅನಧಿಕೃತ ನಿವಾಸಿಗಳನ್ನು ತೆರವುಗೊಳಿಸಲು ಆಗುತ್ತಿಲ್ಲ. ವಾಸಿಸುವ ಜಾಗ, ಮನೆಯ ಮಾಲೀಕತ್ವದ ದಾಖಲೆ, ಖಾತೆ ಯಾವುದೂ ಇಲ್ಲದೆ ಆ ಜನರು ತ್ರಿಶಂಕು ಸ್ಥಿತಿಯಲ್ಲಿದ್ದಾರೆ. ಅಂತಹವರಿಗೆ ಅನುಕೂಲ ಕಲ್ಪಿಸಿಕೊಡಲು ಈ ಹಿಂದೆ ಕಾಯ್ದೆಗೆ ತಿದ್ದುಪಡಿ ತಂದು ವಿವಿಧ ವಿಸ್ತೀರ್ಣದ ನಿವೇಶಗಳಲ್ಲಿನ ಮನೆಗಳಿಗೆ ಮಾಲೀಕತ್ವದ ಹಕ್ಕಿನ ದಾಖಲೆ ಕೊಡಲು ಶುಲ್ಕ ನಿಗದಿಪಡಿಸಲಾಗಿತ್ತು. ಈಗ ಆ ಶುಲ್ಕವನ್ನು ಶೇ 50ರಷ್ಟು ಇಳಿಸಿ ಜನಪರವಾದ ಮತ್ತೊಂದು ತಿದ್ದುಪಡಿ ಮಾಡುತ್ತಿದ್ದೇವೆ" ಎಂದು ಕೃಷ್ಣ ಬೈರೇಗೌಡ ವಿವರಿಸಿದರು.

ಸಭಾಧ್ಯಕ್ಷ ಜಿ.ಎಸ್.ಪಾಟೀಲ ಅವರು ಮಸೂದೆಗೆ ಸದನದ ಅನುಮೋದನೆ ಕೋರಿದರು. ಧ್ವನಿಮತದ ಮೂಲಕ ಅಂಗೀಕಾರ ದೊರೆಯಿತು.

ಹೂಡಿಕೆ–ಉದ್ಯಮ ಸ್ಥಾಪನೆ ಸರಳ

ರಾಜ್ಯದಲ್ಲಿ ಕೈಗಾರಿಕಾ ಹೂಡಿಕೆ ಮತ್ತು ಉದ್ಯಮ ಸ್ಥಾಪನೆಯ ಪ್ರಕ್ರಿಯೆಯನ್ನು ಸುಲಭಗೊಳಿಸಲು 'ಕರ್ನಾಟಕ ಈಸ್ ಆಫ್ ಡೂಯಿಂಗ್ ಬಿಸಿನೆಸ್ (ತಿದ್ದುಪಡಿ) ವಿಧೇಯಕ–2026' ಅಂಗೀಕಾರಗೊಂಡಿದೆ. ರಾಜ್ಯದಲ್ಲಿ ಹೊಸ ಕೈಗಾರಿಕೆಗಳನ್ನು ಆರಂಭಿಸುವ ಉದ್ಯಮಿಗಳು ಹಾಗೂ ಹೂಡಿಕೆದಾರರಿಗೆ ವಿವಿಧ ಸರ್ಕಾರಿ ಇಲಾಖೆಗಳಿಂದ ಲಭಿಸಬೇಕಾದ ಅನುಮತಿಗಳು ಮತ್ತು ಅನುಮೋದನೆಗಳನ್ನು ಸುಲಭ ಹಾಗೂ ಶೀಘ್ರವಾಗಿ ತಲುಪಿಸುವುದು ಈ ವಿಧೇಯಕದ ಮುಖ್ಯ ಉದ್ದೇಶವಾಗಿದೆ.

'ಕೆವೈಎ' (Know Your Approvals) ಪರಿಚಯ:

ಉದ್ಯಮಿಗಳಿಗೆ ಅಗತ್ಯವಿರುವ ಸುರಕ್ಷತೆ ಮತ್ತು ಪಾರದರ್ಶಕತೆಯನ್ನು ಒದಗಿಸಲು ಕೆವೈಎ ವ್ಯವಸ್ಥೆ ಪರಿಚಯಿಸಲಾಗಿದೆ. ಇದರ ಮೂಲಕ ಉದ್ಯಮ ಪ್ರಾರಂಭಕ್ಕೆ ಬೇಕಾಗುವ ಎಲ್ಲ ಹಂತದ ಅನುಮತಿಗಳನ್ನು ಕನಿಷ್ಠ ಸಮಯದಲ್ಲಿ ಮತ್ತು ವೆಚ್ಚದಲ್ಲಿ ಪಡೆಯಲು ಅವಕಾಶವಾಗುತ್ತದೆ.

ಅನುಮೋದನೆ, ಎಕ್ಸ್‌ಪ್ರೆಸ್ ಲೈಸೆನ್ಸ್, ಆಟೊಮೆಟಿಕ್ ಅಪ್ರೂವಲ್, ಮಂಜೂರು ಮತ್ತು ಸರ್ಟಿಫೈಡ್ ಸ್ಕೋಪ್ ಎಂಬ ಹೊಸ ನಿಯಮಾವಳಿಗಳನ್ನು ವಿಧೇಯಕದಲ್ಲಿ ಅಳವಡಿಸಲಾಗಿದ್ದು, ಇವು ಅನುಮತಿ ಪ್ರಕ್ರಿಯೆಯನ್ನು ಇನ್ನಷ್ಟು ಚುರುಕುಗೊಳಿಸಲಿವೆ.

Downloaded From:www.kpscvaani.com

ಕೆಐಎಡಿಬಿ, ಕೆಎಸ್‌ಎಸ್‌ಐಡಿಸಿ ಮತ್ತು ಎಲ್ಲ ಕೈಗಾರಿಕಾ ಯೂನಿಟ್‌ಗಳ ಸಮಗ್ರ ದತ್ತಾಂಶ (ಮಾಹಿತಿ) ಸಂಗ್ರಹಿಸಿ, ಡಿಜಿಟಲ್ ತಂತ್ರಜ್ಞಾನದ ಮೂಲಕ ಏಕಗವಾಕ್ಷಿ ವ್ಯವಸ್ಥೆಯನ್ನು ಬಲಪಡಿಸಲು ಶಾಸನಬದ್ಧ ಚೌಕಟ್ಟು ರೂಪಿಸಲಾಗಿದೆ.

ಕ್ವಿನ್ ಸಿಟಿಗೆ 14 ಒಡಂಬಡಿಕೆ

"ದೊಡ್ಡಬಳ್ಳಾಪುರ ಮತ್ತು ದಾಬಸ್‌ಪೇಟೆ ನಡುವೆ ಅಭಿವೃದ್ಧಿಪಡಿಸುತ್ತಿರುವ ಕ್ವಿನ್ ಸಿಟಿಯಲ್ಲಿ ಟೊಯೊಟಾದಂತಹ ಎಂಟು ಕಂಪನಿಗಳು ಹಾಗೂ ಸಂಶೋಧನಾ ಸಂಸ್ಥೆಗಳೊಂದಿಗೆ ಸೇರಿ ಒಟ್ಟು 14 ಒಡಂಬಡಿಕೆ ಮಾಡಿಕೊಳ್ಳಲಾಗಿದೆ" ಎಂದು ಬೃಹತ್ ಕೈಗಾರಿಕಾ ಸಚಿವ ಎಂ.ಬಿ.ಪಾಟೀಲ ಹೇಳಿದರು.

ವಿಧಾನ ಪರಿಷತ್ತಿನಲ್ಲಿ ಕೆ.ಶಿವಕುಮಾರ್ ಅವರು ಕೇಳಿದ ಪ್ರಶ್ನೆಗೆ ಉತ್ತರಿಸಿದ ಅವರು, "ಒಟ್ಟು 5 ಸಾವಿರ ಎಕರೆಯಲ್ಲಿ ಕ್ವಿನ್ ಸಿಟಿ ಅಸ್ತಿತ್ವಕ್ಕೆ ಬರುತ್ತಿದೆ. ಈಗ ಮೊದಲ ಹಂತದ ಅಭಿವೃದ್ಧಿ ಕಾಮಗಾರಿ ನಡೆಯುತ್ತಿದ್ದು, ಟೆಂಡರ್ ಪ್ರಕ್ರಿಯೆ ಮುಗಿದಿದೆ. ಟೊಯೊಟಾ ಕಂಪನಿಯು ತನ್ನ ತವರಾಗಿರುವ ಜಪಾನಿನಲ್ಲಿ ಕೂಡ ಹೊಂದಿಲ್ಲದಂತಹ ಅತ್ಯುತ್ಕೃಷ್ಟ ಗುಣಮಟ್ಟದ ನಾವೀನ್ಯತಾ ಕೇಂದ್ರವನ್ನು ಇಲ್ಲಿ ಸ್ಥಾಪಿಸುತ್ತಿದೆ. ಜತೆಗೆ ಜಾಗತಿಕ ಮಟ್ಟದ ವೈದ್ಯಕೀಯ ಸಂಸ್ಥೆಗಳ, ಭಾರತೀಯ ವಿಜ್ಞಾನ ಸಂಸ್ಥೆ, ರಾಷ್ಟ್ರೀಯ ಕಾನೂನು ಶಾಲೆಯ ಕ್ಯಾಂಪಸ್ ಕೂಡ ಇಲ್ಲಿ ಬರಲಿವೆ" ಎಂದರು.

'ಕಂಪನಿಗಳು ಕಟ್ಟಡ ಮೂಲಸೌಕರ್ಯ ಅಭಿವೃದ್ಧಿಗೆ ಹೆಚ್ಚು ಹೂಡಿಕೆ ಮಾಡಲು ಬಯಸುವುದಿಲ್ಲ. ಹೀಗಾಗಿ ಅವುಗಳೊಂದಿಗೆ ಚರ್ಚಿಸಿ, ಅವರ ಅಗತ್ಯಕ್ಕೆ ಹೊಂದುವಂತಹ ರೀತಿಯಲ್ಲಿ ಕಟ್ಟಡಗಳ ನಿರ್ಮಾಣವಾಗಲಿವೆ. ಇಲ್ಲಿ ವಸತಿ ಕಟ್ಟಡಗಳೂ ಅಸ್ತಿತ್ವಕ್ಕೆ ಬರಲಿವೆ' ಎಂದು ತಿಳಿಸಿದರು.

ಮೈಸೂರಿನಲ್ಲಿ ಏರೋಸ್ಪೇಸ್ ಪಾರ್ಕ್: "ಮೈಸೂರಿನ ವಿಮಾನ ನಿಲ್ದಾಣದ ಸಮೀಪದಲ್ಲಿ ಸುಸಜ್ಜಿತ ಏರೋಸ್ಪೇಸ್ ಪಾರ್ಕ್ ಸ್ಥಾಪಿಸಲು ತೀರ್ಮಾನಿಸಲಾಗಿದೆ. ಆದರೆ ಸ್ಥಳೀಯರು ತಮ್ಮ ಭೂಮಿಗೆ ಬೆಂಗಳೂರಿನಲ್ಲಿ ಇರುವಷ್ಟೇ ಪರಿಹಾರ ಕೇಳುತ್ತಿದ್ದು, ಇದು ಕಗ್ಗಂಟಾಗಿದೆ. ಇದನ್ನು ಬಗೆಹರಿಸಿಕೊಂಡು ಮುಂದುವರಿಯಲಾಗುವುದು" ಎಂದು ಎಂ.ಬಿ.ಪಾಟೀಲ ಹೇಳಿದರು.



ಪಶ್ಚಿಮಘಟ್ಟ ಅಧಿಸೂಚನೆಗೆ ವಿರೋಧ

ಪಶ್ಚಿಮಘಟ್ಟ ಪ್ರದೇಶವನ್ನು ಪರಿಸರ ಸೂಕ್ಷ್ಮ ವಲಯ ಎಂದು ಘೋಷಿಸುವ ಸಂಬಂಧ ಕೇಂದ್ರ ಸರ್ಕಾರವು ಈಚೆಗೆ ಹೊರಡಿಸಿರುವ ಕರಡು ಅಧಿಸೂಚನೆಗೆ ಕರ್ನಾಟಕ ರಾಜ್ಯ ಸರ್ಕಾರ ತನ್ನ ತೀವ್ರ ವಿರೋಧವನ್ನು ವ್ಯಕ್ತಪಡಿಸಿದೆ. ಜುಲೈ 27ರಂದು ಕೇಂದ್ರ ಸರ್ಕಾರವು 7ನೇ ಬಾರಿಗೆ ಈ ಕರಡು ಅಧಿಸೂಚನೆಯನ್ನು ಹೊರಡಿಸಿದ್ದು, ರಾಜ್ಯದ ನಿಲುವಿನಲ್ಲಿ ಯಾವುದೇ ಬದಲಾವಣೆ ಇಲ್ಲ ಎಂದು ಅರಣ್ಯ ಸಚಿವ ರಾಮಲಿಂಗಾರೆಡ್ಡಿ ಅವರು ವಿಧಾನಸಭೆಯಲ್ಲಿ ಸ್ಪಷ್ಟಪಡಿಸಿದರು.

ಡಾ.ಕೆ.ಕಸ್ತೂರಿ ರಂಗನ್ ವರದಿಯ ಶಿಫಾರಸುಗಳನ್ನು ಆಧರಿಸಿ ತಯಾರಿಸಲಾದ ಈ ಕರಡು ಅಧಿಸೂಚನೆಯು ರಾಜ್ಯದ ಬೃಹತ್ ಭೂಭಾಗವನ್ನು ಒಳಗೊಳ್ಳುತ್ತದೆ. ರಾಜ್ಯದ 10 ಜಿಲ್ಲೆಗಳ ಒಟ್ಟು 39 ತಾಲ್ಲೂಕುಗಳ ವ್ಯಾಪ್ತಿಯಲ್ಲಿರುವ 20,668 ಚದರ ಕಿ.ಮೀ ಪ್ರದೇಶ ಮತ್ತು 1,449 ಗ್ರಾಮಗಳು ಈ ಕರಡು ಅಧಿಸೂಚನೆಯ ವ್ಯಾಪ್ತಿಗೆ ಬರಲಿವೆ. ಮುಖ್ಯವಾಗಿ ಇದು ಬೆಳಗಾವಿ, ಚಾಮರಾಜನಗರ, ಚಿಕ್ಕಮಗಳೂರು, ಕೊಡಗು, ಹಾಸನ, ಉತ್ತರ ಕನ್ನಡ, ದಕ್ಷಿಣ ಕನ್ನಡ, ಮೈಸೂರು, ಶಿವಮೊಗ್ಗ ಹಾಗೂ ಉಡುಪಿ ಜಿಲ್ಲೆಗಳನ್ನು ಒಳಗೊಳ್ಳುತ್ತದೆ.

ಈ ಪ್ರದೇಶಗಳನ್ನು ಪರಿಸರ ಸೂಕ್ಷ್ಮ ವಲಯ ಎಂದು ಘೋಷಿಸುವುದರಿಂದ ಹಲವಾರು ಕಟ್ಟುನಿಟ್ಟಿನ ನಿಯಮಗಳು ಜಾರಿಗೆ ಬರಲಿವೆ. ಮುಖ್ಯವಾಗಿ ಕಲ್ಲು ಮತ್ತು ಮರಳು ಗಣಿಗಾರಿಕೆ, ಉಷ್ಣ ವಿದ್ಯುತ್ ಸ್ಥಾವರಗಳ ಸ್ಥಾಪನೆ, ಬೃಹತ್ ಕಟ್ಟಡ ನಿರ್ಮಾಣ ಮತ್ತು ಟೌನ್‌ಶಿಪ್ ಅಭಿವೃದ್ಧಿ ಚಟುವಟಿಕೆಗಳಿಗೆ ಸಂಪೂರ್ಣ ನಿರ್ಬಂಧ ವಿಧಿಸಲಾಗುತ್ತದೆ. ಆದಾಗ್ಯೂ, ಈ ರೀತಿಯ ಕಠಿಣ ನಿಯಮಗಳು ಜಾರಿಯಾದರೆ ಪಶ್ಚಿಮಘಟ್ಟ ಪ್ರದೇಶದ ಜನರ ದೈನಂದಿನ ಜೀವನೋಪಾಯದ ಮೇಲೆ ತೀವ್ರ ಪೆಟ್ಟು ಬೀಳಲಿದೆ ಎಂಬುದು ಸ್ಥಳೀಯ ಶಾಸಕರು ಮತ್ತು ಕರ್ನಾಟಕ ಸರ್ಕಾರದ ಆತಂಕವಾಗಿದೆ.


Downloaded From:www.kpscvaani.com

ರಾಜ್ಯದಲ್ಲಿ ಪಿಎಂ-ಕುಸುಮ್ ಯೋಜನೆಯ ತ್ವರಿತ ಅನುಷ್ಠಾನಕ್ಕೆ ಒತ್ತು

ಎಂ.ತ್ಯಾಗರಾಜು

ಕೃಷಿ ಪಂಪ್‌ಸೆಟ್‌ಗಳಿಗೆ ಗುಣಮಟ್ಟದ ವಿದ್ಯುತ್, ಇಂಧನ ಸುಸ್ಥಿರತೆಯತ್ತ ಸದೃಢ ಹೆಜ್ಜೆ

ಕೃಷಿ ಕ್ಷೇತ್ರದಲ್ಲಿ ಸಾಂಪ್ರದಾಯಿಕ ವಿದ್ಯುತ್ ಮೂಲಗಳ ಮೇಲಿನ ಅವಲಂಬನೆಯನ್ನು ಕಡಿಮೆಗೊಳಿಸುವ ಜೊತೆಗೆ ವಿದ್ಯುತ್ ಪೂರೈಕೆಯನ್ನು ಹೆಚ್ಚು ವಿಶ್ವಾಸಾರ್ಹಗೊಳಿಸುವ ಉದ್ದೇಶದಿಂದ ಕೇಂದ್ರ ಸರ್ಕಾರ ಜಾರಿಗೆ ತಂದಿರುವ ಪ್ರಧಾನಮಂತ್ರಿ ಕಿಸಾನ್ ಊರ್ಜಾ ಸುರಕ್ಷಾ ಏವಂ ಉತ್ಥಾನ ಮಹಾಭಿಯಾನ್ (ಪಿಎಂ–ಕುಸುಮ್) ಯೋಜನೆ ಕರ್ನಾಟಕದಲ್ಲಿ ವೇಗ ಪಡೆದುಕೊಂಡಿದೆ. ಮುಖ್ಯವಾಗಿ, ಯೋಜನೆಯ 'ಬಿ' ಮತ್ತು 'ಸಿ' ಘಟಕಗಳಡಿ ವಿದ್ಯುತ್ ಸಂಪರ್ಕ ಚಾಲಿತ ಕೃಷಿ ಪಂಪ್‌ಸೆಟ್‌ಗಳನ್ನು ಸೌರೀಕರಣಗೊಳಿಸಲು ಗಮನ ಕೇಂದ್ರೀಕರಿಸಲಾಗಿದೆ. ಈ ಮೂಲಕ, ಹೆಚ್ಚಿನ ಸಂಖ್ಯೆಯ ರೈತರಿಗೆ ಹಗಲಿನಲ್ಲೇ ಗುಣಮಟ್ಟದ ಹಾಗೂ ನಿರಂತರ ವಿದ್ಯುತ್ ಪೂರೈಕೆ ಸಾಧ್ಯವಾಗುತ್ತಿದೆ.



Downloaded From:www.kpscvaani.com

ಇಲ್ಲಿ ಕೃಷಿ ಪಂಪ್‌ಸೆಟ್‌ಗಳಿಗೆ ಬೇಕಾದ ವಿದ್ಯುತ್ ಸ್ಥಳೀಯವಾಗಿಯೇ ಉತ್ಪಾದನೆಗೊಂಡು ಪೂರೈಕೆ ಆಗುವುದರಿಂದ ದೂರದ ಜಲವಿದ್ಯುತ್ ಹಾಗೂ ಉಷ್ಣವಿದ್ಯುತ್ ಯೋಜನೆಗಳಿಂದ ವಿದ್ಯುತ್ ಸಾಗಿಸುವ ಅಗತ್ಯ ಇಲ್ಲವಾಗಿ ಗ್ರಿಡ್ ಮೇಲಿನ ಒತ್ತಡ ಕಡಿಮೆಯಾಗಲಿದೆ. ಇದರಿಂದ ವಿದ್ಯುತ್ ವ್ಯತ್ಯಯ, ವೋಲ್ಟೇಜ್ ಏರಿಳಿತ ಹಾಗೂ ಜಾಲದ ಮೇಲಿನ ಹೆಚ್ಚಿನ ಹೊರೆಯಂತಹ ಸಮಸ್ಯೆಗಳು ತಗ್ಗಲಿವೆ. ವೋಲ್ಟೇಜ್ ಏರಿಳಿತದ ಸಮಸ್ಯೆ ಕಡಿಮೆಯಾಗುವುದರಿಂದ ನೀರಾವರಿ ವ್ಯವಸ್ಥೆ ಹೆಚ್ಚು ಪರಿಣಾಮಕಾರಿಯಾಗಲಿದೆ. ಸಾಂಪ್ರದಾಯಿಕ ಇಂಧನ ಮೂಲಗಳ ಮೇಲಿನ ಅವಲಂಬನೆ ಮತ್ತು ಇಂಗಾಲ ಹೊರಸೂಸುವಿಕೆಯನ್ನೂ ಕಡಿಮೆ ಮಾಡಲು ಇದು ನೆರವಾಗಲಿದೆ. ಯೋಜನೆಯ ಅನುಷ್ಠಾನದಲ್ಲಿ ಮಹಾರಾಷ್ಟ್ರವು ದೇಶದಲ್ಲಿ ಮೊದಲ ಸ್ಥಾನದಲ್ಲಿದ್ದರೆ, ಕರ್ನಾಟಕ ಎರಡನೇ ಸ್ಥಾನದಲ್ಲಿದೆ ಎಂಬುದು ಗಮನಾರ್ಹ ಅಂಶವಾಗಿದೆ.

2.79 ಲಕ್ಷ ಪಂಪ್‌ಸೆಟ್‌ಗಳಿಗೆ ಪಿಪಿಎ

ರಾಜ್ಯದ ವಿವಿಧ ಎಸ್ಕಾಂಗಳ ವ್ಯಾಪ್ತಿಯಲ್ಲಿ ಯೋಜನೆ ಅನುಷ್ಠಾನಗೊಳ್ಳುತ್ತಿದ್ದು, ಬೆಸ್ಕಾಂ ವ್ಯಾಪ್ತಿಯಲ್ಲಿ ಯೋಜನೆಯ ಅನುಷ್ಠಾನದಲ್ಲಿ ಗಮನಾರ್ಹ ಪ್ರಗತಿ ಕಂಡುಬಂದಿದೆ. ಕೇಂದ್ರದ ಹೊಸ ಮತ್ತು ನವೀಕರಿಸಬಹುದಾದ ಇಂಧನ ಸಚಿವಾಲಯವು (MNRE) ಬೆಸ್ಕಾಂ ವ್ಯಾಪ್ತಿಯಲ್ಲಿ 2.62 ಲಕ್ಷ ಕೃಷಿ ಪಂಪ್‌ಸೆಟ್‌ಗಳ ಸೌರೀಕರಣಕ್ಕೆ ಅನುಮೋದನೆ ನೀಡಿದ್ದು, ಬಳಿಕ ಇನ್ನೂ 60 ಸಾವಿರ ಪಂಪ್‌ಸೆಟ್‌ಗಳಿಗೆ ಹೆಚ್ಚುವರಿ ಅನುಮೋದನೆ ದೊರೆತಿದೆ. "ಈ ಪೈಕಿ ಒಟ್ಟು 1,159.1 ಮೆಗಾವಾಟ್ ಸಾಮರ್ಥ್ಯದ ಯೋಜನೆಗಳಿಗೆ ವಿದ್ಯುತ್ ಖರೀದಿ ಒಪ್ಪಂದ (PPA) ಮಾಡಿಕೊಳ್ಳಲಾಗಿದ್ದು, 2,79,043 ಕೃಷಿ ಪಂಪ್‌ಸೆಟ್‌ಗಳಿಗೆ ಇದರ ಪ್ರಯೋಜನ ದೊರೆಯಲಿದೆ. ಪಿಎಂ-ಕುಸುಮ್ ಸಿ ಯೋಜನೆಯಿಂದ ರೈತರಿಗೆ



ಕೊಳವೆಬಾವಿಗಳ ಪಂಪ್‌ಗಳಿಗೆ ಹಗಲಿನಲ್ಲೇ ಯಾವುದೇ ಅಡಚಣೆ ಅಥವಾ ವೋಲ್ಟೇಜ್ ಸಮಸ್ಯೆಯಿಲ್ಲದೆ ಸೌರವಿದ್ಯುತ್ ಬಳಸಿಕೊಳ್ಳಲು ಸಾಧ್ಯವಾಗಲಿದೆ" ಎನ್ನುತ್ತಾರೆ ಬೆಸ್ಕಾಂ ವ್ಯವಸ್ಥಾಪಕ ನಿರ್ದೇಶಕರಾದ ಡಾ. ಎನ್. ಶಿವಶಂಕರ್.

ಯೋಜನೆಗೆ ವೇಗ

ಪಿಎಂ-ಕುಸುಮ್ ಸಿ ಯೋಜನೆಯ ಪರಿಣಾಮವನ್ನು ಚಿಕ್ಕಬಳ್ಳಾಪುರ ಜಿಲ್ಲೆಯಲ್ಲಿ ಸ್ಪಷ್ಟವಾಗಿ ಕಾಣಬಹುದಾಗಿದೆ. ಜಿಲ್ಲೆಯ ವಿವಿಧೆಡೆ ಕೃಷಿ ಪಂಪ್‌ಸೆಟ್‌ಗಳಿಗೆ ಸ್ಥಳೀಯವಾಗಿ ಉತ್ಪಾದಿಸುವ ಸೌರವಿದ್ಯುತ್ ಪೂರೈಸುವ ಯೋಜನೆಗಳು ಕಾರ್ಯಾಚರಿಸುತ್ತಿವೆ. ಇಲ್ಲಿನ ಹಿರಿಯಣ್ಣನಹಳ್ಳಿಯಲ್ಲಿ 13 ಮೆಗಾವಾಟ್ ಸಾಮರ್ಥ್ಯದ ಸೌರವಿದ್ಯುತ್ ಘಟಕ ಕಳೆದ ತಿಂಗಳು ಕಾರ್ಯಾರಂಭಗೊಂಡಿದೆ. ಅಂದಾಜು 40 ಎಕರೆ ಪ್ರದೇಶದಲ್ಲಿ ಸ್ಥಾಪಿಸಿರುವ ಈ ಘಟಕದಿಂದ ಸುಮಾರು 3,000 ಕೃಷಿ ಪಂಪ್‌ಸೆಟ್‌ಗಳಿಗೆ ವಿದ್ಯುತ್ ಪೂರೈಕೆಯಾಗುತ್ತಿದ್ದು, ದಿಬ್ಬರಹಳ್ಳಿ ಉಪಕೇಂದ್ರದ ವ್ಯಾಪ್ತಿಯ 27 ಗ್ರಾಮಗಳ ರೈತರಿಗೆ ಇದರ ಪ್ರಯೋಜನ ದೊರೆಯುತ್ತಿದೆ.

ಸ್ಥಳೀಯ ರೈತರಿಂದಲೂ ಈ ಬಗ್ಗೆ ಒಳ್ಳೆಯ ಅಭಿಪ್ರಾಯಗಳು ಕೇಳಿಬರುತ್ತಿವೆ. "ಘಟಕ ಆರಂಭವಾಗುವ ಮೊದಲು ಹಗಲಿನಲ್ಲಿ ನಾಲ್ಕು ಗಂಟೆ ಹಾಗೂ ರಾತ್ರಿ ಮೂರು ಗಂಟೆ ವಿದ್ಯುತ್ ನೀಡಲಾಗುತ್ತಿತ್ತು. ಈಗ ಹಗಲಿನಲ್ಲೇ ನಿರಂತರವಾಗಿ ಏಳು ಗಂಟೆ ವಿದ್ಯುತ್ ಪೂರೈಕೆಯಾಗುತ್ತಿರುವುದರಿಂದ ತುಂಬಾ ಅನುಕೂಲವಾಗಿದೆ. ಹಗಲಿನಲ್ಲೇ ತೋಟಕ್ಕೆ ನೀರು ಹರಿಸಬಹುದಾಗಿದ್ದು, ರಾತ್ರಿ ನಿದ್ದೆಗೆಡುವ ಸಮಸ್ಯೆ ತಪ್ಪಿದೆ" ಎನ್ನುವ ಮುನಿರಾಜು ಅವರ ಮಾತು ಇದಕ್ಕೊಂದು ಉದಾಹರಣೆಯಾಗಿದೆ.

ಜಮೀನು ಗುತ್ತಿಗೆ ಆದಾಯದ ಮೂಲ

ಸೌರವಿದ್ಯುತ್ ಘಟಕ ಸ್ಥಾಪಿಸಲು ರೈತರು ತಮ್ಮ ಜಮೀನನ್ನು ಗುತ್ತಿಗೆಗೆ ನೀಡುವ ಮೂಲಕ ಹೆಚ್ಚುವರಿ ಆದಾಯ ಗಳಿಸಲು ಅವಕಾಶವಿರುವುದು ಕುಸುಮ್-ಸಿ ಯೋಜನೆಯ ಮತ್ತೊಂದು ಪ್ರಮುಖ ಅಂಶವಾಗಿದೆ. ಹಿರಿಯಣ್ಣನಹಳ್ಳಿಯ ರೈತ ನಾರಾಯಣಸ್ವಾಮಿ ಅವರು ತಮ್ಮ 40

Downloaded From:www.kpscvaani.com

ಎಕರೆ ಜಮೀನನ್ನು ಖಾಸಗಿ ಕಂಪನಿಗೆ 25 ವರ್ಷಗಳ ಅವಧಿಗೆ ಗುತ್ತಿಗೆ ನೀಡಿದ್ದು, "ಸರ್ಕಾರ ಒಂದು ಎಕರೆಗೆ ವರ್ಷಕ್ಕೆ ಕನಿಷ್ಠ ರೂ.25 ಸಾವಿರ ಗುತ್ತಿಗೆ ದರ ನಿಗದಿಪಡಿಸಿದೆ. ಆದರೆ, ಇದು ಫಲವತ್ತಾದ ಭೂಮಿಯಾಗಿರುವುದರಿಂದ ಎಕರೆಗೆ ವರ್ಷಕ್ಕೆ ರೂ. 60 ಸಾವಿರದಂತೆ ಒಪ್ಪಂದ ಮಾಡಿಕೊಳ್ಳಲಾಗಿದೆ. ಮುಖ್ಯವಾಗಿ, ಈ ಭಾಗದ ರೈತರಿಗೆ ವಿದ್ಯುತ್ ಸಿಗುತ್ತದೆ ಎಂಬ ಕಾರಣಕ್ಕೆ ಜಮೀನು ಗುತ್ತಿಗೆಗೆ ನೀಡಿದ್ದೇನೆ" ಎನ್ನುತ್ತಾರೆ ಅವರು.

ಅಧಿಕಾರಿಗಳು ತಿಳಿಸುವ ಪ್ರಕಾರ, ಒಂದು ಮೆಗಾವಾಟ್ ಸಾಮರ್ಥ್ಯದ ಸೌರವಿದ್ಯುತ್ ಘಟಕ ಸ್ಥಾಪಿಸಲು ಸುಮಾರು ಮೂರೂವರೆ ಎಕರೆ ಜಮೀನು ಅಗತ್ಯವಿದ್ದು, ಸುಮಾರು ರೂ.4 ಕೋಟಿ ವೆಚ್ಚವಾಗುತ್ತದೆ. ಸ್ಥಳೀಯ ಭೂಮಿಯ ದರ, ಉಪಕೇಂದ್ರಕ್ಕೆ ಇರುವ ಅಂತರ ಸೇರಿದಂತೆ ವಿವಿಧ ಅಂಶಗಳ ಆಧಾರದ ಮೇಲೆ ಗುತ್ತಿಗೆ ದರವನ್ನು ನಿರ್ಧರಿಸಲಾಗುತ್ತದೆ ಎಂದೂ ಅವರು ತಿಳಿಸುತ್ತಾರೆ.

2,700 ಮೆಗಾವಾಟ್ ಉತ್ಪಾದನೆಗೆ ಟೆಂಡರ್

ಹೀಗೆ ಉತ್ಪಾದನೆಯಾಗುವ ವಿದ್ಯುತ್‌ನ್ನು ಬೆಸ್ಕಾಂ ಖರೀದಿಸಲಿದೆ. ಯೂನಿಟ್‌ಗೆ ರೂ.2.75ರಿಂದ ರೂ.3 ದರದಲ್ಲಿ ಖರೀದಿಸುತ್ತಿದ್ದು, ಹೊರಗಿನಿಂದ ಖರೀದಿಸಿದರೆ ಯೂನಿಟ್‌ಗೆ ಸುಮಾರು ರೂ.6 ವೆಚ್ಚವಾಗುತ್ತದೆ. ಇದರಿಂದ ರೈತರು ಹಾಗೂ ಬೆಸ್ಕಾಂ ಇಬ್ಬರಿಗೂ ಅನುಕೂಲವಾಗುತ್ತದೆ. ರಾಜ್ಯದ 148 ಕಡೆ ಸೌರವಿದ್ಯುತ್ ಯೋಜನೆಗಳನ್ನು ಕೈಗೆತ್ತಿಕೊಳ್ಳಲಾಗಿದ್ದು, ಈ ಪೈಕಿ 35 ಕಡೆ ಸರ್ಕಾರಿ ಜಾಗದಲ್ಲಿ ಯೋಜನೆಗಳನ್ನು ಅನುಷ್ಠಾನಗೊಳಿಸಲಾಗುತ್ತಿದೆ. ಉಳಿದ ಕಡೆ ರೈತರಿಂದ ಜಮೀನು ಗುತ್ತಿಗೆ ಪಡೆದು ಹಾಗೂ ಕೆರೆಗಳ ಹಿಂಭಾಗದ ಜಾಗವನ್ನು ಬಳಸಿಕೊಂಡು ಘಟಕಗಳನ್ನು ಸ್ಥಾಪಿಸಲಾಗುತ್ತಿದೆ. ಒಟ್ಟು 2,700 ಮೆಗಾವಾಟ್ ಸೌರವಿದ್ಯುತ್ ಉತ್ಪಾದನೆಗೆ ಟೆಂಡರ್ ಆಗಿದ್ದು, ಸುಮಾರು 600 ಮೆಗಾವಾಟ್ ಉತ್ಪಾದನೆ ಆರಂಭವಾಗಿದೆ. ಉಳಿದ ಯೋಜನೆಗಳು 2027ರ ಮಾರ್ಚ್ ವೇಳೆಗೆ ಪೂರ್ಣಗೊಳ್ಳುವ ನಿರೀಕ್ಷೆಯಿದೆ ಎಂದು ಶಿವಶಂಕರ್ ಅಂಕಿಅಂಶಗಳನ್ನು ಮುಂದಿಡುತ್ತಾರೆ.

ಸರ್ಕಾರಿ ಜಾಗದಲ್ಲಿ ಸೌರವಿದ್ಯುತ್ ಘಟಕ ಸ್ಥಾಪಿಸಿದಲ್ಲಿ ಪ್ರತಿ ಎಕರೆಗೆ ವರ್ಷಕ್ಕೆ 25 ಸಾವಿರ ರೂಪಾಯಿಗಳನ್ನು ಡೆವಲಪರ್‌ಗಳು ಸಂಬಂಧಪಟ್ಟ ಗ್ರಾಮ ಪಂಚಾಯಿತಿಗೆ ಪಾವತಿಸಬೇಕಾಗುತ್ತದೆ. ಈ ಹಣವನ್ನು ಅಂಗನವಾಡಿ ಮತ್ತು ಶಾಲೆಗಳಿಗೆ ಅಗತ್ಯವಿರುವ ಮೂಲಸೌಕರ್ಯ ಕಲ್ಪಿಸಲು ಬಳಸಿಕೊಳ್ಳಲು ಅವಕಾಶವಿರುತ್ತದೆ.

ಕೆರೆ ಅಂಗಳದ ಜಾಗ ಬಳಕೆ

ದೇವನಹಳ್ಳಿ ಸಮೀಪದ ನಲ್ಲಿಮರದಹಳ್ಳಿಯಲ್ಲಿ ಮುಳ್ಳಿಕೆರೆಯ ಹಿಂಭಾಗದಲ್ಲಿ ಸೌರವಿದ್ಯುತ್ ಘಟಕ



ಎಸ್ಕಾಂಗಳು	ಸ್ವೀಕೃತ ಅರ್ಜಿಗಳು	ಪರಿಶೀಲನೆ	ಕಾರ್ಯಾದೇಶ ಸಂಖ್ಯೆ	ಕಾರ್ಯಾರಂಭ
ಬೆಸ್ಕಾಂ	34,098	18,521	12,835	10,057
ಹೆಸ್ಕಾಂ	21,118	10,116	7,495	5,461
ಸೆಸ್ಕಾಂ	17,164	8,427	7,400	5,454
ಮೆಸ್ಕಾಂ	14,370	7,995	6,710	5,190
ಜೆಸ್ಕಾಂ	16,945	5,759	5,382	3,467
ಎಚ್‌ಆರ್‌ಇಸಿಎಸ್	365	220	178	160
ಒಟ್ಟು	1,04,060	51,038	40,000	29,789

ಸ್ಥಾಪಿಸಲಾಗಿದೆ. ಈ ಭಾಗದಲ್ಲಿ ಖಾಸಗಿ ಭೂಮಿಯ ಬೆಲೆ ದುಬಾರಿ ಇರುವುದರಿಂದ ರೈತರು ಜಮೀನು ನೀಡಲು ಮುಂದೆ ಬರಲಿಲ್ಲ. ಹೀಗಾಗಿ, ಸಣ್ಣ ನೀರಾವರಿ ಇಲಾಖೆಗೆ ಸೇರಿದ ಕೆರೆ ಅಂಗಳದ ಜಾಗವನ್ನು ಯೋಜನೆಗೆ ಬಳಸಿಕೊಳ್ಳಲಾಗಿದೆ. ಇದೇ ರೀತಿಯಾಗಿ, ಕುಂದಾಣ ಹಾಗೂ ದೇವನಹಳ್ಳಿ ಯೋಜನೆಗಳನ್ನೂ ಸಣ್ಣ ನೀರಾವರಿ ಇಲಾಖೆಯ ವ್ಯಾಪ್ತಿಯ ಹೊಗೇನವಾಡಿ ಕೆರೆಯ ಜಾಗದಲ್ಲಿ ಅಭಿವೃದ್ಧಿಪಡಿಸಲಾಗುತ್ತಿದೆ. ಖಾಸಗಿ ಡೆವಲಪರ್ ಕಂಪನಿಯು ನಿಗದಿತ ಗುತ್ತಿಗೆ ಮೊತ್ತವನ್ನು ನೀರಾವರಿ ಇಲಾಖೆಗೆ ಪಾವತಿಸುತ್ತಿದೆ. ಕೆರೆ ತುಂಬಿ ಕೋಡಿ ಹರಿದ ಸಂದರ್ಭದಲ್ಲೂ ಸೌರ ಫಲಕಗಳಿಗೆ ಹಾನಿಯಾಗದಂತೆ ಅವುಗಳನ್ನು ಎತ್ತರದಲ್ಲಿ ಅಳವಡಿಸಲಾಗುತ್ತಿದೆ.

"ಎಕರೆಗೆ ವರ್ಷಕ್ಕೆ ರೂ.25 ಸಾವಿರದಂತೆ ಸಣ್ಣ ನೀರಾವರಿ ಇಲಾಖೆಗೆ ಹಣ ನೀಡಲಾಗುತ್ತಿದೆ. ನಲ್ಲಿಮರದಹಳ್ಳಿಯಲ್ಲಿ 13 ಮೆಗಾವಾಟ್, ದೇವನಹಳ್ಳಿಯಲ್ಲಿ 13 ಮೆಗಾವಾಟ್ ಹಾಗೂ ಕುಂದಾಣದಲ್ಲಿ 3 ಮೆಗಾವಾಟ್ ವಿದ್ಯುತ್ ಉತ್ಪಾದಿಸಿ ಸುತ್ತಮುತ್ತಲಿನ ಗ್ರಾಮಗಳ ರೈತರ ಪಂಪ್‌ಸೆಟ್‌ಗಳಿಗೆ ಪೂರೈಸಲಾಗುತ್ತಿದೆ. ಜೊತೆಗೆ, ಚಿಕ್ಕಬಳ್ಳಾಪುರ ಜಿಲ್ಲೆಯಲ್ಲಿ ಹೆಚ್ಚುವರಿ ಅನುಷ್ಠಾನಕ್ಕಾಗಿ ಪರಿಭಾವಿತ ಅರಣ್ಯ ಜಮೀನಿನ (ಡೀಮ್ಡ್ ಫಾರೆಸ್ಟ್) ಕೆಲವು ಭಾಗಗಳನ್ನು ಬಳಸಿಕೊಳ್ಳುವ ಸಾಧ್ಯತೆಯನ್ನು ಪರಿಶೀಲಿಸಲಾಗುತ್ತಿದೆ" ಎಂದು ಶಿವಶಂಕರ್ ವಿವರಿಸುತ್ತಾರೆ.

ಕುಸುಮ್-ಬಿ: ಪಂಪ್‌ಸೆಟ್‌ಗಳ ಸೌರೀಕರಣಕ್ಕೂ ವೇಗ

ಪಿಎಂ ಕುಸುಮ್-ಬಿ ಅಡಿಯಲ್ಲಿ, ರೈತರ

Downloaded From:www.kpscvaani.com



ಕೊಳವೆಬಾವಿಗಳಿಗೆ ಸೌರ ವಿದ್ಯುತ್ ಪಂಪ್‌ಸೆಟ್‌ಗಳನ್ನು ಅಳವಡಿಸಲಾಗುತ್ತಿದೆ.ಕೇಂದ್ರ ಮತ್ತು ರಾಜ್ಯ ಸರ್ಕಾರಗಳ ಜಂಟಿ ಸಹಭಾಗಿತ್ವದಲ್ಲಿಕರ್ನಾಟಕ ನವೀಕರಿಸಬಹುದಾದ ಇಂಧನ ಅಭಿವೃದ್ಧಿ ನಿಯಮಿತವು (ಕ್ರೆಡಲ್) ಇದನ್ನು ಅನುಷ್ಠಾನವನ್ನು ನಿರ್ವಹಿಸುತ್ತಿದೆ. ಇದಕ್ಕೆ ಕೇಂದ್ರ ಸರ್ಕಾರದಿಂದ ಶೇ.30 ಹಾಗೂ ರಾಜ್ಯ ಸರ್ಕಾರದಿಂದ ಶೇ.50 ಸಹಾಯಧನ ದೊರೆಯಲಿದ್ದು, ಉಳಿದ ಮೊತ್ತವನ್ನು ಮಾತ್ರವೇ ರೈತರು ಭರಿಸಬೇಕಾಗುತ್ತದೆ. ಕೇಂದ್ರ ಸರ್ಕಾರ ರಾಜ್ಯಕ್ಕೆ ಅನುಮೋದನೆ ನೀಡಿದ 40.000 ಸೌರ ಪಂಪ್‌ಸೆಟ್‌ಗಳಲ್ಲಿ ಈಗಾಗಲೇ 29,789 ಪಂಪ್‌ಸೆಟ್‌ಗಳು ಯಶಸ್ವಿಯಾಗಿ ಕಾರ್ಯಾ ರಂಭ ಮಾಡಿವೆ.. ಉಳಿದ ಕೊಳವೆಬಾವಿಗಳಿಗೆ ಒಂದು ತಿಂಗಳಲ್ಲಿ ಅಳವಡಿಕೆ ಪೂರ್ಣಗೊಳಿಸುವ ಉದ್ದೇಶವಿದೆ. ಎರಡನೇ ಹಂತದಲ್ಲಿ ಇನ್ನೂ ಒಂದು ಲಕ್ಷ ಕೊಳವೆಬಾವಿಗಳಿಗೆ ಸೌರವಿದ್ಯುತ್ ಪಂಪ್‌ಸೆಟ್ ಅಳವಡಿಸಲು ಅವಕಾಶ ನೀಡುವಂತೆ ಕೇಂದ್ರ ಸರ್ಕಾರಕ್ಕೆ ಪ್ರಸ್ತಾವ ಸಲ್ಲಿಸಲಾಗಿದೆ ಎಂದು ಶಿವಶಂಕರ್ ತಿಳಿಸುತ್ತಾರೆ.

ಟೆಂಡರ್ ಪ್ರಕ್ರಿಯೆಯ ಮೂಲಕ ಆಯ್ಕೆಯಾದ 13 ಪ್ರಮುಖ ಕಂಪನಿಗಳು ರಾಜ್ಯಾದ್ಯಂತ ಈ ಸೌರ ಪಂಪ್‌ಸೆಟ್‌ಗಳನ್ನು ಅಳವಡಿಸುವ ಕಾರ್ಯದಲ್ಲಿ ತೊಡಗಿವೆ .ರಾಜ್ಯದ ಎಲ್ಲಾ ಎಸ್ಕಾಂಗಳ ವ್ಯಾಪ್ತಿಯಲ್ಲಿ ಒಟ್ಟು 1,04,060 ಅರ್ಜಿಗಳು ಸಲ್ಲಿಕೆಯಾಗಿರುವುದು ರೈತರು ಇದಕ್ಕೆ ತೋರುತ್ತಿರುವ ಆಸಕ್ತಿಗೆ ಸಾಕ್ಷಿಯಾಗಿದೆ. ಬೆಸ್ಕಾಂ ಇದರಲ್ಲಿ ಮುಂಚೂಣಿಯಲ್ಲಿದ್ದು, ಇಲ್ಲಿ ಗರಿಷ್ಠ 10,057 ಸೌರ ಪಂಪ್‌ಗಳನ್ನು ಅಳವಡಿಸಲಾಗಿದೆ. ಕಲ್ಯಾಣ ಕರ್ನಾಟಕ ಭಾಗದ ಜೆಸ್ಕಾಂ ವ್ಯಾಪ್ತಿಯಲ್ಲಿ ಅತ್ಯಂತ ಕಡಿಮೆ, ಅಂದರೆ, 3,467 ಸೌರ ಪಂಪ್‌ಗಳು ಅಳವಡಿಕೆಯಾಗಿದ್ದು, ಮುಂಬರುವ ದಿನಗಳಲ್ಲಿ ಹೆಚ್ಚಿನ ಪ್ರಗತಿ ನಿರೀಕ್ಷಿಸಲಾಗಿದೆ. ಪ್ರಮುಖವಾಗಿ, ವಿದ್ಯುತ್ ಮಾರ್ಗಗಳಿಲ್ಲದ, ಟ್ರಾನ್ಸ್ ಫಾರ್ಮರ್ ಸಮಸ್ಯೆಯಿರುವ ತೋಟಗಳಿಗೆ ಆಫ್-ಗ್ರಿಡ್ ಮಾದರಿಯಲ್ಲಿ ಕುಸುಮ್-ಬಿ ಯೋಜನೆ ವರದಾನವಾಗಿದೆ ಎನ್ನುತ್ತವೆ ಎಸ್ಕಾಂ ಮೂಲಗಳು.

ಬೆಸ್ಕಾಂ ವ್ಯಾಪ್ತಿಯಲ್ಲಿ ಶೇ.78 ಪ್ರಗತಿ

ಕುಸುಮ್-ಬಿ ಯೋಜನೆಯಲ್ಲಿ ಬೆಸ್ಕಾಂ ವ್ಯಾಪ್ತಿಯ ಜಿಲ್ಲೆಗಳಲ್ಲಿ ಒಟ್ಟಾರೆ ಶೇಕಡಾ 78.28ರಷ್ಟು ಪ್ರಗತಿ ಸಾಧಿಸಲಾಗಿದೆ. ಚಿತ್ರದುರ್ಗ ಶೇಕಡಾ 87.08 ಪ್ರಗತಿ ಸಾಧಿಸಿ ಪ್ರಥಮ ಸ್ಥಾನದಲ್ಲಿದ್ದರೆ, ತುಮಕೂರು (3,565 ಪಂಪ್‌ಸೆಟ್) ಮತ್ತು ದಾವಣಗೆರೆ (2,383 ಪಂಪ್‌ಸೆಟ್) ನಂತರದ ಸ್ಥಾನಗಳಲ್ಲಿವೆ. ಹೊಸ ವಿಜಯನಗರ ಜಿಲ್ಲೆಯಲ್ಲಿ ಕೇವಲ ಶೇಕಡಾ 27.59 ಹಾಗೂ ಕೋಲಾರದಲ್ಲಿ ಶೇ. 49.04 ರಷ್ಟು ಪ್ರಗತಿಯಾಗಿದೆ. ಬಾಕಿ ಉಳಿದಿರುವ 2,788ಕ್ಕೂ ಹೆಚ್ಚು ಪಂಪ್‌ಸೆಟ್‌ಗಳ ಅಳವಡಿಕೆ ಕಾರ್ಯವನ್ನು ಶೀಘ್ರವಾಗಿ ಪೂರ್ಣಗೊಳಿಸಲಾಗುವುದು ಎನ್ನುತ್ತಾರೆ ಬೆಸ್ಕಾಂ ಅಧಿಕಾರಿಗಳು.

ಪ್ರಸ್ತುತ, ರಾಜ್ಯದಲ್ಲಿ ಒಟ್ಟಾರೆ ಎಲ್ಲಾ ಮೂಲಗಳಿಂದ ಉತ್ಪಾದನೆ ಆಗುತ್ತಿರುವ ವಿದ್ಯುತ್ ಪ್ರಮಾಣ 39,000 ಮೆಗಾವಾಟ್‌ನಷ್ಟಿದ್ದು, ಇದು 2030ರ ವೇಳೆಗೆ 66,000 ಮೆಗಾವಾಟ್‌ಗಳಾಗುವ ಅಂದಾಜಿದೆ. ಇದೇ ವೇಳೆ, ಪಿಎಂ-ಕುಸುಮ್ ಯೋಜನೆಯಡಿ ರಾಜ್ಯದಲ್ಲಿ 2,400ರಿಂದ 3,900 ಮೆಗಾವಾಟ್‌ಗಳಷ್ಟು ವಿದ್ಯುತ್ ಉತ್ಪಾದನೆಯ ಗುರಿ ಹಾಕಿಕೊಳ್ಳಲಾಗಿದೆ. ಇದು, ಪಳೆಯುಳಿಕೆ ಇಂಧನದಂತಹ ಡೀಸೆಲ್ ಪಂಪ್‌ಸೆಟ್‌ಗಳ ಮೇಲಿನ ಅವಲಂಬನೆ ತಗ್ಗಿಸುವುದಷ್ಟೇ ಅಲ್ಲದೆ ಸಾಂಪ್ರದಾಯಿಕ ವಿದ್ಯುತ್ ಉತ್ಪಾದನೆಯ ಹೊರೆಯನ್ನೂ ಇಳಿಸಲಿದೆ. ಹೀಗಾಗಿ, ಈ ಯೋಜನೆಯ ಪರಿಣಾಮಕಾರಿ ಅನುಷ್ಠಾನವು ಇಂಧನ ಸುಸ್ಥಿರತೆಯ ಜೊತೆಗೆ ಇಂಗಾಲದ ಹೊರಸೂಸುವಿಕೆ ತಗ್ಗಿಸುವಲ್ಲಿ ಮಹತ್ವದ ಪಾತ್ರ ವಹಿಸಲಿದೆ.

ಒಟ್ಟಾರೆ, ಪಿಎಂ-ಕುಸುಮ್ ಯೋಜನೆಯಡಿ ರಾಜ್ಯದಾದ್ಯಂತ ನಡೆಯುತ್ತಿರುವ ಕೃಷಿ ಪಂಪ್‌ಸೆಟ್‌ಗಳ ಸೌರೀಕರಣವು ರೈತರಿಗೆ ಹಗಲಿನಲ್ಲೇ ನಿರಂತರ ವಿದ್ಯುತ್ ಪೂರೈಸುವ ಜತೆಗೆ, ಸ್ಥಳೀಯವಾಗಿ ವಿದ್ಯುತ್ ಉತ್ಪಾದನೆ ಸಾಧ್ಯವಾಗಿಸಿ ಪ್ರಸರಣ ಜಾಲದ ಮೇಲಿನ ಒತ್ತಡ ಕಡಿತ, ಕಡಿಮೆ ದರದಲ್ಲಿ ವಿದ್ಯುತ್ ಖರೀದಿ ಹಾಗೂ ಸ್ವಚ್ಛ ಇಂಧನ ಬಳಕೆಗೆ ಅನುವು ಮಾಡಿಕೊಟ್ಟಿದೆ. ಚಿಕ್ಕಬಳ್ಳಾಪುರದ ಹಿರಿಯಣ್ಣನಹಳ್ಳಿ, ನಲ್ಲಿಮರದಹಳ್ಳಿ, ದೇವನಹಳ್ಳಿ ಹಾಗೂ ಕುಂದಾಣದ ಯೋಜನೆಗಳು ಯಶಸ್ವಿ ಅನುಷ್ಠಾನದ ಸ್ಪಷ್ಟ ಉದಾಹರಣೆಗಳಾಗಿವೆ.

Downloaded From:www.kpscvaani.com



ಮುಂಚೂಣಿ ವಿದೇಶಿ ವಿ.ವಿ.ಗಳಲ್ಲಿ ಅಧ್ಯಯನ:
ಜಾಗತಿಕ ಉನ್ನತ ಶಿಕ್ಷಣಕ್ಕೆ 'ಸ್ಟಡಿ ಅಬ್ರಾಡ್' ಉಪಕ್ರಮ



ನವೀನ್ ಕುಮಾರ್

ವಿದೇಶಗಳ ಹೆಸರಾಂತ ವಿಶ್ವವಿದ್ಯಾಲಯಗಳಲ್ಲಿ ಉನ್ನತ ಶಿಕ್ಷಣ ಪಡೆಯಲು ಬಯಸುವ ವಿದ್ಯಾರ್ಥಿಗಳಿಗೆ ಜಾಗತಿಕ ಶಿಕ್ಷಣದ ಅವಕಾಶಗಳನ್ನು ಲಭ್ಯವಾಗಿಸಲು ಬೆಂಬಲ ಒದಗಿಸುವಲ್ಲಿ ಕರ್ನಾಟಕ ಸರ್ಕಾರವು 'ಸ್ಟಡಿ ಅಬ್ರಾಡ್' (Study Abroad) ಉಪಕ್ರಮದ ಮೂಲಕ ಮಹತ್ವದ ಹೆಜ್ಜೆಗಳನ್ನು ಇರಿಸುತ್ತಿದೆ. ರಾಜ್ಯದ ವಿದ್ಯಾರ್ಥಿಗಳಿಗೆ ಜಾಗತಿಕ ಶಿಕ್ಷಣ ಸಂಸ್ಥೆಗಳನ್ನು ಪರಿಚಯಿಸುವ ಜೊತೆಗೆ ಶೈಕ್ಷಣಿಕ ಮಾರ್ಗದರ್ಶನ, ಆರ್ಥಿಕ ನೆರವು ಸೇರಿದಂತೆ ವಿವಿಧ ರೀತಿಯ ಅಗತ್ಯವಿರುವ ಸಹಾಯವನ್ನು ಒಂದೇ ವೇದಿಕೆಯಡಿ ಕಲ್ಪಿಸಲು ಇದು ಸಹಕಾರಿಯಾಗಿದೆ.

ಕೌಶಲ್ಯಾಭಿವೃದ್ಧಿ, ಉದ್ಯಮಶೀಲತೆ ಮತ್ತು ಜೀವನೋಪಾಯ ಇಲಾಖೆಯಡಿ ಕರ್ನಾಟಕ ವೃತ್ತಿಪರ ತರಬೇತಿ ಮತ್ತು ಕೌಶಲ್ಯಾಭಿವೃದ್ಧಿ ನಿಗಮ (ಕೆವಿಟಿಎಸ್‌ಡಿಸಿ) ಮೂಲಕ 2025ರ ಆಗಸ್ಟ್‌ನಲ್ಲಿ ಆರಂಭಗೊಂಡ ಈ ಉಪಕ್ರಮವು ವಿದೇಶಿ ಶಿಕ್ಷಣವನ್ನು ವಿದ್ಯಾರ್ಥಿಗಳಿಗೆ ಹೆಚ್ಚು ಸುಲಭವಾಗಿ ಮತ್ತು ಪಾರದರ್ಶಕವಾಗಿ ಲಭ್ಯವಾಗಿಸುವ ಜೊತೆಗೆ ಖಾಸಗಿ ಶಿಕ್ಷಣ ಸಲಹೆಗಾರರು ಹಾಗೂ ಮಧ್ಯವರ್ತಿಗಳಿಂದ ಎದುರಾಗಬಹುದಾದ ಅಪಾಯಗಳು ಮತ್ತು ಹೆಚ್ಚಿನ ವೆಚ್ಚಗಳಿಂದ ವಿದ್ಯಾರ್ಥಿಗಳನ್ನು ರಕ್ಷಿಸುವ ಉದ್ದೇಶ ಹೊಂದಿದೆ.

Downloaded From:www.kpscvaani.com

ಒಂದೇ ವೇದಿಕೆ ಮೂಲಕ ಸಮಗ್ರ ಬೆಂಬಲ

'ಸ್ಟಡಿ ಅಬ್ರಾಡ್' ವೇದಿಕೆ ಮೂಲಕ ವಿದ್ಯಾರ್ಥಿಗಳು ವಿವಿಧ ವಿಶ್ವವಿದ್ಯಾಲಯಗಳು ಮತ್ತು ಕೋರ್ಸುಗಳ ಬಗ್ಗೆ ಮಾಹಿತಿ ಪಡೆಯಬಹುದು; ವಿದೇಶಿ ವಿಶ್ವವಿದ್ಯಾಲಯಗಳ ಪ್ರತಿನಿಧಿಗಳೊಂದಿಗೆ ನೇರವಾಗಿ ಸಂವಾದ ನಡೆಸಬಹುದು; ಅಲ್ಲದೇ, ವಿದೇಶದಲ್ಲಿ ಉನ್ನತ ಶಿಕ್ಷಣಕ್ಕೆ ಅರ್ಜಿ ಸಲ್ಲಿಸುವ ಪ್ರಕ್ರಿಯೆಯ ಬಗ್ಗೆಯೂ ಮಾರ್ಗದರ್ಶನವನ್ನೂ ಪಡೆಯಬಹುದು.

ಈ ಉಪಕ್ರಮದಡಿ ಉಚಿತ ಸಮಾಲೋಚನೆ ಮತ್ತು ಶೈಕ್ಷಣಿಕ ಮಾರ್ಗದರ್ಶನ ದೊರೆಯುತ್ತದೆ. ವಿಶ್ವವಿದ್ಯಾಲಯ ಆಯ್ಕೆ, ಅರ್ಜಿ ಸಲ್ಲಿಕೆ, ಉದ್ದೇಶ ಪತ್ರ (Statement of Purpose), ದಾಖಲೆಗಳ ಸಿದ್ಧತೆ ಹಾಗೂ ಪ್ರವೇಶ ಪ್ರಕ್ರಿಯೆಯ ಇತರ ಹಂತಗಳಲ್ಲಿ ವಿದ್ಯಾರ್ಥಿಗಳಿಗೆ ನೆರವು ನೀಡಲಾಗುತ್ತದೆ. ಐಇಎಲ್‌ಟಿಎಸ್ (IELTS), ಟೊಫೆಲ್ (TOEFL) ಮತ್ತು ಪಿಟಿಇಯಂತಹ (PTE) ಭಾಷಾ ನೈಪುಣ್ಯ ಪರೀಕ್ಷೆಗಳ ಜೊತೆಗೆ ವೀಸಾ ಸಂಬಂಧಿತ ಸಿದ್ಧತೆಗೂ ಮಾರ್ಗದರ್ಶನ ಒದಗಿಸಲಾಗುತ್ತದೆ.

'ಸ್ಟಡಿ ಅಬ್ರಾಡ್' ಎಕ್ಸ್ಪೋ ಮತ್ತಿತರ ಕಾರ್ಯಕ್ರಮಗಳ ಮೂಲಕ ವಿದ್ಯಾರ್ಥಿಗಳು ಹಾಗೂ ವಿದೇಶಿ ವಿಶ್ವವಿದ್ಯಾಲಯಗಳ ನಡುವೆ ನೇರ ಸಂಪರ್ಕ ಕಲ್ಪಿಸುವ ಮೂಲಕ ಮಧ್ಯವರ್ತಿಗಳ ಮೇಲಿನ ಅವಲಂಬನೆಯನ್ನು ಕಡಿಮೆ ಮಾಡುವುದಕ್ಕೂ ಈ ಉಪಕ್ರಮ ಅನುಕೂಲಕರವಾಗಿದೆ.

ಶಿಷ್ಯವೇತನ, ಶಿಕ್ಷಣ ಸಾಲ

ಆರ್ಥಿಕ ನೆರವು ಈ ಕಾರ್ಯಕ್ರಮದ ಮತ್ತೊಂದು ಪ್ರಮುಖ ಅಂಶವಾಗಿದೆ. ಭಾಗವಹಿಸುವ ವಿಶ್ವವಿದ್ಯಾಲಯಗಳು ವಿವಿಧ ಶಿಷ್ಯವೇತನಗಳ ಅವಕಾಶಗಳನ್ನು ಒದಗಿಸಲಿದ್ದು, ಅನ್ವಯವಾಗುವ ಸಂದರ್ಭಗಳಲ್ಲಿ ಶೇಕಡಾ 50ರವರೆಗೂ ಶಿಷ್ಯವೇತನ ಪಡೆಯುವ ಅವಕಾಶಗಳಿರುತ್ತವೆ.

ವಿದೇಶಿ ಶಿಕ್ಷಣಕ್ಕೆ ಸಂಬಂಧಿಸಿದ ಬೋಧನಾ ಶುಲ್ಕ, ಜೀವನ ನಿರ್ವಹಣಾ ವೆಚ್ಚ ಹಾಗೂ ಇತರ ಅಗತ್ಯ ವೆಚ್ಚಗಳನ್ನು ಭರಿಸಲು ಅನುಕೂಲವಾಗುವಂತೆ, ರೂ 2 ಕೋಟಿಯವರೆಗೆ ಶಿಕ್ಷಣ ಸಾಲ ಒದಗಿಸಲು ಪಾಲುದಾರ ಬ್ಯಾಂಕುಗಳನ್ನೂ ಈ ಉಪಕ್ರಮದೊಂದಿಗೆ ಸಂಯೋಜನೆಗೊಳಿಸಲಾಗಿದೆ.

ಸರ್ಕಾರವು ನಿರ್ದಿಷ್ಟ ಶಿಕ್ಷಣ ಸಂಸ್ಥೆಗಳೊಂದಿಗೆ ಒಪ್ಪಂದಗಳನ್ನೂ ಮಾಡಿಕೊಂಡಿದೆ. ಉದಾಹರಣೆಗೆ, ಆಸ್ಟ್ರೇಲಿಯಾದ ಕ್ವೀನ್ಸ್‌ಲ್ಯಾಂಡ್ ವಿಶ್ವವಿದ್ಯಾಲಯದೊಂದಿಗಿನ ಒಪ್ಪಂದದಡಿ ಅರ್ಹ ವಿದ್ಯಾರ್ಥಿಗಳು ಶೇಕಡಾ 25ರಷ್ಟು ಶಿಷ್ಯವೇತನ ಪಡೆಯಬಹುದಾಗಿದೆ.

ಅರ್ಹತೆಯೇ ಮಾನದಂಡ

'ಸ್ಟಡಿ ಅಬ್ರಾಡ್' ವೇದಿಕೆಯ ಸೌಲಭ್ಯವು ಸರ್ಕಾರಿ ಶಿಕ್ಷಣ ಸಂಸ್ಥೆಗಳಲ್ಲಿ ವ್ಯಾಸಂಗ ಮಾಡಿದ ವಿದ್ಯಾರ್ಥಿಗಳಿಗೆ ಮಾತ್ರ ಸೀಮಿತವಾಗಿರದೆ ಯಾವುದೇ ಸಂಸ್ಥೆಯಲ್ಲಿ ಕಲಿತವರು ಇದರ ಪ್ರಯೋಜನ ಪಡೆಯಬಹುದಾಗಿದೆ. ರಾಜ್ಯದ ನಿವಾಸ ಪ್ರಮಾಣಪತ್ರ ಹೊಂದಿರುವ ಹಾಗೂ ನಿಗದಿತ ಶೈಕ್ಷಣಿಕ ಮತ್ತು ಆರ್ಥಿಕ ಅರ್ಹತೆಗಳನ್ನು ಹೊಂದಿರುವ ವಿದ್ಯಾರ್ಥಿಗಳೆಲ್ಲರೂ ಇದನ್ನು ಬಳಸಿಕೊಳ್ಳಬಹುದಾಗಿದೆ.

ಮತ್ತೊಂದೆಡೆ, ಸರ್ಕಾರವು ವಿವಿಧ ಇಲಾಖೆಗಳ ಮೂಲಕ ಪ್ರತ್ಯೇಕ ವಿದೇಶಿ ಶಿಕ್ಷಣ ಶಿಷ್ಯವೇತನ ನೆರವುಗಳನ್ನೂ ನೀಡುತ್ತಿದ್ದು, ಸಾಮಾನ್ಯವಾಗಿ ಸಾಮಾಜಿಕ ವರ್ಗ, ಅರ್ಹತೆ ಮತ್ತು ಕುಟುಂಬದ ಆದಾಯದಂತಹ ಅಂಶಗಳ ಆಧಾರದ ಮೇಲೆ ಈ ಅರ್ಹತೆ ನಿರ್ಧಾರವಾಗುತ್ತದೆ. ಇನ್ನು, ಪರಿಶಿಷ್ಟ ಜಾತಿ/ಪರಿಶಿಷ್ಟ ಪಂಗಡ, ಅಲ್ಪಸಂಖ್ಯಾತ ಹಾಗೂ ಹಿಂದುಳಿದ ವರ್ಗಗಳ ವಿದ್ಯಾರ್ಥಿಗಳು ಆಯಾ ಇಲಾಖೆಗಳ ಶಿಷ್ಯವೇತನ ಮತ್ತು ಆರ್ಥಿಕ ನೆರವು ಯೋಜನೆಗಳನ್ನು ಅವುಗಳಿಗೆ ನಿಗದಿಪಡಿಸಿರುವ ಅರ್ಹತಾ ಷರತ್ತುಗಳಿಗೆ ಒಳಪಟ್ಟು ಪಡೆಯಬಹುದಾಗಿದೆ.

ಹಲವು ದೇಶಗಳು, ಬಗೆಬಗೆಯ ಕೋರ್ಸುಗಳು

ಈ ಉಪಕ್ರಮವು ಯುಕೆ, ಅಮೆರಿಕ, ಆಸ್ಟ್ರೇಲಿಯಾ, ಐರ್ಲೆಂಡ್, ಫಿನ್ಲೆಂಡ್ ಮತ್ತು ಇಟಲಿ ಸೇರಿದಂತೆ ವಿವಿಧ ದೇಶಗಳ ವಿಶ್ವವಿದ್ಯಾಲಯಗಳಲ್ಲಿ ಅಧ್ಯಯನ ಮಾಡುವ ಅವಕಾಶವನ್ನು ಸುಲಭಗೊಳಿಸುತ್ತದೆ. ಎಂಜಿನಿಯರಿಂಗ್, ತಂತ್ರಜ್ಞಾನ, ವ್ಯವಹಾರ ನಿರ್ವಹಣೆ,



Downloaded From:www.kpscvaani.com

ಮಾನವಿಕ ವಿಷಯಗಳು, ವೈದ್ಯಕೀಯ, ವಿಜ್ಞಾನ ಸೇರಿದಂತೆ ವಿವಿಧ ಕ್ಷೇತ್ರಗಳಲ್ಲಿನ ಕೋರ್ಸುಗಳನ್ನು ವಿದ್ಯಾರ್ಥಿಗಳು ಆಯ್ಕೆ ಮಾಡಿಕೊಳ್ಳಬಹುದು. ಕೋರ್ಸಿನ ಸ್ವರೂಪ, ವೆಚ್ಚ ಹಾಗೂ ವಿದ್ಯಾರ್ಥಿ ಬಯಸುವ ಶೈಕ್ಷಣಿಕ ಪರಿಣತಿ ಮತ್ತಿತರ ಅಂಶಗಳನ್ನು ಆಧರಿಸಿ ಸೂಕ್ತ ದೇಶವನ್ನು ಆಯ್ಕೆ ಮಾಡಿಕೊಳ್ಳಲು ಕಾರ್ಯಕ್ರಮದಡಿ ಮಾರ್ಗದರ್ಶನವೂ ದೊರೆಯುತ್ತದೆ.

ಜರ್ಮನಿಯಂತಹ ದೇಶಗಳಲ್ಲಿನ ತುಲನಾತ್ಮಕವಾಗಿ ಕಡಿಮೆ ವೆಚ್ಚದ ಸಾರ್ವಜನಿಕ ವಿಶ್ವವಿದ್ಯಾಲಯಗಳ ಆಯ್ಕೆಗಳು, ಆಸ್ಟ್ರೇಲಿಯಾ, ಯುಕೆ, ಅಮೆರಿಕ ಮತ್ತು ಕೆನಡಾಗಳಲ್ಲಿರುವ ವ್ಯಾಪಕ ಶ್ರೇಣಿಯ ಕೋರ್ಸುಗಳು. ಐರ್ಲೆಂಡ್ ಮತ್ತು ಕೆಲವು ಪೂರ್ವ ಯುರೋಪ್ ದೇಶಗಳಲ್ಲಿರುವ ತಂತ್ರಜ್ಞಾನ ಹಾಗೂ ವ್ಯವಹಾರ ನಿರ್ವಹಣೆಯ ಕೋರ್ಸುಗಳು, ವೈದ್ಯಕೀಯ ಶಿಕ್ಷಣ ಬಯಸುವ ವಿದ್ಯಾರ್ಥಿಗಳಿಗೆ ರಷ್ಯಾ ಮತ್ತು ಫಿಲಿಪೈನ್ಸ್‌ಗಳಲ್ಲಿರುವ ಆಯ್ಕೆಗಳು ಹೀಗೆ ಸಾಕಷ್ಟು ಮಾಹಿತಿಯನ್ನು ಈ ಮೂಲಕ ಪಡೆಯಬಹುದಾಗಿದೆ.

ಆರಂಭದಿಂದ ಅಂತ್ಯದವರೆಗೆ ನೆರವು

ವಿದೇಶಿ ವಿಶ್ವವಿದ್ಯಾಲಯವನ್ನು ಆಯ್ಕೆ ಮಾಡಿಕೊಡುವುದಕ್ಕೆ ಮಾತ್ರ ಈ ಉಪಕ್ರಮ ಸೀಮಿತವಾಗಿಲ್ಲ. ಶೈಕ್ಷಣಿಕ ಯೋಜನೆ ರೂಪಿಸುವುದು, ಅರ್ಜಿ ಸಲ್ಲಿಕೆ, ದಾಖಲೆಗಳ ಸಿದ್ಧತೆ, ವೀಸಾ ಸಿದ್ಧತೆ ಮತ್ತು ಆರ್ಥಿಕ ಯೋಜನೆ ಸೇರಿದಂತೆ ವಿದೇಶಿ ಶಿಕ್ಷಣದ ವಿವಿಧ ಹಂತಗಳಲ್ಲಿ ವಿದ್ಯಾರ್ಥಿಗಳಿಗೆ ಮಾರ್ಗದರ್ಶನ ಕೂಡ ದೊರೆಯುತ್ತದೆ. ವಿದ್ಯಾರ್ಥಿಗಳು ವಿದೇಶಕ್ಕೆ ತೆರಳಿದ ಬಳಿಕವೂ ಅವರ ಕಲಿಕೆಯ ಅವಧಿಯಲ್ಲಿ ಅವರ ಯೋಗಕ್ಷೇಮ ಸಂಬಂಧಿತ ನೆರವು ಮತ್ತು ಶೈಕ್ಷಣಿಕ ಮೇಲ್ವಿಚಾರಣೆ ಸೇರಿದಂತೆ ನಿರಂತರ ಬೆಂಬಲ ಸಿಗಲಿದೆ.

ವಿದ್ಯಾರ್ಥಿಗಳು ಮತ್ತು ಪೋಷಕರು ಅಧಿಕೃತ 'ಸ್ಟಡಿ ಅಬ್ರಾಡ್ ಕರ್ನಾಟಕ' ವೇದಿಕೆಯನ್ನು ಬಳಸಿಕೊಂಡು ಭಾಗವಹಿಸುವ ವಿಶ್ವವಿದ್ಯಾಲಯಗಳು, ಕೋರ್ಸುಗಳು, ಅರ್ಹತಾ ಮಾನದಂಡಗಳು ಮತ್ತು ಲಭ್ಯವಿರುವ ನೆರವಿನ ಬಗ್ಗೆ ಮಾಹಿತಿ ಪಡೆಯಬಹುದು. ಅಲ್ಲದೆ, ಅರ್ಜಿ ಸಲ್ಲಿಕೆ ಪ್ರಕ್ರಿಯೆಯನ್ನೂ ಆರಂಭಿಸಬಹುದು.

80ಕ್ಕೂ ಹೆಚ್ಚು ವಿಶ್ವವಿದ್ಯಾಲಯಗಳು, 300ಕ್ಕೂ ಅಧಿಕ ವಿಷಯಗಳು, ಶಿಷ್ಯವೇತನದ ಅವಕಾಶಗಳು, ಶಿಕ್ಷಣ ಸಾಲ ಮತ್ತು ಉಚಿತ ಸರ್ಕಾರಿ ನೆರವಿನ ಸಮಾಲೋಚನೆಯೊಂದಿಗೆ ರಾಜ್ಯದ ವಿದ್ಯಾರ್ಥಿಗಳಿಗೆ ವಿದೇಶಿ ಉನ್ನತ ಶಿಕ್ಷಣವನ್ನು ಹೆಚ್ಚು ಪಾರದರ್ಶಕ ಮತ್ತು ಸುಲಭವಾಗಿ ಲಭ್ಯವಾಗಿಸಿ ಕರ್ನಾಟಕವನ್ನು ಜ್ಞಾನ ಸಂಪನ್ಮೂಲ ನಿಧಿಯನ್ನಾಗಿಸುವುದು ಈ ಉಪಕ್ರಮದ ಆಶಯವಾಗಿದೆ.

3145 ವಿದ್ಯಾರ್ಥಿಗಳಿಗೆ ವಿದೇಶಗಳಲ್ಲಿ ವ್ಯಾಸಂಗಕ್ಕೆ ಅವಕಾಶ: ಮುಖ್ಯಮಂತ್ರಿ

ಬೆಂಗಳೂರು: 'ನಮ್ಮ ರಾಜ್ಯವು ಪ್ರತಿಭಾವಂತ ಮಾನವ ಸಂಪನ್ಮೂಲದಲ್ಲಿ ದೇಶದಲ್ಲೇ ಮುಂಚೂಣಿಯಲ್ಲಿದ್ದು, ಇಲ್ಲಿನ ವಿದ್ಯಾರ್ಥಿಗಳಿಗೆ ಜಾಗತಿಕ ಮಟ್ಟದಲ್ಲಿ ಕಲಿಯಲು ಅವಕಾಶಗಳು ಸುಲಭವಾಗಿ ಲಭ್ಯವಾಗುವಂತಾಗಬೇಕು ಎಂಬುದು ಸರ್ಕಾರದ ಇರಾದೆಯಾಗಿದೆ ಎಂದು ಮುಖ್ಯಮಂತ್ರಿ ಡಿ.ಕೆ.ಶಿವಕುಮಾರ್ ಹೇಳಿದರು.

ಕೌಶಲ ಅಭಿವೃದ್ಧಿ ಇಲಾಖೆಯು ನಗರದ ಅರಮನೆ ಮೈದಾನದಲ್ಲಿ ಸೆ.6ರ ಭಾನುವಾರ ಆಯೋಜಿಸಿದ್ದ 'ವಿದೇಶದಲ್ಲಿ ಅಧ್ಯಯನ 2026' (ಸ್ಟಡಿ ಅಬ್ರಾಡ್–2026) ಕಾರ್ಯಕ್ರಮಕ್ಕೆ ಚಾಲನೆ ನೀಡಿ ಮಾತನಾಡಿದ ಅವರು, "ಜ್ಞಾನದ ಮೇಲಿನ ಹೂಡಿಕೆ ಅತ್ಯುತ್ತಮ ಆಸ್ತಿಯಾಗುತ್ತದೆ. ಮಾನವನಿಗೆ ಎಲ್ಲೆಗಳಿವೆ. ಆದರೆ, ಜ್ಞಾನಕ್ಕೆ ಎಲ್ಲೆ ಇಲ್ಲ" ಎಂದರು.

"ನಮ್ಮ ಮಕ್ಕಳಿಗೆ ವಿದೇಶದಲ್ಲಿ ವ್ಯಾಸಂಗದ ಅವಕಾಶಗಳನ್ನು ಹೆಚ್ಚಿಸುವ ಹಾಗೂ ಸುಲಭವಾಗಿಸುವುದರ ಭಾಗವಾಗಿ ಹೊಸದಾಗಿ ಕ್ಲೀನ್ಸ್‌ಲ್ಯಾಂಡ್ ವಿಶ್ವವಿದ್ಯಾಲಯದೊಂದಿಗೆ ಒಡಂಬಡಿಕೆ ಮಾಡಿಕೊಳ್ಳಲಾಗಿದೆ. ಈವರೆಗೆ, 'ಸ್ಟಡಿ ಅಬ್ರಾಡ್' ಉಪಕ್ರಮದ ಮೂಲಕ 3,145 ವಿದ್ಯಾರ್ಥಿಗಳು ವಿದೇಶದ ವಿಶ್ವವಿದ್ಯಾಲಯಗಳಲ್ಲಿ ವ್ಯಾಸಂಗಕ್ಕೆ ಅನುಕೂಲ ಪಡೆದಿದ್ದಾರೆ' ಎಂದರು.

'ಬೆಂಗಳೂರಿನಲ್ಲಿ 1.40 ಕೋಟಿ ಜನಸಂಖ್ಯೆ ಇದೆ. ಭಾರತದಲ್ಲಿ 140 ಅಂತಾರಾಷ್ಟ್ರೀಯ ಶಾಲೆಗಳಿದ್ದರೆ, ಬೆಂಗಳೂರಿನಲ್ಲಿ 38 ಅಂತಾರಾಷ್ಟ್ರೀಯ ಶಾಲೆಗಳಿವೆ. ಕರ್ನಾಟಕವು ದೇಶದಲ್ಲಿ ಜ್ಞಾನದ ಕೇಂದ್ರವಾಗಿದೆ. ವಿದ್ಯಾರ್ಥಿಗಳು ನಮ್ಮ ಆಸ್ತಿಯಾಗಿದ್ದು, ಇವರ ಚುರುಕುತನವನ್ನು ಇಡೀ ವಿಶ್ವವೇ ಗಮನಿಸುತ್ತಿದೆ' ಎಂದು ಹೇಳಿದರು.

"ಜಾಗತಿಕ ಮಟ್ಟದ ಶಿಕ್ಷಣಕ್ಕೆ ದೊರೆಯುವ ಅವಕಾಶವು ವಿದ್ಯಾರ್ಥಿಗಳಲ್ಲಿ ಆತ್ಮವಿಶ್ವಾಸವನ್ನು ಹೆಚ್ಚಿಸುವ ಜೊತೆಗೆ ಅವರನ್ನು ಮಾನಸಿಕವಾಗಿ ಸದೃಢರನ್ನಾಗಿಸುತ್ತದೆ. ನಮ್ಮ ಮಕ್ಕಳು ಕೆಲಸ ಮಾಡುವ ಸಂಸ್ಥೆಗಳಲ್ಲಿ ಉತ್ತಮ ಉದ್ಯೋಗಿಗಳು ಎಂದು ಹೆಸರು ಪಡೆಯುವ ಜೊತೆಗೆ ಹೊಸ ಉದ್ಯಮಗಳನ್ನು ಕಟ್ಟಿ ಉದ್ಯೋಗದಾತರಾಗುವ ಬಗ್ಗೆಯೂ ಚಿಂತಿಸಬೇಕು" ಎಂದು ಮುಖ್ಯಮಂತ್ರಿಗಳು ಅಭಿಪ್ರಾಯಪಟ್ಟರು.

ಕ್ಯಾಲಿಫೋರ್ನಿಯಾದ ಸಿಲಿಕಾನ್ ವ್ಯಾಲಿಯಲ್ಲಿ ಐ.ಟಿ. ವೃತ್ತಿಪರರ ಸಂಖ್ಯೆ ಸುಮಾರು 16 ಲಕ್ಷ ಇದ್ದರೆ, ಬೆಂಗಳೂರಿನಲ್ಲಿ ಇವರ ಸಂಖ್ಯೆ ಸುಮಾರು 26 ಲಕ್ಷದಷ್ಟಿದೆ. ರಾಜ್ಯದಲ್ಲಿ ಪ್ರತಿವರ್ಷ ಒಂದು ಲಕ್ಷಕ್ಕೂ ಹೆಚ್ಚು ಎಂಜಿನಿಯರ್‌ಗಳು ಮತ್ತು 13,940 ವೈದ್ಯರು ಹೊರಬರುತ್ತಿದ್ದಾರೆ ಎಂದರು.

ವಿದೇಶಿ ಶಿಕ್ಷಣವು ಭಾರತದ ಅಭಿವೃದ್ಧಿಗೆ ನೀಡಿರುವ ಕೊಡುಗೆಯನ್ನು ಪ್ರಸ್ತಾಪಿಸಿದ ಮುಖ್ಯಮಂತ್ರಿ, ಮಹಾತ್ಮ ಗಾಂಧೀಜಿ ಮತ್ತು ಡಾ. ಬಿ.ಆರ್. ಅಂಬೇಡ್ಕರ್ ಅವರಂತಹ ನಾಯಕರು ವಿದೇಶದಲ್ಲಿ ವ್ಯಾಸಂಗ ಮಾಡಿ, ಬಳಿಕ ತಾವು ಗಳಿಸಿದ ಜ್ಞಾನವನ್ನು ದೇಶದ ಸೇವೆಗೆ ಬಳಸಿಕೊಂಡ ಉದಾಹರಣೆಯನ್ನು ನೀಡಿದರು. ವಿದೇಶದಲ್ಲಿ ಉತ್ತಮ ಅವಕಾಶಗಳನ್ನು ಅರಸಿದರೂ ತಮ್ಮ ಬೇರುಗಳನ್ನು ಮರೆಯದೆ ಪೋಷಕರು ಹಾಗೂ ಶಿಕ್ಷಕರೊಂದಿಗೆ ನಂಟು ಉಳಿಸಿಕೊಳ್ಳಬೇಕು ಎಂದು ಕಿವಿಮಾತು ನುಡಿದರು. ಸಚಿವ ಶರಣಪ್ರಕಾಶ ಪಾಟೀಲ ಅವರ ನೇತೃತ್ವದಲ್ಲಿ ಸಾಗರೋತ್ತರ ಜ್ಞಾನವನ್ನು ಬೆಸೆಯುವ ಕಾರ್ಯ ಪರಿಣಾಮಕಾರಿಯಾಗಿ ನಡೆಯುತ್ತಿದೆ ಎಂದು ಮೆಚ್ಚುಗೆಯ ಮಾತುಗಳನ್ನೂ ಆಡಿದರು.

ಕೌಶಲಾಭಿವೃದ್ಧಿ ಸಚಿವ ಶರಣಪ್ರಕಾಶ ಪಾಟೀಲ ಮತ್ತಿತರರು ಕಾರ್ಯಕ್ರಮದಲ್ಲಿ ಉಪಸ್ಥಿತರಿದ್ದರು.

Downloaded From:www.kpscvaani.com



ಮರುಕಳಿಸಿದ ವೈಭವ ಮೂಡಿದ ಭರವಸೆ

ಜಡಿಯಪ್ಪ ಗೆದ್ದಗಟ್ಟಿ

ಬ್ರಿಟಿಷರಿಂದ ಭಾರತಕ್ಕೆ 1947ರ ಆಗಸ್ಟ್ 15ರಂದು ಸ್ವಾತಂತ್ರ್ಯ ದೊರೆತರೂ, ಹೈದರಾಬಾದ್ ನಿಜಾಮನ ಕಪಿಮುಷ್ಟಿಯಲ್ಲಿದ್ದ ಕಲ್ಯಾಣ ಕರ್ನಾಟಕ ಭಾಗವು ವಿಮೋಚನೆ ಕಂಡಿದ್ದು 1948ರ ಸೆಪ್ಟೆಂಬರ್ 17ರಂದು. ಸರ್ದಾರ್ ವಲ್ಲಭಭಾಯಿ ಪಟೇಲರ ದಿಟ್ಟ ನಿರ್ಧಾರ ಹಾಗೂ ಸ್ಥಳೀಯ ದೇಶಪ್ರೇಮಿಗಳ ತ್ಯಾಗದಿಂದ ಭಾರತದ ಒಕ್ಕೂಟಕ್ಕೆ ಸೇರ್ಪಡೆಯಾದ ಈ ಐತಿಹಾಸಿಕ ದಿನವನ್ನು ಪ್ರತಿ ವರ್ಷ 'ಕಲ್ಯಾಣ ಕರ್ನಾಟಕ ಉತ್ಸವ'ವನ್ನಾಗಿ ಆಚರಿಸಲಾಗುತ್ತದೆ.

ಈ ಬಾರಿಯ '79ನೇ ಕಲ್ಯಾಣ ಕರ್ನಾಟಕ ಉತ್ಸವ 2026' ಕೇವಲ ಇತಿಹಾಸದ ನೆನಪಾಗುಳಿಯದೆ, ಸೆಪ್ಟೆಂಬರ್ 16 ಮತ್ತು 17ರಂದು ಎರಡು ದಿನಗಳ ಕಾಲ ಕಲಬುರಗಿ ನಗರದ ಹೃದಯ ಭಾಗದಲ್ಲಿರುವ ಅಪ್ಪನ ಕೆರೆ, ಪಬ್ಲಿಕ್ ಗಾರ್ಡನ್ ಹಾಗೂ ಎಸ್.ಎಮ್. ಪಂಡಿತ್ ರಂಗಮಂದಿರದಲ್ಲಿ ವಿವಿಧ ಸಾಂಸ್ಕೃತಿಕ ಕಾರ್ಯಕ್ರಮಗಳನ್ನು ಹಮ್ಮಿಕೊಳ್ಳುವ ಮೂಲಕ ಜನರ ಹಬ್ಬವಾಗಿ ಆಚರಿಸಲ್ಪಟ್ಟಿತು.

ಇತಿಹಾಸದ ನೆನಪು ಹಾಗೂ ಗೌರವ ಸಮರ್ಪಣೆ

ಕಲಬುರಗಿ, ಬೀದರ್, ಯಾದಗಿರಿ, ರಾಯಚೂರು, ಕೊಪ್ಪಳ, ಬಳ್ಳಾರಿ ಮತ್ತು ವಿಜಯನಗರ–ಈ ಏಳು ಜಿಲ್ಲೆಗಳನ್ನೊಳಗೊಂಡ ಕಲ್ಯಾಣ ಕರ್ನಾಟಕವು 12ನೇ ಶತಮಾನದ ಬಸವಾದಿ ಶರಣರ ವೈಚಾರಿಕ ಕ್ರಾಂತಿ ಹಾಗೂ ವಿಮೋಚನಾ ಹೋರಾಟದ ನೆಲವಾಗಿತ್ತು.

ಈ ಬಾರಿ ಉತ್ಸವವನ್ನು ರಾಷ್ಟ್ರೀಯ ಹಬ್ಬದ ಮಾದರಿಯಲ್ಲಿ ಆಚರಿಸಿದ್ದು ವಿಶೇಷವಾಗಿತ್ತು. ಸರ್ಕಾರ ಈ ಏಳು ಜಿಲ್ಲೆಗಳ ಉಸ್ತುವಾರಿ ಸಚಿವರಿಗೆ ಸೆಪ್ಟೆಂಬರ್ 17ರಂದು ಜಿಲ್ಲಾ ಕೇಂದ್ರಗಳಲ್ಲಿ ಧ್ವಜಾರೋಹಣ ನೆರವೇರಿಸಲು ತಿಳಿಸಿ ಆದೇಶ ಹೊರಡಿಸಿತ್ತು.

Downloaded From:www.kpscvaani.com

ಸೆಪ್ಟೆಂಬರ್ 17ರ ಬೆಳಿಗ್ಗೆ ಉತ್ಸವದ ಅಂಗವಾಗಿ ಕಲಬುರಗಿಯ ತಿಮ್ಮಾಪುರ ವೃತ್ತದಲ್ಲಿರುವ ಸರ್ದಾರ್ ವಲ್ಲಭಭಾಯಿ ಪಟೇಲರ ಪುತ್ಥಳಿಗೆ ಮಾನ್ಯ ಮುಖ್ಯಮಂತ್ರಿ ಡಿ.ಕೆ ಶಿವಕುಮಾರ್ ಹಾಗೂ ಜಿಲ್ಲಾ ಉಸ್ತುವಾರಿ ಸಚಿವ ಪ್ರಿಯಾಂಕ್ ಖರ್ಗೆ ಅವರು ಪುಷ್ಪನಮನ ಸಲ್ಲಿಸಿದರು. ನಂತರ ನಗರದ ಪೊಲೀಸ್ ಪರೇಡ್ ಮೈದಾನದಲ್ಲಿ ಮುಖ್ಯಮಂತ್ರಿ ಡಿ.ಕೆ. ಶಿವಕುಮಾರ್ ಅವರು ರಾಷ್ಟ್ರ ಧ್ವಜಾರೋಹಣ ನೆರವೇರಿಸಿ, ನಾಡಿನ ಧೀರ ಹೋರಾಟಗಾರರ ತ್ಯಾಗ ಬಲಿದಾನವನ್ನು ಸ್ಮರಿಸಿದರು.

ಜನಮನ ಸೆಳೆದ ಸಾಂಸ್ಕೃತಿಕ ಕಾರ್ಯಕ್ರಮಗಳು

ಸೆಪ್ಟೆಂಬರ್ 16 ಮತ್ತು 17ರಂದು ಕಲಬುರಗಿ ನಗರದ ವಿವಿಧ ವೇದಿಕೆಗಳಲ್ಲಿ ಸಾಂಸ್ಕೃತಿಕ ಹಬ್ಬವೇ ನೆರವೇರಿತು:

ಸ್ಟ್ರೀಟ್ ಫೆಸ್ಟಿವಲ್ ಹಾಗೂ 3ಆ ಡ್ರೋನ್ ಶೋ: ಪಬ್ಲಿಕ್ ಗಾರ್ಡನ್‌ನಲ್ಲಿ ಆಯೋಜಿಸಿದ್ದ 'ಸ್ಟ್ರೀಟ್ ಫೆಸ್ಟಿವಲ್'ನಲ್ಲಿ ಕರಕುಶಲ ವಸ್ತುಗಳ ಪ್ರದರ್ಶನ, ಸಾಂಪ್ರದಾಯಿಕ ಆಹಾರ ಮೇಳ ಮತ್ತು ಲೈವ್ ಪೇಂಟಿಂಗ್ ಜರುಗಿದವು. ಅಪ್ಪನ ಕೆರೆಯಲ್ಲಿ ನಡೆದ '3ಆ ಲೈಟ್ & ಡ್ರೋನ್ ಶೋ' ಹಾಗೂ ಧ್ವನಿ-ಬೆಳಕು ಪ್ರದರ್ಶನವು ಕಲ್ಯಾಣ ನಾಡಿನ ಇತಿಹಾಸವನ್ನು ಆಕಾಶದಲ್ಲಿ ಕಂಗೊಳಿಸುವಂತೆ ಮಾಡಿತು.

ಸಂಗೀತ ಮತ್ತು ಹಾಸ್ಯ ರಸಸಂಜೆ: ಡಾ. ಎಸ್.ಎಂ. ಪಂಡಿತ್ ರಂಗಮಂದಿರ ಹಾಗೂ ಪಬ್ಲಿಕ್ ಗಾರ್ಡನ್ ವೇದಿಕೆಗಳಲ್ಲಿ 'ಝೀ ಕನ್ನಡ ಸರೆಗಮಪಾ' ತಂಡದ ಸಂಗೀತ ಸಂಜೆ, 'ಅಕೌಸ್ಟಿಕ್ ಸಾಗಾ' ಬಳಗದ ಬಹುಭಾಷಾ ಗಾಯನ, ಹಾಗೂ ಖ್ಯಾತ ಕಲಾವಿದರ ಸ್ಟಾಂಡ್‌ಅಪ್ ಕಾಮಿಡಿ ಕಾರ್ಯಕ್ರಮಗಳು ಜನಮನ ಸೂರೆಗೊಂಡವು.

ಸ್ಥಳೀಯ ಕಲೆಗಳಿಗೆ ವೇದಿಕೆ: 'ಡ್ಯಾನ್ಸ್ ಕರ್ನಾಟಕ ಡ್ಯಾನ್ಸ್' ತಂಡದ ಸಮೂಹ ನೃತ್ಯ ಹಾಗೂ ಅಂತರರಾಷ್ಟ್ರೀಯ ಪೇಂಟಿಂಗ್ ಕಲಾವಿದ ವಿಲಾಸ್ ನಾಯಕ್ ಅವರ ಲೈವ್ ಆರ್ಟ್ ಪ್ರದರ್ಶನ ಆಕರ್ಷಣೆಯ ಕೇಂದ್ರಬಿಂದುವಾಗಿದ್ದವು. ಜೊತೆಗೆ ಸ್ಥಳೀಯ ಕಲಾವಿದರಿಗೆ ಹೆಚ್ಚಿನ ಪ್ರಾಶಸ್ತ್ಯ ನೀಡುವ ಮೂಲಕ ವಿಶೇಷ ಮನರಂಜನೆಗೆ ಒತ್ತು ನೀಡಲಾಗಿತ್ತು.





ಸಂವಿಧಾನದ 371(ಜೆ) ತಂದ ಬದಲಾವಣೆಯ ಪರ್ವ

ಸಂವಿಧಾನದ 371(ಜೆ) ವಿಧಿಯ ಆಡಿಯಲ್ಲಿ ಕಲ್ಯಾಣ ಕರ್ನಾಟಕಕ್ಕೆ ಸಿಕ್ಕ ವಿಶೇಷ ಸ್ಥಾನಮಾನದಿಂದಾಗಿ ಶೈಕ್ಷಣಿಕ ಹಾಗೂ ಉದ್ಯೋಗ ಕ್ಷೇತ್ರದಲ್ಲಿ ಕ್ರಾಂತಿಕಾರಿ ಬದಲಾವಣೆಗಳಾಗಿವೆ. ಇದುವರೆಗೆ 79,000ಕ್ಕೂ ಹೆಚ್ಚು ಸ್ಥಳೀಯ ಯುವಕರು ಈ ಕಾಯ್ದೆಯಡಿ ಉದ್ಯೋಗ ಪಡೆದಿದ್ದು, ವೈದ್ಯಕೀಯ ಮತ್ತು ತಾಂತ್ರಿಕ ಶಿಕ್ಷಣದಲ್ಲಿ ಸಾವಿರಾರು ವಿದ್ಯಾರ್ಥಿಗಳು ಪ್ರವೇಶಾವಕಾಶ ಪಡೆದುಕೊಂಡಿದ್ದಾರೆ. ಇದಕ್ಕೆಲ್ಲ ಮೂಲ ಪುರುಷರಾಗಿರುವ ಪ್ರಸ್ತುತ ರಾಜ್ಯಸಭೆಯ ವಿರೋಧ ಪಕ್ಷದ ಮಲ್ಲಿಕಾರ್ಜುನ ಖರ್ಗೆಯವರಿಗೆ ಇಲ್ಲಿನ ಜನ ಸದಾ ಋಣಿಯಾಗಿರಬೇಕು ಎಂದು ಮುಖ್ಯಮಂತ್ರಿ ಸ್ಮರಿಸಿದರು.

ಸಂವಿಧಾನದ 371(ಜೆ) ವಿಶೇಷ ಸ್ಥಾನಮಾನದ ಪರಿಣಾಮಕಾರಿ ಅನುಷ್ಠಾನದಿಂದಾಗಿ ಶಿಕ್ಷಣ, ಆರೋಗ್ಯ, ಮತ್ತು ಮೂಲಸೌಕರ್ಯ ಕ್ಷೇತ್ರಗಳಲ್ಲಿ ಕಲ್ಯಾಣ ಕರ್ನಾಟಕವು ಇಂದು ಮುನ್ನಡೆಯುತ್ತಿದೆ. ಸೂಪರ್ ಸ್ಪೆಷಾಲಿಟಿ ಆಸ್ಪತ್ರೆಗಳು, 'ಕಲ್ಯಾಣಪಥ' ರಸ್ತೆ ಯೋಜನೆಗಳು ಹಾಗೂ ಶೈಕ್ಷಣಿಕ ಮೀಸಲಾತಿಗಳು ಈ ಭಾಗದ ಯುವಜನತೆಗೆ ಹೊಸ ಭರವಸೆ ಮೂಡಿಸಿವೆ ಎಂದೂ ಸಿಎಂ ಹೇಳಿದರು.

ರೂ.1,775 ಕೋಟಿ ಯೋಜನೆಗಳಿಗೆ ಚಾಲನೆ: ಮುಖ್ಯಮಂತ್ರಿಗಳು ಹಾಗೂ ಸಚಿವರು ಭಾಗವಹಿಸಿದ್ದ ಮುಖ್ಯ ಸಮಾರಂಭದಲ್ಲಿ ಏಳು ಜಿಲ್ಲೆಗಳ ಒಟ್ಟು 801 ಅಭಿವೃದ್ಧಿ ಕಾಮಗಾರಿಗಳಿಗೆ (ರೂ.1,775.41 ಕೋಟಿ ವೆಚ್ಚ) ಶಂಕುಸ್ಥಾಪನೆ ಹಾಗೂ ಉದ್ಘಾಟನೆ ನೆರವೇರಿಸಲಾಯಿತು.

79ನೇ ಕಲ್ಯಾಣ ಕರ್ನಾಟಕ ಉತ್ಸವ 2026 – ಗತಕಾಲದ ವಿಮೋಚನಾ ಹೋರಾಟದ ಹಿರಿಮೆಯನ್ನು ನೆನಪಿಸುತ್ತಲೇ, ಪ್ರಾದೇಶಿಕ ಅಸಮಾನತೆಯನ್ನು ಹೋಗಲಾಡಿಸಿ ಹೊಸ ಆರ್ಥಿಕ ಹಾಗೂ ಸಾಮಾಜಿಕ ಶಕ್ತಿಯಾಗಿ ಬೆಳೆಯುವ ಭರವಸೆಯನ್ನು ನೀಡಿದೆ. ಆಡಳಿತಾತ್ಮಕ ಇಚ್ಛಾಶಕ್ತಿ ಮತ್ತು ಸಾಂಸ್ಕೃತಿಕ ಜಾಗೃತಿಯೊಂದಿಗೆ ಕಲ್ಯಾಣ ನಾಡು ಸಮೃದ್ಧಿಯತ್ತ ಧಾವಿಸುತ್ತಿರುವುದು ಇಡೀ ಕರ್ನಾಟಕಕ್ಕೆ ಹೆಮ್ಮೆಯ ಸಂಗತಿಯಾಗಿದೆ.

Downloaded From:www.kpscvaani.com

"ಎಲ್ಲರೂ ಒಟ್ಟಾಗಿ ನಡೆಯೋಣ. ನವ ಕರ್ನಾಟಕ ಸದೃಢ ಕರ್ನಾಟಕ ನಮ್ಮ ಸಂಕಲ್ಪ. ಅಭಿವೃದ್ಧಿ ಪರವಾದ ಗ್ಯಾರಂಟಿಯನ್ನು ನಮ್ಮ ಸರ್ಕಾರ ನೀಡಿದೆ; ನೀಡಲಿದೆ" ಎಂದು ಮುಖ್ಯಮಂತ್ರಿ ಹೇಳಿದರು.

ಗಮನಸೆಳೆದ ಸ್ತಬ್ಧಚಿತ್ರಗಳು, ನೂತನ ಬಸ್ಸುಗಳಿಗೆ ಚಾಲನೆ

ಕಲ್ಯಾಣ ಕರ್ನಾಟಕ ಉತ್ಸವ ಧ್ವಜಾರೋಹಣ ನಂತರ ವಿವಿಧ ಸರ್ಕಾರಿ ಇಲಾಖೆಗಳು ಪ್ರದರ್ಶಿಸಿದ ಆಕರ್ಷಕ ಸ್ತಬ್ಧಚಿತ್ರಗಳಾದ ಅಭಿವೃದ್ಧಿ ಪಥ: ಕಲ್ಯಾಣ ಪಥ ಮತ್ತು ಪ್ರಗತಿ ಪಥ ಯೋಜನೆಗಳಡಿ ನಿರ್ಮಿಸಲಾದ ಗ್ರಾಮೀಣ ರಸ್ತೆಗಳು, ಸೇತುವೆಗಳು, ಹಾಗೂ ಆರೋಗ್ಯ ಕೇಂದ್ರಗಳ ಮಾದರಿಗಳು ಅಭಿವೃದ್ಧಿಯ ಹಾದಿಯನ್ನು ಬಿಂಬಿಸಿದವು. ಜಿಲ್ಲಾ ಪಂಚಾಯತ್ ಹಾಗೂ ಶಿಕ್ಷಣ ಇಲಾಖೆಯ ಅಕ್ಷರ ಅವಿಷ್ಕಾರ ಮತ್ತು ಆರೋಗ್ಯ ಇಲಾಖೆಯ ಆರೋಗ್ಯ ಅವಿಷ್ಕಾರ, ಜೆಸ್ಕಾಂ ಇಲಾಖೆ ಗೃಹಜ್ಯೋತಿ ಯೋಜನೆ, ಕೆಕೆಆರ್ ಟಿಸಿ ಇಲಾಖೆ ಶಕ್ತಿ ಯೋಜನೆ, ವಿದ್ಯಾರ್ಥಿಗಳಿಗೆ ಉಚಿತ ಬಸ್ ಪಾಸ್ ಸ್ತಬ್ಧಚಿತ್ರಗಳು ಪ್ರಮುಖ ಯೋಜನೆಗಳನ್ನು ಪ್ರದರ್ಶಿಸಿದವು.

ಸಂಸ್ಕೃತಿ ಸಂಭ್ರಮ: ಮೆರವಣಿಗೆಯಲ್ಲಿದ್ದ ಡೊಳ್ಳು ಕುಣಿತ ಕಲಾತಂಡಗಳ ಪ್ರದರ್ಶನ ಮೆರುಗು ತಂದರೆ,



ಕೆಕೆಆರ್‌ಟಿಸಿ 24 ನೂತನ ಬಸ್ಸುಗಳಿಗೆ ಚಾಲನೆ ನೀಡಲಾಯಿತು.

ಈ ಸಂದರ್ಭದಲ್ಲಿ ರಾಜ್ಯದ ಗೃಹ, ಮಾಹಿತಿ ತಂತ್ರಜ್ಞಾನ ಮತ್ತು ಜೈವಿಕ ತಂತ್ರಜ್ಞಾನ ಹಾಗೂ ಇ-ಆಡಳಿತ ಇಲಾಖೆಯ ಸಚಿವರು ಹಾಗೂ ಕಲಬುರಗಿ ಜಿಲ್ಲಾ ಉಸ್ತುವಾರಿ ಸಚಿವರಾದ ಪ್ರಿಯಾಂಕ್ ಖರ್ಗೆ, ಸಣ್ಣ ನೀರಾವರಿ ಹಾಗೂ ವಿಜ್ಞಾನ ಮತ್ತು ತಂತ್ರಜ್ಞಾನ ಸಚಿವರಾದ ಡಾ. ಅಜಯಸಿಂಗ್, ಕರ್ನಾಟಕ ರೇಷ್ಮೆ ಉದ್ಯಮಗಳ ನಿಗಮದ ನಿಯಮಿತದ ಅಧ್ಯಕ್ಷೆ ಹಾಗೂ ಉತ್ತರ ಶಾಸಕಿ ಕನೀಜ್ ಫಾತೀಮಾ, ಆಳಂದ ಶಾಸಕ ಹಾಗೂ ಕರ್ನಾಟಕ ರಾಜ್ಯ ನೀತಿ ಮತ್ತು ಯೋಜನಾ ಆಯೋಗದ ಉಪಾಧ್ಯಕ್ಷರಾದ ಬಿ.ಆರ್. ಪಾಟೀಲ, ಶಾಸಕರುಗಳಾದ ಎಂ.ವೈ. ಪಾಟೀಲ, ಬಸವರಾಜ ಮತ್ತಿಮಡು, ಅಲ್ಲಮಪ್ರಭು ಪಾಟೀಲ, ವಿಧಾನ ಪರಿಷತ್ ಶಾಸಕರುಗಳಾದ ಶಶೀಲ ಜಿ. ನಮೋಶಿ, ತಿಮ್ಮಣ್ಣಪ್ಪ ಕಮಕನೂರ, ಜಗದೇವ ಗುತ್ತೇದಾರ್, ಕಲ್ಯಾಣ ಕರ್ನಾಟಕ ರಸ್ತೆ ಸಾರಿಗೆ ನಿಗಮದ ಅಧ್ಯಕ್ಷ ಅರುಣಕುಮಾರ್ ಎಂ.ವೈ. ಪಾಟೀಲ, ಜೆಸ್ಕಾಂ ಅಧ್ಯಕ್ಷ ಪ್ರವೀಣ ಪಾಟೀಲ ಹರವಾಳ, ಕರ್ನಾಟಕ ರಾಜ್ಯ ದ್ವಿದಳ ಧಾನ್ಯ ಅಭಿವೃದ್ಧಿ ಮಂಡಳಿಯ ಅಧ್ಯಕ್ಷ ಸೈಯ್ಯದ್ ಮಹೆಮೂದ್ ಚಿಸ್ತಿ ಸಾಹೇಬ್, ಗ್ಯಾರಂಟಿ ಯೋಜನೆಗಳ ಅನುಷ್ಠಾನ ಪ್ರಾಧಿಕಾರದ ಜಿಲ್ಲಾ ಅಧ್ಯಕ್ಷೆ ಚಂದ್ರಿಕಾ ಪರಮೇಶ್ವರ್, ಕಲಬುರಗಿ ನಗರಾಭಿವೃದ್ಧಿ ಪ್ರಾಧಿಕಾರದ ಅಧ್ಯಕ್ಷ ಮಜಹರ್ ಆಲಂ ಖಾನ್ ಹಾಗೂ ಮಹಾನಗರಪಾಲಿಕೆ ಮಹಾಪೌರ ಅಜ್ಮಲ್ ಅಹ್ಮದ್ ಗೋಲಾ, ಉಪಸ್ಥಿತರಿದ್ದರು.



79ನೇ ಕಲ್ಯಾಣ ಕರ್ನಾಟಕ ಉತ್ಸವದ ಅಂಗವಾಗಿ ಕಲಬುರಗಿಯಲ್ಲಿ ಧ್ವಜಾರೋಹಣ ನೆರವೇರಿಸಿ ಮಾತನಾಡಿದ ಮುಖ್ಯಮಂತ್ರಿ ಡಿ.ಕೆ. ಶಿವಕುಮಾರ್ ಅವರು, ಈ ಭಾಗದ ಸಮಗ್ರ ಅಭಿವೃದ್ಧಿಗಾಗಿ 10 ಪ್ರಮುಖ ಕೊಡುಗೆಗಳು ಮತ್ತು ಭರವಸೆಗಳನ್ನು ಘೋಷಿಸಿದರು:

Downloaded From:www.kpscvaani.com

ಕಲ್ಯಾಣ ಕರ್ನಾಟಕ ಎಕಾನಮಿ ಮಿಷನ್ (KKEM):

ಕಲ್ಯಾಣ ಕರ್ನಾಟಕ ಪ್ರದೇಶದಲ್ಲಿ ಕೈಗಾರಿಕಾ ಬೆಳವಣಿಗೆ ಮತ್ತು ಹೂಡಿಕೆಗೆ ವೇಗ ನೀಡಲು ಸರ್ಕಾರವು ಸೆಕ್ಷನ್ 8 ಕಂಪನಿಯಾಗಿ ಕಲ್ಯಾಣ ಕರ್ನಾಟಕ ಎಕಾನಮಿ ಮಿಷನ್ ಸ್ಥಾಪಿಸಲಾಗುವುದು. ಈ ಮಿಷನ್ ದೊಡ್ಡ ಪ್ರಮಾಣದ ಹೂಡಿಕೆಗಳನ್ನು ಆಕರ್ಷಿಸಲು ಮತ್ತು ಈ ಪ್ರದೇಶದಲ್ಲಿ ಹೊಸ ಆರ್ಥಿಕ ಅವಕಾಶಗಳನ್ನು ಸೃಷ್ಟಿಸಲು ನೆರವಾಗಲಿದೆ.

ಜೈವಿಕ ಆರ್ಥಿಕ ಮಿಷನ್ (Bio Economy Mission)

ಕೃಷಿ ಉತ್ಪನ್ನಗಳ ಸಂಸ್ಕರಣೆ ಮತ್ತು ಮೌಲ್ಯವರ್ಧನೆಯ ಮೂಲಕ ರೈತರ ಆದಾಯ ಹೆಚ್ಚಿಸಲು ಸರ್ಕಾರವು ಜೈವಿಕ ಆರ್ಥಿಕ ಮಿಷನ್ ಸ್ಥಾಪಿಸಲಿದೆ. ತೊಗರಿ ಬೇಳೆ, ಕಮಲಾಪುರ ಬಾಳೆಹಣ್ಣು, ಒಣದ್ರಾಕ್ಷಿ ಮತ್ತು ಸಿರಿಧಾನ್ಯಗಳು ಸೇರಿದಂತೆ ಈ ಪ್ರದೇಶದ ಪ್ರಮುಖ ಕೃಷಿ ಉತ್ಪನ್ನಗಳ ಮೌಲ್ಯವರ್ಧನೆಗೆ ಇದು ಒತ್ತು ನೀಡಲಿದೆ.

ರಕ್ತಹೀನತೆ (Anaemia) ವಿರುದ್ಧ ವಿಶೇಷ ಅಭಿಯಾನ

ಈ ಪ್ರದೇಶದಲ್ಲಿ ರಕ್ತಹೀನತೆಯ ಪ್ರಮಾಣವನ್ನು ಕಡಿಮೆ ಮಾಡಲು ಸರ್ಕಾರವು ಮುಂದಿನ ಎರಡು ವರ್ಷಗಳ ಕಾಲ ತಪಾಸಣೆ, ತಡೆಗಟ್ಟುವಿಕೆ ಮತ್ತು ಚಿಕಿತ್ಸೆಗೆ ವಿಶೇಷ ಅಭಿಯಾನ ಕೈಗೊಳ್ಳಲಿದೆ. ವಿಶೇಷವಾಗಿ ಗರ್ಭಿಣಿಯರು, ಹದಿಹರೆಯದವರು ಹಾಗೂ ಹಾಲುಣಿಸುವ ತಾಯಂದಿರ ಮೇಲೆ ಹೆಚ್ಚಿನ ಗಮನ ಹರಿಸಲಾಗುವುದು.

ಕಲಬುರಗಿ ನಗರದ ಮೂಲಸೌಕರ್ಯ

ವೇಗವಾಗಿ ಬೆಳೆಯುತ್ತಿರುವ ಕಲಬುರಗಿ ನಗರದಲ್ಲಿ ಸುಗಮ ಸಂಚಾರಕ್ಕಾಗಿ ಸೇಡಂ ರಸ್ತೆಯ ರಿಂಗ್ ರೋಡ್‌ನಲ್ಲಿ ಮೇಲ್ಸೇತುವೆ ನಿರ್ಮಿಸಲಾಗುವುದು. ಹೊಸ ಪೆರಿಫೆರಲ್ ರಿಂಗ್ ರೋಡ್ ಕೂಡ ಯೋಜನೆಯಲ್ಲಿದ್ದು, ಅದರ ಡಿಪಿಆರ್ ಸಿದ್ಧಪಡಿಸಲಾಗುತ್ತಿದೆ. ಜೊತೆಗೆ ರೂ.30 ಕೋಟಿ ವೆಚ್ಚದಲ್ಲಿ ನಗರಕ್ಕೆ ಪ್ರಮುಖ ಹಸಿರು ಮತ್ತು ಸಾರ್ವಜನಿಕ ವಿಹಾರ ತಾಣವಾಗಿ ಹೊಸ ಕೆರೆ ಮತ್ತು ಮನರಂಜನಾ ಉದ್ಯಾನವನ್ನು ಅಭಿವೃದ್ಧಿಪಡಿಸಲಾಗುವುದು.

ನಿವೇಶನರಹಿತ ಕುಟುಂಬಗಳಿಗೆ 50,000 ನಿವೇಶನಗಳು

ಸಮಗ್ರ ಮತ್ತು ಎಲ್ಲರನ್ನೂ ಒಳಗೊಂಡ ಅಭಿವೃದ್ಧಿಯ ನಮ್ಮ ಬದ್ಧತೆಯ ಭಾಗವಾಗಿ, ಕಲಬುರಗಿ ಜಿಲ್ಲೆಯಲ್ಲಿ ನಿವೇಶನರಹಿತ ಕುಟುಂಬಗಳಿಗೆ 50,000 ವಸತಿ ನಿವೇಶನಗಳನ್ನು ಅಭಿವೃದ್ಧಿಪಡಿಸಲಾಗುವುದು.

ಐಟಿ ಪಾರ್ಕ್ ಮತ್ತು KRIYA

ಐಟಿ ಮತ್ತು ನಾವೀನ್ಯತಾ ಕ್ಷೇತ್ರದ ಬೆಳವಣಿಗೆಯನ್ನು ಬೆಂಗಳೂರಿನಾಚೆಗೂ ವಿಸ್ತರಿಸಲು ಕಲಬುರಗಿಯಲ್ಲಿ 30 ಎಕರೆ ಪ್ರದೇಶದಲ್ಲಿ ಐಟಿ ಪಾರ್ಕ್ ಅಭಿವೃದ್ಧಿಪಡಿಸಲಾಗುವುದು. ಜೊತೆಗೆ ನಾವೀನ್ಯತೆ, ಸ್ಟಾರ್ಟ್‌ಅಪ್‌ಗಳು ಮತ್ತು ಯುವ ಉದ್ಯಮಿಗಳನ್ನು ಉತ್ತೇಜಿಸಲು KRIYA – Kalaburagi Research, Innovation and Youth Accelerator ಅನ್ನು ಸ್ಥಾಪಿಸಲಾಗುವುದು.

ಎಐ ಆಧಾರಿತ ಸಿಸಿಟಿವಿ ಜಾಲ

ಸಾರ್ವಜನಿಕ ಸುರಕ್ಷತೆ, ಅಪರಾಧ ತಡೆ ಮತ್ತು ಸಂಚಾರ ನಿರ್ವಹಣೆಯನ್ನು ಬಲಪಡಿಸಲು ಕಲಬುರಗಿ ನಗರ ಹಾಗೂ ತಾಲೂಕು ಕೇಂದ್ರಗಳಲ್ಲಿ ಎಐ ಆಧಾರಿತ ಸಿಸಿಟಿವಿ ವ್ಯವಸ್ಥೆ ಅಳವಡಿಸಲಾಗುವುದು. ತ್ಯಾಜ್ಯ ನಿರ್ವಹಣೆ ಸೇರಿದಂತೆ ನಗರ ಸ್ಥಳೀಯ ಸಂಸ್ಥೆಗಳ ನಾಗರಿಕ ಸೇವೆಗಳ ಮೇಲ್ವಿಚಾರಣೆಯಲ್ಲಿಯೂ ಈ ಜಾಲವನ್ನು ಬಳಸಲಾಗುವುದು.

ಪ್ರವಾಸೋದ್ಯಮ ಮತ್ತು ಪಾರಂಪರಿಕ ತಾಣಗಳ ಅಭಿವೃದ್ಧಿ

ಕಲಬುರಗಿ ಕೋಟೆ, ಶರಣಬಸವೇಶ್ವರ ದೇವಸ್ಥಾನ, ಖ್ವಾಜಾ ಬಂದೇ ನವಾಜ್ ದರ್ಗಾ, ಬುದ್ಧ ವಿಹಾರ, ಮಳಖೇಡ, ಸನ್ನತಿ ಮತ್ತು ಗಾಣಗಾಪುರವನ್ನು ಸಂಪರ್ಕಿಸುವ ಪುಣ್ಯ ಯಾತ್ರಾ ಸರ್ಕ್ಯೂಟ್ ಅಭಿವೃದ್ಧಿಪಡಿಸಲಾಗುವುದು. ಕೆಕೆಆರ್‌ಡಿಬಿ ಅನುದಾನದ ಮೂಲಕ ಮಳಖೇಡ, ನಾಗಾವಿ, ಕಾಳಗಿ ಮತ್ತು ಸನ್ನತಿಯ ಪಾರಂಪರಿಕ ತಾಣಗಳನ್ನೂ ಪುನರಾಭಿವೃದ್ಧಿಪಡಿಸಲಾಗುತ್ತಿದೆ. ಗಾಣಗಾಪುರವನ್ನು ಮೊದಲ ಹಂತದಲ್ಲಿ ರೂ.50 ಕೋಟಿ ವೆಚ್ಚದಲ್ಲಿ ಅಭಿವೃದ್ಧಿಪಡಿಸಲಾಗುವುದು. ಬಸವಣ್ಣನವರ ತತ್ವಗಳು ಮತ್ತು ವಚನ ಪರಂಪರೆಯನ್ನು ಯುವ ಪೀಳಿಗೆಗೆ ತಲುಪಿಸಲು ಕಲಬುರಗಿಯಲ್ಲಿ ವಚನ ಮಂಟಪವನ್ನು ಸ್ಥಾಪಿಸಲಾಗುವುದು.

ಕ್ರೀಡಾ ಮೂಲಸೌಕರ್ಯ

ಮುಂದಿನ ಎರಡು ವರ್ಷಗಳಲ್ಲಿ ಚಂದ್ರಶೇಖರ ಪಾಟೀಲ ಕ್ರೀಡಾಂಗಣವನ್ನು ಆಧುನಿಕ ಕ್ರೀಡಾ ಮೂಲಸೌಕರ್ಯದೊಂದಿಗೆ ಸಮಗ್ರವಾಗಿ ಪುನರಾಭಿವೃದ್ಧಿಪಡಿಸಲಾಗುವುದು. ಇಡೀ ಕಲ್ಯಾಣ ಕರ್ನಾಟಕ ಪ್ರದೇಶಕ್ಕೆ ಅನುಕೂಲವಾಗುವಂತೆ ಕ್ರಿಕೆಟ್ ಸೌಲಭ್ಯಗಳನ್ನು ಅಭಿವೃದ್ಧಿಪಡಿಸಲು ಸರ್ಕಾರವು ಕೆಎಸ್‌ಸಿಎ ಜೊತೆ ಒಡಂಬಡಿಕೆ ಮಾಡಿಕೊಳ್ಳಲಿದೆ. ಕ್ರೀಡಾ ಶ್ರೇಷ್ಠತೆಯನ್ನು ಉತ್ತೇಜಿಸುವ ಉದ್ದೇಶದಿಂದ ಕಲಬುರಗಿ ತಾಲೂಕಿನ ಹಡಗಿಲ ಹಾರುತಿ ಗ್ರಾಮದಲ್ಲಿ "SPORTS CITY" ಸ್ಥಾಪಿಸಲಾಗುವುದು. ವಿವಿಧ ಕ್ರೀಡೆಗಳಿಗೆ ಅಂತರಾಷ್ಟ್ರೀಯ ಮಟ್ಟದ ಒಳಾಂಗಣ ಮತ್ತು ಹೊರಾಂಗಣ ಸೌಲಭ್ಯಗಳನ್ನು ಅಭಿವೃದ್ಧಿ ಪಡಿಸಲಾಗುವುದು.

ಕೋಟಿ ವೃಕ್ಷ ಅಭಿಯಾನ

ಹಸಿರು ಹೊದಿಕೆಯನ್ನು ಹೆಚ್ಚಿಸಲು ಮತ್ತು ಹವಾಮಾನ ಬದಲಾವಣೆಯ ಪರಿಣಾಮಗಳನ್ನು ಎದುರಿಸುವ ಸಾಮರ್ಥ್ಯವನ್ನು ಬಲಪಡಿಸಲು ಮುಂದಿನ ಎರಡು ವರ್ಷಗಳಲ್ಲಿ ಕಲ್ಯಾಣ ಕರ್ನಾಟಕ ಪ್ರದೇಶದಾದ್ಯಂತ ಕೋಟಿ ವೃಕ್ಷ ಅಭಿಯಾನ ಕೈಗೊಳ್ಳಲಾಗುವುದು. ಒಂದು ಕೋಟಿ ಗಿಡಗಳನ್ನು ನೆಟ್ಟು ಪೋಷಿಸುವುದು ಇದರ ಗುರಿಯಾಗಿದೆ.

Downloaded From:www.kpscvaani.com



ಚಳ್ಳಕೆರೆಯಲ್ಲಿ ಶಿಕ್ಷಣ ಮೂಲಸೌಕರ್ಯಕ್ಕೆ ಸುಸಜ್ಜಿತ ಕಟ್ಟಡಗಳು



ಜಿ. ನಾಗರಾಜು ಗಾಣದಹುಣಸೆ

ಒಂದು ಐತಿಹಾಸಿಕ ಕಟ್ಟಡವೆಂದರೆ ಕೇವಲ ಕಲ್ಲು, ಇಟ್ಟಿಗೆ, ಗಾರೆ ಮತ್ತು ಮೇಲ್ಛಾವಣಿಗಳ ಸಮೂಹವಲ್ಲ. ಅದು ಒಂದು ಕಾಲಘಟ್ಟದ ಕನಸುಗಳ, ಸಮಾಜದ ಮೌಲ್ಯಗಳ ಮತ್ತು ಮುಂದಿನ ತಲೆಮಾರಿನ ಆಶಯಗಳ ಮೌನ ದಾಖಲೆ. ಮೈಸೂರು ವಿಶ್ವವಿದ್ಯಾಲಯದ ಐತಿಹಾಸಿಕ ಕ್ರಾಫರ್ಡ್ ಭವನವು ಶಿಕ್ಷಣದ ಘನತೆ ಮತ್ತು ಜ್ಞಾನದ ಪರಂಪರೆಯ ಪ್ರತೀಕವಾಗಿ ನಿಂತಿರುವಂತೆ, ಚಿತ್ರದುರ್ಗ ಜಿಲ್ಲೆಯ ಚಳ್ಳಕೆರೆಯಲ್ಲಿ

Downloaded From:www.kpscvaani.com



ನಿರ್ಮಾಣಗೊಳ್ಳುತ್ತಿರುವ ಭವ್ಯ ಸರ್ಕಾರಿ ಪ್ರಥಮ ದರ್ಜೆ ಕಾಲೇಜಿನ ಕಟ್ಟಡವೂ ಗ್ರಾಮೀಣ ಕರ್ನಾಟಕದ ಶಿಕ್ಷಣ ಲೋಕಕ್ಕೆ ಹೊಸ ಆತ್ಮವಿಶ್ವಾಸದ ಭಾಷ್ಯ ಬರೆಯುತ್ತಿರುವಂತೆ ಕಾಣುತ್ತದೆ.

ಚಳ್ಳಕೆರೆ ಕ್ಷೇತ್ರದ ಶಾಸಕರೂ, ಪರಿಶಿಷ್ಟ ವರ್ಗಗಳ ಕಲ್ಯಾಣ ಇಲಾಖೆಯ ಸಚಿವರೂ ಆಗಿರುವ ಟಿ. ರಘುಮೂರ್ತಿ ಅವರ ಅಭಿವೃದ್ಧಿ ದೃಷ್ಟಿಕೋನದಲ್ಲಿ ಶಿಕ್ಷಣ ಕ್ಷೇತ್ರಕ್ಕೆ ದೊರೆಯುತ್ತಿರುವ ಆದ್ಯತೆ ಈ ಸಂದರ್ಭದಲ್ಲಿ ಗಮನಾರ್ಹ. ಕಾಲೇಜಿನ ಭವ್ಯ ಕಟ್ಟಡದ ಜೊತೆಗೆ ವಿವಿಧ ಸರ್ಕಾರಿ ಶಾಲೆಗಳ ಕಟ್ಟಡಗಳ ನಿರ್ಮಾಣಕ್ಕೆ ನೀಡಲಾಗುತ್ತಿರುವ ಒತ್ತು, ಶಿಕ್ಷಣವೆಂದರೆ ಕೇವಲ ಪಠ್ಯಪುಸ್ತಕ ಮತ್ತು ತರಗತಿಯ ನಾಲ್ಕು ಗೋಡೆಗಳಿಗೆ ಸೀಮಿತವಾದ ವಿಷಯವಲ್ಲ; ವಿದ್ಯಾರ್ಥಿಗಳಿಗೆ ಗೌರವಯುತ, ಸುರಕ್ಷಿತ ಮತ್ತು ಸ್ಫೂರ್ತಿದಾಯಕ ಕಲಿಕಾ ವಾತಾವರಣವೂ ಅಗತ್ಯ ಎಂಬ ಚಿಂತನೆಯ ಪ್ರತಿಬಿಂಬವಾಗಿದೆ.

ಒಂದು ಸಮಾಜ ತನ್ನ ಮಕ್ಕಳಿಗಾಗಿ ಹೇಗೆ ಶಾಲೆ ಕಟ್ಟುತ್ತದೆ, ತನ್ನ ನಾಗರಿಕರಿಗಾಗಿ ಹೇಗೆ ಸಾರ್ವಜನಿಕ ಕಟ್ಟಡಗಳನ್ನು ನಿರ್ಮಿಸುತ್ತದೆ ಎಂಬುದರಲ್ಲಿಯೇ ಆ ಸಮಾಜದ ಭವಿಷ್ಯದ ದೃಷ್ಟಿಕೋನ ಅಡಗಿರುತ್ತದೆ. ಸಾರ್ವಜನಿಕ ಕಟ್ಟಡಗಳು ಉಪಯುಕ್ತತೆಯ ಜೊತೆಗೆ ಸೌಂದರ್ಯ, ಶಿಸ್ತು ಮತ್ತು ಘನತೆಯನ್ನೂ ಹೊಂದಿದ್ದರೆ, ಅವು ಜನರಲ್ಲಿ ತಮ್ಮ ನೆಲದ ಬಗ್ಗೆ ಹೆಮ್ಮೆ ಮೂಡಿಸುತ್ತವೆ.



ಈ ದೃಷ್ಟಿಯಿಂದ ಚಳ್ಳಕೆರೆ ಇಂದು ಗಮನ ಸೆಳೆಯುತ್ತದೆ. ಗ್ರಾಮೀಣ ಬದುಕಿನ ಸರಳತೆ ಮತ್ತು ಬುಡಕಟ್ಟು ಸಮುದಾಯಗಳ ಬದುಕಿನ ಹೋರಾಟವನ್ನು ತನ್ನೊಳಗೆ ಹೊತ್ತಿರುವ ಈ ನೆಲದಲ್ಲಿ ಎದ್ದು ನಿಂತಿರುವ ಭವ್ಯ ಸರ್ಕಾರಿ ಕಟ್ಟಡಗಳು ಕೇವಲ ಅಭಿವೃದ್ಧಿಯ ಗುರುತುಗಳಲ್ಲ; ಅವುಬದಲಾಗುತ್ತಿರುವ ಸಾಮಾಜಿಕ ಮನಃಸ್ಥಿತಿಯ ಸಂಕೇತಗಳಾಗಿವೆ.

ಚಳ್ಳಕೆರೆಯ ಸರ್ಕಾರಿ ಪ್ರಥಮ ದರ್ಜೆ ಕಾಲೇಜಿನ ಕಟ್ಟಡವನ್ನು ನೋಡಿದಾಗ ಈ ಭಾವನೆ ಇನ್ನಷ್ಟು ಗಾಢವಾಗುತ್ತದೆ. ವಿಶಾಲತೆ, ಗಂಭೀರ ವಿನ್ಯಾಸ ಮತ್ತು ಸಮರ್ಪಕ ವಾಸ್ತುಶಿಲ್ಪದ ರೂಪರೇಖೆ ವಿದ್ಯಾರ್ಥಿಗಳಿಗೆ ಮಾತಿಲ್ಲದೆ "ನಿಮ್ಮ ಕನಸುಗಳಿಗೂ ಮಿತಿ ಇಲ್ಲ" ಎಂಬ ಸಂದೇಶವನ್ನು ನೀಡುವಂತಿದೆ.

ಕಲಿಕೆಯ ವಾತಾವರಣ ವಿದ್ಯಾರ್ಥಿಯ ಅನುಭವದ ಮೇಲೆ ಪರಿಣಾಮ ಬೀರುತ್ತದೆ ಎಂಬುದನ್ನು ಶಿಕ್ಷಣಶಾಸ್ತ್ರ ಕೂಡ ಒತ್ತಿಹೇಳುತ್ತದೆ. ಬೆಳಕು, ಸ್ವಚ್ಛತೆ, ವಿಶಾಲತೆ, ಸೌಂದರ್ಯ ಮತ್ತು ಶಿಸ್ತಿನಿಂದ ಕೂಡಿದ ಪರಿಸರವು ಕಲಿಕೆಯ ಅನುಭವವನ್ನು ಸಮೃದ್ಧಗೊಳಿಸಬಲ್ಲದು. ಹೀಗಾಗಿ ಉತ್ತಮ ಕಟ್ಟಡಗಳು ಕೇವಲ ಶಿಕ್ಷಣಕ್ಕೆ ಆಶ್ರಯ ನೀಡುವುದಿಲ್ಲ; ಶಿಕ್ಷಣಕ್ಕೆ ಘನತೆಯನ್ನೂ ನೀಡುತ್ತವೆ.

ವಿಶೇಷವಾಗಿ ಗ್ರಾಮೀಣ ಹಾಗೂ ಬುಡಕಟ್ಟು ಸಮುದಾಯಗಳ ವಿದ್ಯಾರ್ಥಿಗಳಿಗೆ ಇಂತಹ ವಾತಾವರಣದ ಮಹತ್ವ ಇನ್ನಷ್ಟು ಮುಖ್ಯವಾಗುತ್ತದೆ. ಅವರು ಭವ್ಯ ಕಾಲೇಜಿನ ಮೆಟ್ಟಿಲುಗಳನ್ನು ಏರುವಾಗ ಕೇವಲ ಒಂದು ತರಗತಿಗೆ ಪ್ರವೇಶಿಸುವುದಿಲ್ಲ; ತಮ್ಮ ಬದುಕಿನ ಸಾಧ್ಯತೆಗಳ ವಿಶಾಲ ಜಗತ್ತಿಗೆ ಕಾಲಿಡುತ್ತಾರೆ. "ನಮ್ಮ ಊರು ಯಾವುದಕ್ಕೂ ಕಡಿಮೆಯಿಲ್ಲ" ಎಂಬ ಭಾವನೆ ಅವರೊಳಗೆ ಮೂಡುತ್ತದೆ. ಆ ಭಾವನೆಯೇ ಮುಂದೆ ಆತ್ಮವಿಶ್ವಾಸವಾಗಿ, ಆತ್ಮವಿಶ್ವಾಸವೇ ಸಾಧನೆಯಾಗಿ ರೂಪಾಂತರಗೊಳ್ಳುವ ಸಾಧ್ಯತೆ ಇರುತ್ತದೆ.

ಚಳ್ಳಕೆರೆಯಲ್ಲಿ ಇದು ಒಂದು ಕಾಲೇಜಿನ ಕಟ್ಟಡಕ್ಕೆ ಮಾತ್ರ ಸೀಮಿತವಾಗಿಲ್ಲ. ಮಿನಿ ವಿಧಾನಸೌಧ, ಬಿಸಿನೀರು

Downloaded From:www.kpscvaani.com

ಮುದ್ದಪ್ಪ ಹೈಸ್ಕೂಲ್, ಎಂಜಿನಿಯರಿಂಗ್ ಕಾಲೇಜು, ಸರ್ಕಾರಿ ಶಾಲೆಗಳು ಸೇರಿದಂತೆ ವಿವಿಧ ಸಾರ್ವಜನಿಕ ಕಟ್ಟಡಗಳಲ್ಲಿಯೂ ಉಪಯುಕ್ತತೆಯೊಂದಿಗೆ ವಾಸ್ತುಶಿಲ್ಪದ ಘನತೆಯನ್ನು ಬೆಸೆಯುವ ಪ್ರಯತ್ನ ಕಾಣಿಸುತ್ತದೆ. ಸರ್ಕಾರಿ ಕಟ್ಟಡಗಳು ಕೇವಲ ಆಡಳಿತದ ಅನುಕೂಲಕ್ಕಾಗಿ ನಿರ್ಮಾಣವಾಗದೆ, ಜನರ ಸಾರ್ವಜನಿಕ ಆಸ್ತಿಯಾಗಿಯೂ, ಹೆಮ್ಮೆಯ ತಾಣಗಳಾಗಿಯೂ ರೂಪುಗೊಳ್ಳಬೇಕು ಎಂಬ ಚಿಂತನೆ ಇಲ್ಲಿ ಗೋಚರಿಸುತ್ತದೆ.

ಅಭಿವೃದ್ಧಿ ಎಂದರೆ ಕೇವಲ ರಸ್ತೆ, ಸೇತುವೆ, ಕಟ್ಟಡಗಳನ್ನು ನಿರ್ಮಿಸುವುದಲ್ಲ. ಮನುಷ್ಯನ ಆತ್ಮಗೌರವವನ್ನು ನಿರ್ಮಿಸುವುದೂ ಅಭಿವೃದ್ಧಿಯ ಒಂದು ಆಯಾಮವೇ ಆಗಿದೆ. ಗುಣಮಟ್ಟದ ರಸ್ತೆಯು ಪ್ರಯಾಣವನ್ನು ಸುಲಭಗೊಳಿಸಬಹುದು; ಆದರೆ, ಶಾಲೆ ಮತ್ತು ಕಾಲೇಜುಗಳು ಬದುಕಿನ ದಿಕ್ಕನ್ನೇ ಬದಲಿಸಬಲ್ಲವು. ಸಾರ್ವಜನಿಕ ಕಟ್ಟಡಗಳು ಭೌತಿಕ ಸೌಕರ್ಯವನ್ನು ನೀಡುವ ಜೊತೆಗೆ, "ನಾವು ಕೂಡ ದೊಡ್ಡ ಕನಸು ಕಾಣಬಹುದು" ಎಂಬ ಭಾವನೆಯನ್ನು ಸಮಾಜದ ಮನಸ್ಸಿನಲ್ಲಿ ಬಿತ್ತಬಲ್ಲವು.

ಈ ಹಿನ್ನೆಲೆಯಲ್ಲಿ ಟಿ. ರಘುಮೂರ್ತಿ ಅವರ ಅಭಿವೃದ್ಧಿ ಪ್ರಯತ್ನಗಳನ್ನು ಸಾರ್ವಜನಿಕ ನಿರ್ಮಾಣಗಳ ಗುಣಮಟ್ಟ ಮತ್ತು ಶಿಕ್ಷಣಕ್ಕೆ ನೀಡುತ್ತಿರುವ ಆದ್ಯತೆಯ ಹಿನ್ನೆಲೆಯಲ್ಲಿ ನೋಡುವುದು ಸೂಕ್ತ. ಇಂದು ನಿರ್ಮಾಣವಾಗುವ ಶಾಲೆ, ಕಾಲೇಜು ಮತ್ತು ಸಾರ್ವಜನಿಕ ಕಟ್ಟಡಗಳು ನಾಳೆ ಒಂದು ಪ್ರದೇಶದ ಸಾಮಾಜಿಕ ಸ್ಮೃತಿಯ ಭಾಗವಾಗುತ್ತವೆ. ಕಾಲ ಕಳೆದಂತೆ ಕಟ್ಟಡಗಳು ಹಳೆಯದಾಗಬಹುದು; ಆದರೆ ಅವುಗಳೊಂದಿಗೆ ಬೆಸೆದುಕೊಂಡ ನೆನಪುಗಳು ಹಳೆಯದಾಗುವುದಿಲ್ಲ.

ಸಮಾಜದ ಸಂಸ್ಕೃತಿಯು ದೇವಾಲಯಗಳಲ್ಲಿ ಹೇಗೋ



ಹಾಗೆಯೇ ಶಾಲೆಗಳಲ್ಲಿ, ಗ್ರಂಥಾಲಯಗಳಲ್ಲಿ, ಕಾಲೇಜುಗಳಲ್ಲಿ ಮತ್ತು ಸಾರ್ವಜನಿಕ ಸ್ಥಳಗಳಲ್ಲಿಯೂ ಉಸಿರಾಡುತ್ತದೆ. ಜನರು ಗೌರವದಿಂದ ಪ್ರವೇಶಿಸುವ ಸಾರ್ವಜನಿಕ ಕಟ್ಟಡಗಳು, ಸಾರ್ವಜನಿಕ ಸಂಸ್ಥೆಗಳೊಂದಿಗೆ ಅವರ ಸಂಬಂಧವನ್ನೂ ಗಟ್ಟಿಗೊಳಿಸಬಲ್ಲವು. ಆದ್ದರಿಂದ ವಾಸ್ತುಶಿಲ್ಪವೆಂದರೆ ಕೇವಲ ಸೌಂದರ್ಯವಲ್ಲ; ಅದು ಸಾರ್ವಜನಿಕ ಬದುಕಿನ ಗುಣಮಟ್ಟದ ಅಭಿವ್ಯಕ್ತಿಯೂ ಹೌದು.

ಭವಿಷ್ಯದ ಚಳ್ಳಕೆರೆಯನ್ನು ಊಹಿಸಿಕೊಂಡಾಗ, ಈ ಕಟ್ಟಡಗಳು ಕೇವಲ ಒಂದು ಕಾಲಘಟ್ಟದ ಅಭಿವೃದ್ಧಿಯ ಗುರುತುಗಳಾಗಿ ಉಳಿಯದೆ, ಗ್ರಾಮೀಣ ಶಿಕ್ಷಣಕ್ಕೆ ನೀಡಿದ ಮಹತ್ವದ ಸಂಕೇತಗಳಾಗಿ ನೆನಪಾಗಬಹುದು. ಇಂದು ನಿರ್ಮಾಣವಾಗುತ್ತಿರುವ ಈ ಕಟ್ಟಡಗಳ ಮೆಟ್ಟಿಲುಗಳಲ್ಲಿ ನಾಳೆಯ ಅನೇಕ ಕನಸುಗಳು ಹೆಜ್ಜೆ ಇಡಲಿವೆ. ತರಗತಿಗಳಲ್ಲಿ ಕುಳಿತುಕೊಳ್ಳುವ ವಿದ್ಯಾರ್ಥಿಗಳಲ್ಲಿ ಯಾರೋ ಶಿಕ್ಷಕರಾಗಬಹುದು, ಐಎಎಸ್, ಐಪಿಎಸ್, ಐಎಎಸ್ ಅಧಿಕಾರಿಗಳಾಗಬಹುದು, ಯಾರೋ ವಿಜ್ಞಾನಿಯಾಗಬಹುದು, ಯಾರೋ ವಿವಿಧ ಇಲಾಖೆಗಳ ಆಡಳಿತಗಾರರಾಗಬಹುದು, ಮತ್ತೊಬ್ಬರು ತಮ್ಮದೇ ಕ್ಷೇತ್ರದಲ್ಲಿ ಹೊಸ ದಾರಿ ತೆರೆದುಕೊಳ್ಳಬಹುದು.

ಕೆಲವು ಕಟ್ಟಡಗಳು ತಲೆಮಾರುಗಳ ಚಿಂತನೆಗೆ ಹೊಸ ದಿಕ್ಕು ನೀಡುತ್ತವೆ.ಅವು ಕೇವಲ ಗೋಡೆಗಳನ್ನು ಕಟ್ಟುವುದಿಲ್ಲ; ಬದಲಿಗೆ, ಕನಸುಗಳನ್ನು ಕಟ್ಟುತ್ತವೆ; ಭವಿಷ್ಯವನ್ನು ಜೋಡಿಸುತ್ತವೆ. ಒಂದು ಊರಿನ ನಿಜವಾದ ಹೆಗ್ಗಳಿಕೆ ಅದರ ಕಟ್ಟಡಗಳ ಎತ್ತರದಲ್ಲಿರುವುದಿಲ್ಲ; ಆ ಕಟ್ಟಡಗಳು ಎಷ್ಟು ಮಕ್ಕಳಿಗೆ ತಮ್ಮ ಬದುಕನ್ನು ಎತ್ತರಕ್ಕೆ ಕೊಂಡೊಯ್ಯುವ ಧೈರ್ಯ ನೀಡುತ್ತವೆ ಎಂಬುದರಲ್ಲಿ ಇರುತ್ತದೆ.

ಆ ಅರ್ಥದಲ್ಲಿ, ಚಳ್ಳಕೆರೆಯ ಈ ಸಾರ್ವಜನಿಕ ಕಟ್ಟಡಗಳು ನಗರವನ್ನು ಅಲಂಕರಿಸುವ ನಿರ್ಮಾಣಗಳಷ್ಟೇ ಅಲ್ಲ, ಅವು ಒಂದು ತಲೆಮಾರಿನ ಆತ್ಮವಿಶ್ವಾಸಕ್ಕೆ ಅಡಿಪಾಯ ಹಾಕಲಿರುವ ಕಟ್ಟಡಗಳಾಗಲಿವೆ. ಕಾಲದೊಂದಿಗೆ ಅವುಗಳ ಬಣ್ಣ ಬದಲಾಗಬಹುದು; ಗೋಡೆಗಳು ಹಳೆಯದಾಗಬಹುದು. ಆದರೆ ಅವುಗಳ ನೆರಳಿನಲ್ಲಿ ಬೆಳೆದ ಕನಸುಗಳು ಮಾತ್ರ ಕಾಲವನ್ನು ಮೀರಿ ಸಾಗುತ್ತವೆ. ಕಟ್ಟಡಗಳೂ ಕನಸು ಕಟ್ಟುತ್ತವೆ; ಕೆಲವೊಮ್ಮೆ, ಆ ಕನಸುಗಳೇ ಒಂದು ಊರಿನ ಭವಿಷ್ಯ ಕಟ್ಟುತ್ತವೆ. ■

Downloaded From:www.kpscvaani.com





ವೈಭವದ ಮೈಸೂರು ದಸರಾ ಮಹೋತ್ಸವ-2026

ಕಂಗೊಳಿಸಿದ ದೀಪಾಲಂಕಾರ, ಸಡಗರ-ಸಂಭ್ರಮದಲ್ಲಿ ಮೀಯಿಸಿದ ಪ್ರದರ್ಶನಗಳು

ಚಂದ್ರಶೇಖರ್ ಬಿ.ಎನ್.

Downloaded From:www.kpscvaani.com

ವಿಶ್ವವಿಖ್ಯಾತ ನಾಡಹಬ್ಬ ಮೈಸೂರು ದಸರಾ ಮಹೋತ್ಸವ ಎಂದರೆ ಪ್ರತಿಯೊಬ್ಬರ ಮನಸ್ಸು ಅರಳುತ್ತದೆ. ನಾಡಿನ ಅಸ್ಮಿತೆ, ಕಲೆ, ಸಂಸ್ಕೃತಿ, ಭವ್ಯ ಪರಂಪರೆ ಮತ್ತು ಧಾರ್ಮಿಕ ಆಚರಣೆಯನ್ನು ಪ್ರತಿಬಿಂಬಿಸುವ ದಸರಾ ವೈಭವವು ನೋಡುಗರ ಕಣ್ಣಿಗೆ ಹಬ್ಬ, ಮನಸ್ಸಿಗೆ ಉಲ್ಲಾಸ ಉಂಟುಮಾಡುತ್ತದೆ.



ದಸರಾ ಆಚರಣೆಗೆ ಮೈಸೂರು. ಮದುವಣಗಿತ್ತಿಯಂತೆ ಸಿಂಗಾರಗೊಳ್ಳುತ್ತದೆ. ನಗರದೆಲ್ಲೆಡೆ ಸಡಗರ, ಸಂಭ್ರಮ ಮನೆ ಮಾಡುತ್ತದೆ. ಹತ್ತು, ಹಲವು ವೈವಿಧ್ಯಮಯ ಸಾಂಸ್ಕೃತಿಕ ಕಾರ್ಯಕ್ರಮಗಳು ಕಲೆಯನ್ನು ಪ್ರೀತಿಸುವ ಪ್ರತಿಯೊಬ್ಬರ ಚಿತ್ತವನ್ನು ತನ್ನತ್ತ ನಿರರ್ಗಳವಾಗಿ ಸೆಳೆಯುವ ಮೂಲಕ ಅವರ ಮನಸೂರೆಗೊಳಿಸುತ್ತವೆ.

ಈ ಬಾರಿಯೂ ಅರಮನೆ ನಗರಿಯಲ್ಲಿ ಹಲವು ಕಾರ್ಯಕ್ರಮಗಳು ಅತ್ಯಂತ ಅಚ್ಚುಕಟ್ಟಾಗಿ ಜರುಗಿ ಕಲಾ ಪ್ರೇಮಿಗಳು ಹಾಗೂ ಪ್ರವಾಸಿಗರಿಗೆ ಮನರಂಜನೆಯ ಭೋರಿ ಭೋಜನ ಉಣಬಡಿಸಿದವು.

ಕೊಪ್ಪಳ ಗವಿ ಮಠದ ಶ್ರೀ ಅಭಿನವ ಗವಿಸಿದ್ದೇಶ್ವರ ಸ್ವಾಮೀಜಿ ಅವರು ನಾಡಹಬ್ಬ ದಸರಾ ಮಹೋತ್ಸವ–2026ಕ್ಕೆ ಸಂಪ್ರದಾಯದಂತೆ ಚಾಮುಂಡಿಬೆಟ್ಟದಲ್ಲಿ ಅ.11 ರಂದು ಚಾಮುಂಡೇಶ್ವರಿ ದೇವಿಗೆ ಪುಷ್ಪಾರ್ಚನೆ ಮಾಡಿ, ದೀಪ ಬೆಳಗಿಸುವ ಮೂಲಕ ವಿದ್ಯುಕ್ತವಾಗಿ ಚಾಲನೆ ನೀಡಿದರು.



Downloaded From:www.kpscvaani.com



ಮಾನ್ಯ ಮುಖ್ಯಮಂತ್ರಿಯವರಾದ ಡಿ.ಕೆ.ಶಿವಕುಮಾರ್ ಅವರು, ಜಿಲ್ಲಾ ಉಸ್ತುವಾರಿ ಸಚಿವರಾದ ಡಾ.ಯತೀಂದ್ರ ಸಿದ್ದರಾಮಯ್ಯ ಅವರು ಸೇರಿದಂತೆ ಸಂಪುಟದ ಸಚಿವರು, ಶಾಸಕರು, ಸಂಸದರು, ವಿಧಾನ ಪರಿಷತ್ ಸದಸ್ಯರು ಹಾಗೂ ಗಣ್ಯರೆಲ್ಲರೂ ನಾಡಿಗೆ ಒಳಿತಾಗಲಿ ಎಂದು ಪ್ರಾರ್ಥನೆ ಸಲ್ಲಿಸಿ ಎಲ್ಲರಿಗೂ ಶುಭಕೋರಿದರು.

ದೀಪಾಲಂಕಾರದಲ್ಲಿ ಕಂಗೊಳಿಸಿದ ಸಾಂಸ್ಕೃತಿಕ ನಗರಿ

ರಸ್ತೆಯುದ್ದಕ್ಕೂ ಚಪ್ಪರ ಹಾಕಿದಂತಹ ವಿದ್ಯುದ್ದೀಪಗಳ ಸಾಲು; ಮರಗಳನ್ನು ಸುತ್ತುವರಿದ ಹೊಂಬೆಳಕಿನ ಬಳ್ಳಿಗಳು; ಝಗಮಗಿಸುವ ವೃತ್ತಗಳು; ದೀಪಗಳಲ್ಲಿ ಕಂಗೊಳಿಸುವ ಕಲಾಕೃತಿಗಳು; ದೇವಲೋಕವೇ ಧರೆಗಿಳಿದು ಬಂದಂತೆ ಭಾಸವಾಗುತ್ತಿದ್ದ ಬೆಳಕಿನ ಲೋಕದಲ್ಲಿ ಕಿಕ್ಕಿರಿದ ಜನಸಾಗರ ಅಲ್ಲಲ್ಲಿ ಸೆಲ್ಫಿ ತೆಗೆದುಕೊಳ್ಳುವುದು– ಕತ್ತಲಾಗುತ್ತಿದ್ದಂತೆ ಮೈಸೂರಿನಲ್ಲಿ ಅನಾವರಣಗೊಳ್ಳುತ್ತಿದ್ದ ದೀಪಲೋಕ ಚಿತ್ತಾಕರ್ಷಕವಾಗಿತ್ತು. ಪ್ರತಿ ಬಾರಿಯಂತೆ ಈ ದಸರಾದಲ್ಲೂ ಸೆಸ್ಕ್ ವತಿಯಿಂದ ಅತ್ಯುತ್ತಮವಾಗಿ ಏರ್ಪಡಿಸಿದ್ದ ದೀಪಾಲಂಕಾರದಲ್ಲಿ ನಗರವು ಮಿರಮಿರನೆ ಮಿನುಗಿತು.

ಒಟ್ಟು 146 ಕಿ.ಮೀ ರಸ್ತೆಗಳು, 123 ವೃತ್ತಗಳು, 80 ಪ್ರತಿಕೃತಿಗಳು, ಅಲ್ಲಲ್ಲಿ ಸ್ವಾಗತ ಕಮಾನುಗಳಲ್ಲಿ ಬಹುವರ್ಣದ ದೀಪಗಳು ನಗರ ಕಂಗೊಳಿಸಿತು. ನಾಡಿನ ಪರಂಪರೆ, ಕಲೆ, ಸಂಸ್ಕೃತಿ, ಸಮಾಜ ಸುಧಾರಕರು, ಸರ್ಕಾರದ ಸಾಧನೆ ಹಾಗೂ ಗ್ಯಾರಂಟಿ ಯೋಜನೆಗಳನ್ನು ಬಿಂಬಿಸುವ ಪ್ರತಿಕೃತಿಗಳು ಪ್ರವಾಸಿಗರನ್ನು ಆಕರ್ಷಿಸಿದವು.

ಕುಸುಮಗಳಲ್ಲಿ ಅರಳಿದ ಪ್ರಜಾಪ್ರಭುತ್ವ:

ಕುಪ್ಪಣ್ಣ ಉದ್ಯಾನದಲ್ಲಿ ತೋಟಗಾರಿಕೆ



ಇಲಾಖೆ ಬಣ್ಣ ಬಣ್ಣದ ಸುಗಂಧಭರಿತ ಲಕ್ಷಾಂತರ ಕುಸುಮಗಳಿಂದ ಸಿದ್ದಪಡಿಸಿದ್ದ 'ದಸರಾ ಫಲಪುಷ್ಪ ಪ್ರದರ್ಶನದಲ್ಲಿ' ಪ್ರಜಾಪ್ರಭುತ್ವದ ಕಲಾಕೃತಿಗಳು ಅರಳಿದವು. ಗಾಜಿನ ಮನೆಯಲ್ಲಿ 2 ಲಕ್ಷ ಕೆಂಪು ಗುಲಾಬಿ, 4 ಸಾವಿರ ಸೇವಂತಿಗೆ ಹಾಗೂ 25 ಸಾವಿರ ಗ್ರೀನ್ ಪೋಲಿಯೇಜ್ ಬಳಸಿ ನಿರ್ಮಿಸಿದ 57 ಅಡಿ ಅಗಲ, 20 ಅಡಿ ಉದ್ದ ಹಾಗೂ 37 ಅಡಿ ಎತ್ತರದ ವಿಧಾನಸೌಧದ ಪ್ರತಿಕೃತಿ ಎಲ್ಲರ ಕಣ್ಮನ ಸೆಳೆಯಿತು.

ವಿವಿಧ ಅಲಂಕಾರಿಕ ಪುಷ್ಪಗಳಿಂದ ಸಿಂಗರಿಸಲಾದ 'ನನ್ನ ಮತ ನನ್ನ ಹಕ್ಕು – ನನ್ನ ಹೊಣೆ' ಘೋಷವಾಕ್ಯದ ಮತದಾನ ಜಾಗೃತಿ, ಚಿಕ್ಕಗಡಿಯಾರದ ಪ್ರತಿರೂಪ, ಸಿಂಹಾಸನಾರೂಢ ರಾಜರ್ಷಿ ನಾಲ್ವಡಿ ಕೃಷ್ಣರಾಜ ಒಡೆಯರ್ ಪ್ರತಿಕೃತಿ, ಭಾರತದ ಸಂವಿಧಾನ, ಪ್ರಜಾಪ್ರಭುತ್ವದ ಮೂರು ಸ್ತಂಭಗಳು, ವಿದ್ಯುನ್ಮಾನ ಮತಯಂತ್ರ, ವೃಕ್ಷಮಾತೆ ಸಾಲುಮರದ ತಿಮ್ಮಕ್ಕ ಪ್ರತಿಕೃತಿಗಳು ಪ್ರವಾಸಿಗರನ್ನು ಕೈಬೀಸಿ ಕರೆದವು.

ಜನಮೆಚ್ಚಿದ ದಸರಾ ಕಂಬಳ

ಕರಾವಳಿ ಸಂಸ್ಕೃತಿಯನ್ನು ಮೈಸೂರು ಭಾಗದ ಜನರಿಗೆ ಪರಿಚಯಿಸಲು ಇದೇ ಮೊದಲ ಬಾರಿಗೆ ದಸರಾ ಉತ್ಸವದಲ್ಲಿ ಆಯೋಜಿಸಿದ್ದ "ಜೋಡುಕರೆ ಕಂಬಳವು" ನೋಡುಗರನ್ನು ಸೂಜಿಗಲ್ಲಿನಂತೆ ಸೆಳೆಯಿತು. ಎರಡು ದಿನಗಳ ಕಾಲ ನಡೆದು ಸಂಪನ್ನಗೊಂಡ ಈ ಕರಾವಳಿ ಕ್ರೀಡೆಯನ್ನು ಎರಡು ಲಕ್ಷಕ್ಕೂ ಹೆಚ್ಚು ಜನರು ಕಣ್ತುಂಬಿಕೊಂಡರು.

ಮೈಸೂರು ನಗರದ ಸಾತಗಳ್ಳಿ ರಿಂಗ್ ರಸ್ತೆಯಲ್ಲಿರುವ ವಿಟಿಯು ಕಾಲೇಜಿನ ಬಳಿಯ ಮೈದಾನದಲ್ಲಿ ಅಚ್ಚುಕಟ್ಟಾಗಿ ನಿರ್ಮಿಸಿದ್ದ 'ವಿಜಯ–ದಶಮಿ' ಎಂಬ ಜೋಡುಕರೆಯಲ್ಲಿ ಕೋಣಗಳ ಓಟವು ನೋಡುಗರನ್ನು ರೋಚಕತೆಯ ಕಡಲಲ್ಲಿ ಮೀಯಿಸಿತು. ನೆರದಿದ್ದವರು ಅತ್ಯಂತ ಕುತೂಹಲದಿಂದ ಕಂಬಳವನ್ನು ವೀಕ್ಷಿಸಿದರು.

ಯಾವುದೇ ನೂಕು ನುಗ್ಗಲಿಗೆ

Downloaded From:www.kpscvaani.com



ಅವಕಾಶವಿಲ್ಲದಂತೆ ವ್ಯವಸ್ಥೆ ಮಾಡಲಾಗಿದ್ದ ಸ್ಥಳದಲ್ಲಿ ಜನರು ಕುಟುಂಬದವರೊಡನೆ ಕುಳಿತು ಕಂಬಳ ನೋಡಿದರು. ಕೋಣಗಳೊಟ್ಟಿಗೆ ಫೋಟೊ, ಸೆಲ್ಫಿ ಕ್ಲಿಕ್ಕಿಸಿಕೊಂಡು ಸಂಭ್ರಮಿಸಿದರು. ಜೊತೆಗೆ ಅದೇ ಮೈದಾನದಲ್ಲಿದ್ದ ಆಹಾರ ಮಳಿಗೆಯಲ್ಲಿ ಕರಾವಳಿಯ ತಿನಿಸುಗಳನ್ನು ಚಪ್ಪರಿಸಿದರು.

ಚಮತ್ಕಾರ ಮಾಡಿದ ಏರ್ ಶೋ


ಶರವೇಗದಲ್ಲಿ ಮುನ್ನುಗ್ಗಿ ಬಗೆಬಗೆಯ ಕಸರತ್ತುಗಳಿಂದ ಬಣ್ಣದ ಚಿತ್ತಾರ ಮೂಡಿಸಿ ಅಗಸದಲ್ಲಿ ಚಮತ್ಕಾರ ಮಾಡುವ ಮುಖೇನ ನೋಡುಗರನ್ನು ಬೆರಗುಗೊಳಿದ ಏರ್ ಶೋ (ವೈಮಾನಿಕ ಪ್ರದರ್ಶನ) ದಸರಾ ಸಂಭ್ರಮಕ್ಕೆ ಮೆರಗು ತಂದುಕೊಟ್ಟಿತು.

ಭಾರತೀಯ ವಾಯುಪಡೆಯ ಸೂರ್ಯಕಿರಣ್ ಏರೋಬ್ಯಾಟಿಕ್ ತಂಡವು ಬನ್ನಿಮಂಟಪದ ಪಂಜಿನ ಕವಾಯತು ಮೈದಾನದ ಬಾನಂಗಳದಲ್ಲಿ ಒಂಬತ್ತು ವಿಮಾನಗಳ ನಡೆಸಿದ ಸಾಹಸಮಯ ದೃಶ್ಯಗಳನ್ನು ಕಂಡು ಜನರು ಮೂಕವಿಸ್ಮಿತರಾದರು.

ಅದ್ಭುತ ಕೌಶಲ, ನಿಖರತೆಯೊಂದಿಗೆ ಮೊದಲಿಗೆ ತ್ರಿವರ್ಣ ಧ್ವಜದ ಚಿತ್ತಾರ ಮೂಡಿಸಿ, ನಂತರ ನಾಲ್ಕು ದಿಕ್ಕುಗಳಲ್ಲಿ ಹಾರಾಟ ನಡೆಸಿ ರೋಮಾಂಚನಗೊಳಿಸಿದವು. ಬ್ಯಾರೆಲ್ ರೋಲ್, ಡೈಮಂಡ್ ಫಾರ್ಮೆಶನ್, ಏರೋ ಹೆಡ್, ಲೆವಲ್ ಕ್ರಾಸಿಂಗ್, ಏ ಫಾರ್ಮೇಶನ್ ಸಾಹಸಗಳು ಪ್ರೇಕ್ಷರನ್ನು ತುದಿಗಾಲಿನಲ್ಲಿ ನಿಲ್ಲುವಂತೆ ಮಾಡಿ ಚಮತ್ಕಾರ ಪ್ರದರ್ಶಿಸಿದವು.

ಗಿನ್ನಿಸ್ ವಿಶ್ವದಾಖಲೆಗೆ ಸೇರಿದ ಡ್ರೋನ್ ಶೋ

ವಿನೂತನ ಹಾಗೂ ವಿಶೇಷತೆಯಿಂದ ಕೂಡಿದ ಡ್ರೋನ್ ಪ್ರದರ್ಶನವು ಬಾನಾಂಗಳದಲ್ಲಿ ವಿವಿಧ ಕಲಾಕೃತಿಗಳ ಬೆಳಕಿನ ಚಿತ್ತಾರ ಮೂಡಿಸಿ ಜನಸ್ತೋಮವನ್ನು ರಂಜಿಸಿತು. ಪಂಜಿನ ಕವಾಯತು ಮೈದಾನದಲ್ಲಿ ನಾಲ್ಕು ದಿನ



Downloaded From:www.kpscvaani.com





ನಡೆದ ಡ್ರೋನ್ ಶೋ ಎಲ್ಲರ ಹುಬ್ಬೇರುವಂತೆ ಮಾಡಿತು. ಈ ವೇಳೆ ಬೃಹತ್ ನವಿಲಿನ ಆಕೃತಿಯನ್ನು ರಚಿಸುವ ಮೂಲಕ "ಡ್ರೋನ್ ಮೂಲಕ ಮೂಡಿಸಲಾದ ಪಕ್ಷಿಯೊಂದರ ಅತ್ಯಂತ ದೊಡ್ಡ ಆಕಾಶ ವಿನ್ಯಾಸ" ಎಂಬ ಹೆಗ್ಗಳಿಕೆಗೆ ಪಾತ್ರವಾಗಿ ಗಿನ್ನಿಸ್ ದಾಖಲೆ ಬರೆಯಿತು.

ಆಧುನಿಕ ತಂತ್ರಜ್ಞಾನದ ನೆರವಿನೊಂದಿಗೆ ಸುಮಾರು 3,500 ಡ್ರೋನ್ ಬಳಸಿ ಆಕಾಶದಲ್ಲಿ ಮೂಡಿಬಂದ ಆಕರ್ಷಕ ಆಕೃತಿಗಳನ್ನು ಕಂಡು ನೆರೆದವರ ಕಣ್ಣುಗಳು ಕೌತುಕದಿಂದ ಅರಳಿತು.

ಮುಖ್ಯಮಂತ್ರಿಗಳು ದಸರಾ ಹಬ್ಬದ ಶುಭಾಶಯಗಳನ್ನು ಕೋರುವ ಮೂಲಕ ಆರಂಭವಾದ ಪ್ರದರ್ಶನದಲ್ಲಿ ರಾಷ್ಟ್ರಧ್ವಜ ಹಿಡಿದ ಸೈನಿಕ, ಹಾರುವ ಚಿಟ್ಟೆ ಹಾಗೂ ಬಂಡೆಯ ಮೇಲೆ ಗರ್ಜಿಸುವ ಸಿಂಹದ ಆಕೃತಿಗಳು ಮೂಡಿ ಮನಸೂರೆಗೊಂಡವು.

ಬಳಿಕ ಧೃಡ ಕರ್ನಾಟಕ ಸಂಕಲ್ಪ, ಭಾರತ್ ಜೋಡೋ, ಪ್ರಜಾಸೇವೆ– ಅಡಿಬರಹದಲ್ಲಿ ಮೂಡಿದ ಕರ್ನಾಟಕದ ನಕ್ಷೆಯಲ್ಲಿ ಗ್ಯಾರಂಟಿ ಯೋಜನೆ, ಸುದರ್ಶನ ಚಕ್ರ, ಶಿವತಾಂಡವ, ನಂದಿ ಆಕೃತಿ ಹಾಗೂ ಚಾಮುಂಡೇಶ್ವರಿ ಹೊತ್ತ ಅಂಬಾರಿ ಆನೆಯ ಆಕೃತಿಗಳು ಪ್ರಮುಖ ಆಕರ್ಷಣೆಯಾಗಿದ್ದವು. ಅತ್ತುತ್ಯಮ ಬೆಳಕು ಹಾಗೂ ಸಂಗೀತದ ಸಂಯೋಜನೆಯು ಹೆಚ್ಚಿನ ಮೆರುಗು ನೀಡಿತು.



ಕಣ್ಮನ ಸೆಳೆದ ಜಂಬೂಸವಾರಿ

ಮೈಸೂರು ದಸರಾದ ಪ್ರಮುಖ ಆಕರ್ಷಣೆಯಾದ ಜಂಬೂಸವಾರಿಯ ವಿಜಯದಶಮಿ ಮೆರವಣಿಗೆಯು ಅತ್ಯಂತ ಸಂಭ್ರಮ ಹಾಗೂ ವೈಭವದಿಂದ ಜರುಗಿತು. ದೇಶ, ವಿದೇಶದಿಂದ ಸಾಗರೋಪಾದಿಯಲ್ಲಿ ನೆರೆದಿದ್ದ ಜನಸ್ತೋಮವು ಚಿನ್ನದ ಅಂಬಾರಿಯಲ್ಲಿ ಪ್ರತಿಷ್ಠಾಪಿಸಿದ್ದ ಚಾಮುಂಡಿಶ್ವರಿ ದೇವಿಯನ್ನು ಕಂಡು ಭಾವ ಪರವಶವಾಯಿತು.

ಇದೇ ಮೊದಲ ಬಾರಿಗೆ ಚಿನ್ನದ ಅಂಬಾರಿಯನ್ನೊತ್ತ ಪ್ರಶಾಂತ ಆನೆಯು ರಾಜ ಗಾಂಭೀರ್ಯದಿಂದ ಹೆಜ್ಜೆ ಹಾಕುವ ಮೂಲಕ ತನ್ನ ಸಾಮರ್ಥ್ಯವನ್ನು ಸಾಬೀತುಪಡಿಸಿತು. ಬನ್ನಿಮಂಟಪದವರೆಗೂ ರಸ್ತೆಯ ಎರಡು ಬದಿಯಲ್ಲಿ ತಾಸುಗಟ್ಟಲೆ ಕಾದು ನಿಂತಿದ್ದ ಜನರು ಜಂಬೂಸವಾರಿ ಮೆರವಣಿಗೆ ಸಮೀಪಿಸುತ್ತಿದ್ದಂತೆ ಹರ್ಷೋದ್ಗಾರಗೈದರು. ವಿದೇಶಿಗರು ಬೆರಗುಗಣ್ಣಿನಿಂದ ವೀಕ್ಷಿಸಿ ಮನಸೋತರು.

ನಾಡಿನ ಕಲೆ, ಸಂಸ್ಕೃತಿ, ಸರ್ಕಾರದ ಸಾಧನೆ ಹಾಗೂ ನೆರೆಯ ರಾಜ್ಯದ ಸಂಸ್ಕೃತಿ ಬಿಂಬಿಸುವ ಚಿತ್ತಾಕರ್ಷಕ ಸ್ತಬ್ಧಚಿತ್ರಗಳು ಹಾಗೂ ಕಲಾತಂಡಗಳ

Downloaded From:www.kpscvaani.com



ನೃತ್ಯದ ಸೊಬಗು ಕಂಡು ಜನರು ಚಪ್ಪಾಳೆ ತಟ್ಟಿ, ಶಿಳ್ಳೆ ಹೊಡೆದು ಪ್ರೋತ್ಸಾಹಿಸಿದರು. ಮೆರವಣಿಗೆಯಲ್ಲಿ ಇದೇ ಮೊದಲ ಬಾರಿಗೆ ಕನ್ನಡ ಚಿತ್ರರಂಗದ ತಾರೆಯರು ಹಾಗೂ ಕ್ರೀಡಾ ಸಾಧಕರು ಭಾಗವಹಿಸಿ ಮೆರುಗು ಹೆಚ್ಚಿಸಿದರು.

ದಸರಾ ಮಹೋತ್ಸವದ ಅಂಗವಾಗಿ ಬನ್ನಿಮಂಟಪದಲ್ಲಿ ಆಯೋಜಿಸಿದ್ದ ಪಂಜಿನ ಕವಾಯತು ವೈವಿಧ್ಯಮಯ ಕಾರ್ಯಕ್ರಮಗಳು ನೋಡುಗರಿಗೆ ಮುದ ನೀಡಿದವು. ರಾಜ್ಯಪಾಲರ ಗೌರವ ವಂದನೆ ಸ್ವೀಕಾರ ಹಾಗೂ ಆಕರ್ಷಕ ಪಥಸಂಚಲನದೊಂದಿಗೆ ಆರಂಭವಾಗಿ ಅಶ್ವರೋಹಿ ದಳವು ನಡೆಸಿದ 'ಟೆಂಟ್ ಪೆಗ್ಗಿಂಗ್' ಮೈನವಿರೇಳಿಸಿತು.

ಬಾನಿನಲ್ಲಿ 'ಡ್ರೋನ್ ಶೋ' ಕಂಡು ಜನರು ಪುಳಕಿತರಾದರು. ಶ್ವೇತಾಶ್ವ ಮಿಲಿಟರಿ ಪೊಲೀಸರ ತಂಡವು ನಡೆಸಿಕೊಟ್ಟ ಬೈಕ್ ಸ್ಟಂಟ್ ಸಾಹಸ ಪ್ರದರ್ಶನವು ಬೆರಗುಗೊಳಿಸಿತು. ಪೊಲೀಸ್ ತರಬೇತಿ ಶಾಲೆಯ 300 ಪ್ರಶಿಕ್ಷಣಾರ್ಥಿಗಳು ಪಂಜುಗಳನ್ನು ಹಿಡಿದು ಪೊಲೀಸ್ ಬ್ಯಾಂಡ್ ಸಂಗೀತ ಲಯಕ್ಕೆ ತಕ್ಕಂತೆ ವಿವಿಧ ಅಕ್ಷರಾಕೃತಿಗಳನ್ನು ರಚಿಸಿದರು. ಹೀಗೆ ಸಾಂಸ್ಕೃತಿಕ ವೈಭವದ ದಸರಾ ಮಹೋತ್ಸವವು ವರ್ಣರಂಜಿತ ತೆರೆ ಕಂಡಿತು.

ಇಷ್ಟಲ್ಲದೆ, ದಸರಾ ಮಹೋತ್ಸವ ವೇಳೆಯ ಹನ್ನೊಂದು ದಿನಗಳ ಅವಧಿಯಲ್ಲಿ ಜರುಗಿದ ಜನಪ್ರಿಯ ಕಾರ್ಯಕ್ರಮಗಳಾದ 'ಯುವ ದಸರಾ, ಪುಸ್ತಕ ಮೇಳ, ರೈತ ದಸರಾ, ಆಹಾರ ಮೇಳ, ಮಹಿಳಾ ಮತ್ತು ಮಕ್ಕಳ ದಸರಾ, ಚಿತ್ರಕಲಾ ಸ್ಪರ್ಧೆ, ಸಾಂಸ್ಕೃತಿಕ ದಸರಾ, ಕವಿಗೋಷ್ಠಿ, ಯೋಗ ದಸರಾ, ಕುಸ್ತಿ ಮತ್ತು ಕ್ರೀಡಾ ದಸರಾವು' ಸಭಿಕರ ಮನ ತಣಿಸಿತು.

ದಸರಾ ಎಂಬುದು ಸಡಗರವಷ್ಟೇ ಅಲ್ಲ. ಲಕ್ಷಾಂತರ ಜನರು ಕಣ್ತುಂಬಿಕೊಂಡು ಸಂಭ್ರಮಿಸುವ ಕಾರ್ಯಕ್ರಮಗಳ ಹಿಂದೆ ಅನೇಕರ ಶ್ರಮ ಅಡಗಿರುತ್ತದೆ. ಹಗಲು, ರಾತ್ರಿಯೆನ್ನದೆ ದುಡಿಯುವ ಪೌರಕಾರ್ಮಿಕ ಬಂಧುಗಳು ತಮ್ಮ ಬೆವರು ಹರಿಸಿರುತ್ತಾರೆ.

ಕಂಕುಳಲ್ಲಿ ಕೂಸೊಂದನ್ನು ಹೊತ್ತುಕೊಂಡು ಬಲೂನ್ ಮಾರುವ ತಾಯಿ, ರಸ್ತೆಬದಿಯಲ್ಲಿ ಕಡಲೆಕಾಯಿ, ಸೌತೆಕಾಯಿ, ಚಿರುಮುರಿ ಮಾರಾಟ ಮಾಡುವ ಬಡ ವ್ಯಾಪಾರಿಗಳಿಂದ ಹಿಡಿದೂ ದೊಡ್ಡ ಐಷಾರಾಮಿ ಹೋಟೆಲ್‌ಗಳಿಗೆ ಇದು ವ್ಯಾಪಾರ ಭರಾಟೆಯೂ ಸಮಯವೂ ಹೌದು.

ವರ್ಷಕ್ಕೊಮ್ಮೆ ನಡೆಯುವ ದಸರಾ ಉತ್ಸವವು ಅದೆಷ್ಟೋ ಜನರ ಜೀವನೋಪಾಯವೂ ಹೌದು. ಬಡವರು, ಶ್ರೀಮಂತರು ಹಾಗೂ ಜಾತಿ, ಧರ್ಮದ ಭೇದ ಭಾವವಿಲ್ಲದೆ ಸೌಹಾರ್ದತೆಯಿಂದ ಆಚರಿಸಲ್ಪಡುವ ದಸರಾ ಹಬ್ಬವು ಈ ಬಾರಿ ನಾಡಿನ ಸಾಂಸ್ಕೃತಿಕ ಶ್ರೀಮಂತಿಕೆಯನ್ನು ಸಾರಿ ಸಡಗರ, ಸಂಭ್ರಮದೊಂದಿಗೆ ಸಂಪನ್ನಗೊಂಡಿದೆ



Downloaded From:www.kpscvaani.com

ಚಿತ್ರಬಂಧ 84



ವಿದ್ಯಾ ವಿ. ಹಾಲಭಾವಿ

ಎಡದಿಂದ ಬಲಕ್ಕೆ

1. ರಾಜನನ್ನು ಹೀಗೂ ಕರೆಯುತ್ತಾರೆ (2)
2. ನೇರ ಬೆಳಕನ್ನು ನೀಡುವ ಸೂರ್ಯ (3)
5. ಚಹರೆಯಲ್ಲಿ ಬಂದೂಕಿನಿಂದ ಹಾರಿಸುವ ಸಿಡಿಮದ್ದು ಇದೆ! (2)
6. ಮಳೆಬೆಳೆ ಇರದ ದುರ್ಭಿಕ್ಷದ ಕಾಲ (4)
7. ಕಬ್ಬಿಣದ ಕೆಲಸ ಮಾಡುವವನು (3)
8. ಈತ ಕವಿತೆಗಳನ್ನು ಬರೆಯುವವನು (2)
10. ವಿರಾಗಿ ಹಿಡಿದಿರುವ ಧಾನ್ಯ! (2)
11. ಬಲಿಷ್ಠ ಕರ್ನಾಟಕ ನಿರ್ಮಾಣಕ್ಕೆ ಮಾಡಿರುವ ಸಂಕಲ್ಪಗಳ ಸಂಖ್ಯೆಯನ್ನು ತಿರುಗಿಸಿದರೆ ಕಾಡು ಕಾಣುತ್ತದೆ! (2)
12. ಶತಕದ ಪಥದಲ್ಲಿ ಸಾಗುತ್ತಿರುವ ಸರ್ಕಾರದ ತೇರು (2)
14. ಬೆಂದಕ್ಕಿಕಾಳು ಉಲ್ಟಾ ಕಾಣುತ್ತಿದೆ (3)
16. ನವಸಂಕಲ್ಪದಿಂದ ಬಲಿಷ್ಠವಾಗಲಿರುವ ನಮ್ಮ ನಾಡು (4)
17. ಚಿನ್ನ ಮುಂತಾದ ಲೋಹದ ತಗಡು (2)
18. ಕಣದಲ್ಲಿ ನಡೆದಿರುವ ಮದುವೆ (3)
19. ಪಯಣದಲ್ಲಿ ಕೈಗೊಂಡಿರುವ ಪ್ರತಿಜ್ಞೆ (2)

ಮೇಲಿಂದ ಕೆಳಕ್ಕೆ

1. ಉತ್ಪಾದನಾ ಕ್ಲಸ್ಟರ್ ನಿರ್ಮಾಣಕ್ಕೆ ಸರ್ಕಾರ ಅನುಮತಿ ನೀಡಿರುವ ಊರು (6)
2. ಸರ್ಕಾರದ ಈಯೋಜನೆಯು ಮೂರುಎಕರೆಗಿಂತ ಕಡಿಮೆ ಭೂಮಿ ಹೊಂದಿರುವ ಸಣ್ಣ ರೈತರಿಗೆ ನೆರವಾಗುತ್ತದೆ (5)
3. ರಥದಲ್ಲಿ ಕುಳಿತು ಯುದ್ಧ ಮಾಡುವವನು (3)
4. ತಾವರೆಯಲ್ಲಿಯೇ ನಕ್ಷತ್ರವಿದೆ! (2)
5. ನೂಲುವ ರಾಟೆ (3)
9. ಒಂದು ಕೇಂದ್ರದಲ್ಲಿನೆಲೆಸಿರುವ ಶಕ್ತಿ ಅಧಿಕಾರ ವ್ಯವಸಾಯ ಮುಂತಾದುವನ್ನು ಪ್ರತ್ಯೇಕಿಸಿ ಹಲವು ಕಡೆಗಳಲ್ಲಿ ಹಂಚುವುದು (6)
11. ಹಳೆಯದನ್ನು ಹೊಸದು ಮಾಡುವುದು (5)
13. ಕಾಂತಿ ಅಥವಾ ಬೆರಗು ಇಲ್ಲಿ ಕಾಣುತ್ತಿದೆ (3)
15. ಒಳಗೊಂಡಿರುವುದನ್ನು ಹೀಗೆನ್ನಿ (3)
17. ಹೂವಿನ ಪರಾಗ (2)

ಪಜ್ಜೂ

ಮೇಲಿಂದ ಕೆಳಕ್ಕೆ

1. ಮೊಳಕೆಯೊಡೆಯುವಿಕೆ 2. ಸೂಕ್ಷ್ಮನೀರಾವರಿ 3. ರಥಿಕ
4. ಅಂಚೆ 5. ಚರಕ 9. ಅಕ್ಷರಶಿರಾಚಿ 11.ಸಂಸ್ಕರಣ
13. ಮಿಂಚು 15. ಆವರಿ 17. ರೇಣು

ಎಡದಿಂದ ಬಲಕ್ಕೆ

1. ಮೊಗಲ 2. ಕೆಸರಿ 5. ಚರ 6. ಬರಾಡ 7. ಕಮ್ಮಾರ
8. ಕವಿ 10. ಅವಲಕ್ಕಿ 11. ಪಣ 12. ರಥ 14.ಹುರಿದ
16. ಕರ್ನಾಟಕ 17. ರೂಕಿ 18. ಕೂಟ 19. ಪಣ

–: ಸೂಚನೆ :–

ಲೇಖನಗಳನ್ನು ಬರೆಯುವ ಆಸಕ್ತರು ವಾರ್ತಾ ಜನಪದಕ್ಕೆ ಲೇಖನಗಳನ್ನು ಕಳುಹಿಸಬಹುದು. ಸರ್ಕಾರದ ಯೋಜನೆಗಳು, ಅಭಿವೃದ್ಧಿಗಳು, ಪ್ರಗತಿಪರ ರೈತರ ಯಶೋಗಾಥೆ, ಜನಜಾಗೃತಿ ಮೂಡಿಸುವ ವಿಚಾರಗಳು, ಕರ್ನಾಟಕದ ಪ್ರೇಕ್ಷಣೀಯ ಸ್ಥಳಗಳು, ಕರ್ನಾಟಕದ ಇತಿಹಾಸ ಸಾರುವ ಗತ ವೈಭವಗಳು, ವಿವಿಧ ವಲಯದಲ್ಲಿ ಸಾಧನೆ ಮಾಡಿರುವ ರಾಜ್ಯದ ಸಾಧಕರ ಪರಿಚಯ ಇಂತಹ ವಿಷಯಗಳಿಗೆ ಹೆಚ್ಚಿನ ಆದ್ಯತೆ ನೀಡಲಾಗುವುದು.

ನುಡಿ ತಂತ್ರಾಂಶದಲ್ಲಿ ಟೈಪ್ ಮಾಡಿದ ಕನಿಷ್ಠ 500 ಪದಗಳಿಂದ 750 ಪದಗಳಿಗೆ ಮೀರದಂತೆ ಲೇಖನವನ್ನು ಪೂರಕವಾದ ಭಾಯಾಚಿತ್ರದೊಂದಿಗೆ ನಮ್ಮ ಇ–ಮೇಲ್ ವಿಳಾಸ janapada2008@gmail.comಗೆ ಕಳುಹಿಸಬಹುದು. ಲೇಖನಗಳ ಆಯ್ಕೆ ತೀರ್ಮಾನ ಅಂತಿಮವಾಗಿ ಸಂಪಾದಕ ಮಂಡಳಿಯದಾಗಿರುತ್ತದೆ. ಲೇಖನದ ಜೊತೆಗೆ ತಮ್ಮ ಹೆಸರು ವಿಳಾಸ ಮತ್ತು ದೂರವಾಣಿಯನ್ನು ನಮೂದಿಸತಕ್ಕದ್ದು.

Published by : Hemanth M Nimbalkar, IPS, Commissioner, Department of Information & Public Relation, 17, Varthasoudha, Bhagwan Mahaveer Road, Bangalore - 560 001
Printed at :M/s Rajhans Enterprises, #No.134, 4th Main Road, Industrial Town, Rajajinagar, Bangalore - 560 044.

Downloaded From:www.kpscvaani.com



ಕರ್ನಾಟಕದ ನೂತನ ರಾಜ್ಯಪಾಲರಾಗಿ ಶ್ರೀಮತಿ ಸುಧಾ ಯಾದವ್ ಅವರು ಪ್ರತಿಜ್ಞಾ ವಿಧಿ ಸ್ವೀಕರಿಸಿದರು. ಸಂದರ್ಭದಲ್ಲಿ
ಮುಖ್ಯಮಂತ್ರಿ ಡಿ.ಕೆ.ಶಿವಕುಮಾರ್ ಮತ್ತು ನಿಕಟಪೂರ್ವ ರಾಜ್ಯಪಾಲರಾದ ಥಾವರ್ ಚಂದ್ ಗೆಹ್ಲೋಟ್ ಅವರು ಉಪಸ್ಥಿತರಿದ್ದರು



ಝೆಕ್ ಗಣರಾಜ್ಯದ ಉಪಪ್ರಧಾನಿ ಕಾರೆಲ್ ಹಾವ್ಲಿಕ್ ನೇತೃತ್ವದ ಉನ್ನತ ಮಟ್ಟದ ನಿಯೋಗದೊಂದಿಗೆ ಮುಖ್ಯಮಂತ್ರಿ ಡಿ.ಕೆ.ಶಿವಕುಮಾರ್ ಅವರು
ಉದ್ಯಮಗಳ ಮೇಲೆ ಹೂಡಿಕೆ ಸಂಬಂಧ ವಿಧಾನಸೌಧದಲ್ಲಿ ಅ.14ರಂದು ಮಾತುಕತೆ ನಡೆಸಿದರು.

Downloaded From:www.kpscvaani.com

Regd No.KA/BGGPO/2592/2024-26 Licensed to post without prepayment Licence No. PMG/BG/ WPP-414/2024-26
Published on 27th, Dt. 29th & 30th Posted at (Every month), Bangalore PSO, Mysore Road, Bangalore - 26

